ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ನವೆಂಬರ್ 2020, ಬೆಲೆ ರೂ. 5/-

ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ
ಕಾರ್ತಿಕ ಬ್ರಹ್ಮೋತ್ಸವಗಳು
2020 ನವೆಂಬರ್ 11 ರಿಂದ 19 ರ ವರೆಗೆ



ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ
ಕಾರ್ತಿಕ ಬ್ರಹ್ಮೋತ್ಸವದ
ವಿಶೇಷ ಸಂಚಿಕೆ

**ತಿರುಮಲೆ ತಿರುಪತಿ ದೇವಸ್ಥಾನಗಳು**



# 16-10-2020 ರಿಂದ 24-10-2020 ರವರೆಗೆ ನಡೆದ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವದ ದೃಶ್ಯಮಾಲಿಕೆ!


















# ಭಗವದ್ಗೀತೆ

ಅನಂತ ವಿಜಯಂ ರಾಜಾ

ಕುಂತೀ ಪುತ್ರೋ ಯುಧಿಷ್ಠಿರ ಃ।

ನಕುಲಃ ಸಹದೇವಶ್ಚ

ಸುಘೋಷಮಣಿಪುಷ್ಪಕಾ ॥

ಅಧ್ಯಾಯ - 1, ಶ್ಲೋಕ - 16

## ತಾತ್ಪರ್ಯ

ಕುಂತಿಯ ಹಿರಿಯ ಮಗ, ಅರಸನಾದ ಧರ್ಮರಾಯನು ಅನಂತ ವಿಜಯವನ್ನೂ ನಕುಲನು ಸುಘೋಷವನ್ನೂ ಸಹದೇವನು ಮಣಿ ಪುಷ್ಪಕವನ್ನೂ ಊದಿದರು.

ಮಂಗಳಂ ಮಹಾಲಕ್ಷ್ಮೀ ಜಗನ್ಮಾತೇ ಮಂಗಳಂ ಹರಿಪ್ರಿಯೇ ಜಗನ್ಮಾತೇ
ಮಂಗಳಂ ಪದ್ಮಾಸನಸ್ಥಿತೇ ದೇವಿರಮಾ ಮಂಗಳಂ ಶ್ರೀದೇವಿ ಶ್ರೀಮಾತೇ।

ಅಮೃತವರ್ಷಿಣಿ ಸಂಪತ್ಪ್ರದಾಯಿನಿ ಸಿದ್ಧಿ ಪ್ರದಾಯಿನಿ ಶ್ರೀಮಾತೇ
ಕ್ಷೀರಾಬ್ಧಿ ತನಯೇ ಚಂದ್ರ ಸಹೋದರಿ ಮುಕ್ತಿ ಪ್ರದಾಯಿನಿ ಶ್ರೀ ಮಾತೇ।

ಸೌಭಾಗ್ಯಲಕ್ಷ್ಮಿ ಪದ್ಮಾಲಯೇ ದೇವೀ ಪಾವನ ಮೂರ್ತಿ ಶ್ರೀಮಾತೇ
ಹಿರಣ್ಮಯೀ ದೇವಿ ಮಂಗಳ ಮೂರ್ತಿ ಮಾಧವ ಸನ್ನುತ ಶ್ರೀಮಾತೇ।

ಶ್ರೀರಾಮಚಂದ್ರ ಸಹಧರ್ಮಚಾರಿಣಿ ಸೀತಾದೇವೀ ಶ್ರೀಮಾತೇ
ಶ್ರೀ ಕೃಷ್ಣವಲ್ಲಭೆ ರುಕ್ಮಿಣೀದೇವಿ ಕೊಲ್ಹಾಪುರಿ ನಿಲಯೇ ಶ್ರೀಮಾತೇ।

ಪಾಂಡುರಂಗ ಸನ್ನುತ ಶ್ರೀಮಾತೇ ರುಕ್ಮಿಣಿ ಪಂಡರೀಪುರ ಸ್ಥಿತ ಶ್ರೀಮಾತೇ
ವರಚಿಂತಾಮಣಿ ಶ್ರೀವೆಂಕಟೇಶ ಸನ್ನುತ ಪಾಹಿಮಾಂ ದೇವೀ ಪದ್ಮಾವತಿ ಮಾತೇ ।

- ಸ್ವಯಂಪ್ರಕಾಶ್



**ದಿವ್ಯಾಪಾಂಗಂ ದಿಶಸಿ ಕರುಣೇ ಯೇಷು ಸದ್ದೇಶಿಕಾತ್ಮಾ ಕ್ಷಿಪ್ರಂ ಪ್ರಾಪ್ತಾ ವೃಷಗಿರಿಪತಿಂ  ಕ್ಷತ್ರ ಬಂಧ್ವಾದಯ ಸ್ತೇ।**
**ವಿಶ್ವಾಚಾರ್ಯಾ ವಿಧಿ ಶಿವಮುಖಾಃ ಸ್ವಾಧಿಕಾರೋಪರುದ್ಧಾ ಃ ಮನ್ಯೇ ಮಾತಾ ಜಡ ಇವ ಸುತೇ ವತ್ಸಲಾ ಮಾದೃಶೇ ತ್ವಮ್ ॥೫೦॥**

ಹಿಂದಿನ ಪದ್ಯದಲ್ಲಿ ಶ್ರೀನಿವಾಸನ ಕಟಾಕ್ಷವು ಲಭಿಸಬೇಕಾದರೂ ಆಚಾರ್ಯ ಸ್ವರೂಪಳಾದ ದಯಾದೇವಿಯ ಕಟಾಕ್ಷವೇ ಮುಖ್ಯವೆಂದೂ, ಅದಿಲ್ಲದಿರುವವರಿಗೆ ಮೋಕ್ಷರೂಪವಾದ ಪರಮಪುರುಷಾರ್ಥವು ಲಭಿಸಲಾರದೆಂದೂ, ಬ್ರಹ್ಮಪದವಿಯೇ ಮೊದಲಾದ ಅಧಿಕಾರಗಳಲ್ಲಿಯೇ ಇರಬೇಕಾಗುವುದೆಂದೂ ನಿರೂಪಿಸುತ್ತಾರೆ.

ಓ ದಯಾದೇವಿ! ನಿನ್ನ ಮಹಿಮೆಯು ಅದ್ಭುತವಾದುದು ಏಕೆಂದರೆ, ಮೋಕ್ಷವೆಂಬ ಪರಮಪುರಾಷಾರ್ಥವು ನಿನ್ನ ಕಟಾಕ್ಷವಿಲ್ಲದಿದ್ದರೆ ದೊರೆಯಲಾರದು. ವಾತ್ಸಲ್ಯ ಪೂರ್ಣವಾದ ನಿನ್ನ ಕಟಾಕ್ಷವು ಮಿಂಚಿದರೆ ಸಾಕು... ಅಪುನರಾವರ್ತಿಯಾದುದೂ ಶಾಶ್ವತಸುಖವುಳ್ಳದೂ, ಆನಂದಮಯವಾದುದೂ ಆದ ಮೋಕ್ಷ ಸಾಮ್ರಾಜ್ಯವು ಅತ್ಯಂತ ಪಾಪಿಯಾದವನಿಗೂ ಸುಲಭವಾಗಿ ದೊರಕುವುದು ಅಂತಹ ನಿನ್ನ ಕಟಾಕ್ಷವಿಲ್ಲದಿದ್ದರೆ ಪ್ರಪಂಚದ ಸೃಷ್ಟಿಕರ್ತನೇ ಆದರೂ ಪ್ರಳಯಂಕರನೇ ಆದರೂ ಬ್ರಹ್ಮರುದ್ರಾದಿಗಳು ಅವರವರ ಅಧಿಕಾರದಲ್ಲಿ  ಮಾತ್ರ ಇದ್ದು "ಆ ಬ್ರಹ್ಮಭುವನಾಲ್ಲೊಕಾಃ ಪುನರಾವರ್ತಿ ನೋಽನ ಎಂಬಂತೆಯಾ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬಂತೆಯೂ ಜನನ ಮರಣಾದಿ ಕ್ಲೇಶಭೂಯಿಷ್ಠವಾದ ಮರ್ತ್ಯಲೋಕದಲ್ಲಿ ಇಳಿಯ ಬೇಕಾಗುವುದು. ಆದರೆ, ನನ್ನಂತಹ ಅತ್ಯಂತ ಪಾಪಿಯಾದವನಿಗೆ ಅಂತಹ ಉತ್ತಮ ಪುರುಷಾರ್ಥವು ಲಭಿಸುವುದಾದರೂ ಹೇಗೆ? ಎಂದರೆ, ಲೋಕದಲ್ಲಿ ಅತ್ಯಂತ ಜಡನಾಗಿರುವ ಒಬ್ಬ ಮಗನೂ, ಬುದ್ಧಿವಂತರಾದ ಕೆಲವು ಮಕ್ಕಳೂ ಇದ್ದರೆ ತಾಯಿಯಾದವಳು ಜಡನಾದ ಮಗನಲ್ಲಿ ಹೇಗೆ ವಿಶೇಷವಾದ ವಾತ್ಸಲ್ಯವನ್ನಿಟ್ಟು ಕಾಪಾಡುವಳೋ ಹಾಗೆಯೇ ನಾನು ಪರಮಪಾಪಿಯಾಗಿದ್ದರೂ ನಿನ್ನ ವಾತ್ಸಲ್ಯದಿಂದ ಉತ್ತಮಪುರುಷಾರ್ಥವನ್ನು ಹೊಂದುವೆನೆಂದು ಆಚಾರ್ಯರು ದಯೆಯ ವೈಭವವನ್ನು ಪ್ರಕಾಶಪಡಿಸಿರುತ್ತಾರೆ. ಅಂದರೆ, ಪರಮಕಾರುಣಿಕನೂ, ಪರಮ ಪುರುಷನೂ ಆದ ಶ್ರೀನಿವಾಸನು ಸದಾಚಾರ್ಯನಿಂದ ಪ್ರಪತ್ತಿ ಮಾರ್ಗವನ್ನು ಹೊಂದಿಸಲ್ಪಟ್ಟ ಚೇತನನನ್ನು ಪರಮಕರುಣೆಯಿಂದ ಅನುಗ್ರಹಿಸುವನೆಂದು ಭಾವವು.

ಹೀಗೆ , ದಯಾದೇವಿಯು ಚೇತನನಿಗೆ ಮಾಡುವ ಹಿತಗಳನ್ನು ಈ ದಶಕದಲ್ಲಿ ವರ್ಣಿಸಿ ಪದ್ಧತಿಯಂತೆ ಈ ದಶಕದ ಕೊನೆಯ ಪದ್ಯದಿಂದ ಮುಂದಿನ ದಶಕದಲ್ಲಿ ನಿರೂಪಿಸುವ ಪ್ರಪತ್ತಿ ಮಾರ್ಗವನ್ನು ಅನುಸರಿಸಬೇಕಾದವನು ತಿಳಿಯಬೇಕಾಗಿರುವ ಅಂಶಗಳನ್ನು ಸೂಚಿಸಿರುತ್ತಾರೆ.

ಐದನೆಯ ದಶಕವು ಮುಗಿದುದು

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು


# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ


ಶ್ರೀ ಶಾರ್ವರಿನಾಮ ಸಂವತ್ಸರ ನಿಜಆಶ್ವಯುಜ - ಕಾರ್ತಿಕಮಾಸ ಸಂಚಿಕೆ

ಸಂಪುಟ - 51 ನವೆಂಬರ್ 2020 ಸಂಚಿಕೆ - 6





**ಗೌರವ ಸಂಪಾದಕರು**
ಡಾ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.
**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.
**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.
**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.
**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ದೀಪಾವಳಿಯ ವೈಶಿಷ್ಟ್ಯ | - ಶ್ರೀಮತಿ.ಡಾ॥ ಸಿ.ಎಸ್. ಊರ್ಮಿಳಾ | 7 |
| ಗಜಾರಣ್ಯ ಕ್ಷೇತ್ರ ತಲಕಾಡು ಪಂಚಲಿಂಗ ದರ್ಶನ | - ಶ್ರೀಮತಿ. ಡಾ ॥ ಪಾರಿಜಾತ ಬಿ. ಎಸ್. | 10 |
| ರಮಾ ಏಕಾದಶಿ ವ್ರತ | - ಎಸ್. ವೆಂಕಟರಾಘವನ್ | 14 |
| ಮಧುಗಿರಿಯಶ್ರೀವೆಂಕಟೇಶ್ವರದೇವಾಲಯ | ಡಾ॥ ಕೆಂಗೇರಿ ಚಕ್ರಪಾಣಿ | 18 |
| ಶ್ರೀದೇವಿಯ ಪರಿಕಲ್ಪನೆ | - ಡಾ॥ ಗುರುರಾಜ್ ಪೋಶೆಟ್ಟಿ ಹಳ್ಳಿ | 21 |
| ಭಾಗ್ಯದ ಲಕ್ಷ್ಮೀ ಬಾರಮ್ಮ | -ಶ್ರೀತಿ. ಕೆ. ವಿ. ಪದ್ಮಾವತಿ | 51 |
| ಪದ ಬಂಧ | - ಪಿ. ಜಿ. ಶ್ರೀನಿವಾಸನ್ | 57 |
| ಲೋಕಮಾತಾ ಶ್ರೀ ತುಲಸಿ | - ಶ್ರೀಮತಿ. ಸುಮ ಚಂದ್ರಶೇಖರ್ | 58 |
| ಚಿಪ್ಪಗಿರಿಯ ಚೇತನ ಶ್ರೀ ವಿಜಯದಾಸರು | -ಡಾ ॥ ರಾಮಚಂದ್ರದಾಸ್ ಸಿ.ಜೆ. | 60 |
| ಶ್ರೀ ಯಾಜ್ಞವಲ್ಕ್ಯರು ಮತ್ತು ಶುಕ್ಲ ಯಜುರ್ವೇದ | - ಬಿ. ಆರ್. ಶ್ರೀಕಂಠಯ್ಯ | 64 |
| ಬಾಲತ್ರಿಪುರ ಸುಂದರೀದೇವಿ | - ಎಸ್. ವಾದಿರಾಜ | 69 |
| ಈರೇಳು ಲೋಕದಲು ಸಮರಿಲ್ಲ ಕನಕರಿಗೆ | - ಡಾ॥ ಪ್ರದೀಪಕುಮಾರ ಹೆಬ್ರಿ | 70 |


ಮುಖಚಿತ್ರ - ಶ್ರೀ ಪದ್ಮಾವತೀ ಅಮ್ಮನವರು, ತಿರುಚಾನೂರು
ಹಿಂಬದಿಚಿತ್ರ - ಶ್ರೀ ಪದ್ಮಾವತೀ ಅಮ್ಮನವರ ಪುಷ್ಪಯಾಗ , ತಿರುಚಾನೂರು


ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ಅಲಮೇಲುಮಂಗ ಹರಿಯಂತರಂಗ


ಭೃಗು ಮಹರ್ಷಿ ಶ್ರೀಮಹಾವಿಷ್ಣುವಿನ ವಕ್ಷಃಸ್ಥಳವನ್ನು ಒದ್ದ ಮೇಲೆ ಶ್ರೀಮಹಾವಿಷ್ಣುವು ಕೋಪ ತೋರದೇ ಆ ಭೃಗುಮಹರ್ಷಿಯ ಪಾದವನ್ನು ಒತ್ತಿ ಉಪಚಾರ ಮಾಡುವುದನ್ನು ನೋಡಿದ ಶ್ರೀ ಮಹಾಲಕ್ಷ್ಮಿಯು ತಾನು ನೆಲೆಗೊಂಡಿರುವ ವಕ್ಷಃಸ್ಥಳವನ್ನು ಒದ್ದರೂ ಪ್ರಶಾಂತ ಚಿತ್ತದಿಂದ ವರ್ತಿಸಿದ ಶ್ರೀಮಹಾವಿಷ್ಣುವಿನ ಮೇಲೆ ಕೋಪಗೊಂಡು ಮಹಾಲಕ್ಷ್ಮಿದೇವಿ ವೈಕುಂಠವನ್ನು ಬಿಟ್ಟು ತನ್ನ ತವರು ಮನೆಯಾದ ಕೊಲ್ಲಾಪುರಕ್ಕೆ ಬಂದಳು. ಆಕೆಯನ್ನು ಹುಡುಕುತ್ತಾ ಬಂದ ಶ್ರೀಮನ್ನಾರಾಯಣನು ಭೂವೈಕುಂಠವೆನಿಸಿದ ಶೇಷಾಚಲಕ್ಕೆ ಬಂದನು, ಎಲ್ಲೂ ತನ್ನ ಪ್ರಿಯ ಸಖಿಯನ್ನು ಕಾಣದೇ ಚಡಪಡಿಸುತ್ತಿದ್ದಾಗ ಆಕಾಶವಾಣಿಯ ಮಾತಿನಂತೆ ತಿರುಚಾನೂರಿನಲ್ಲಿ 12 ವರ್ಷಗಳ ಕಾಲ ಘೋರವಾದ ತಪಸ್ಸು ಮಾಡಿದನು, ಆ ತಪಸ್ಸಿಗೆ ಮೆಚ್ಚಿದ ಮಹಾಲಕ್ಷ್ಮಿಯು ಕಾರ್ತೀಕಮಾಸದ ಪಂಚಮಿ, ಉತ್ತರಾಷಾಢ ನಕ್ಷತ್ರದಂದು ಬಂಗಾರದ ಕಮಲದಲ್ಲಿ ಉದ್ಭವಿಸಿದಳು, ಆದ್ದರಿಂದಲೇ ಆಕೆ ಪದ್ಮಾವತಿ ಎನಿಸಿಕೊಂಡಳು. ಅದಕ್ಕೇ ಆ ದಿನ ಪಂಚಮಿ ತೀರ್ಥವೆಂದು ಪ್ರಸಿದ್ಧಿಯಾಗಿದೆ.

ಈ ಕಾರ್ತೀಕ ಮಾಸದಲ್ಲಿ ನಡೆಯುವ ಬ್ರಹ್ಮೋತ್ಸವದಲ್ಲಿ ತಿರುಮಲೇಶನಿಗೆ ಬ್ರಹ್ಮೋತ್ಸದಲ್ಲಿ ನಡೆಯುವ ಎಲ್ಲಾ ವಾಹನಸೇವೆಗಳು ಇಲ್ಲೂ ನಡೆಯುತ್ತವೆ. ಸಪ್ತಗಿರೀಶನಿಗೆ ಗರುಡೋತ್ಸವ ಎಷ್ಟು ಪ್ರಾಮುಖ್ಯತೆ ಪಡೆದಿದೆಯೋ ಹಾಗೇ ಶ್ರೀಪದ್ಮಾವತಿದೇವಿಗೆ ಗಜವಾಹನ ಸೇವೆ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ.

ಕಾರ್ತೀಕ ಬ್ರಹ್ಮೋತ್ಸವದಲ್ಲಿ ತಾಯಿ ಪದ್ಮಾವತಿಯು, ಸಿಂಹವಾಹಿನಿಯಾಗಿ ಭಕ್ತರುಗಳಿಗೆ ಅಭಯವನ್ನು ನೀಡುತ್ತಾ ಹಂಸವಾಹಿನಿಯಾಗಿ ಸರಸ್ವತೀರೂಪದಲ್ಲಿ ವಿದ್ಯಾಲಕ್ಷ್ಮಿಯಾಗಿ ಕಲ್ಪವೃಕ್ಷವಾಹನದಲ್ಲಿ ಭಕ್ತರ ಅಭೀಷ್ಟಗಳನ್ನು ನೆರವೇರಿಸುತ್ತಾ ಸರ್ವಭೂಪಾಲ ವಾಹನದಲ್ಲಿ ಜಗತ್ತನ್ನೆ ಪಾಲಿಸುತ್ತಾ, ಹನುಮಂತ ಗರುಡವಾಹನದಲ್ಲಿ ಭಕ್ತ ವರದೆಯಾಗಿ, ಗಜವಾಹನದಲ್ಲಿ ಅಷ್ಟೈಶ್ವರ್ಯಗಳನ್ನು ಪ್ರಸಾದಿಸುತ್ತಾ, ಈ ರೀತಿ ಒಂಭತ್ತು ದಿನಗಳ ಕಾಲ ವಿವಿಧ ವಾಹನಗಳಲ್ಲಿ ಮೆರವಣಿಗೆಯಲ್ಲಿ ಸಾಗಿ ಬಂದು ಬೇಡಿಬಂದ ಭಕ್ತರ ಕೋರಿಕೆಗಳನ್ನು ಈಡೇರಿಸುತ್ತಾ ಹತ್ತನೆಯ ದಿನ 'ಪಂಚಮಿ ತೀರ್ಥ' ದಂದು ಭಗವದ್ಭಕ್ತರ ಸಕಲ ಕೋರಿಕೆಗಳನ್ನು, ಬೇಡಿಕೆಗಳನ್ನು ಭಗವಂತನಿಗೆ ಅರುಹಿ, ಅವುಗಳನ್ನೆಲ್ಲಾ ಈಡೇರಿಸುವಂತೆ ಒತ್ತಾಯ ಮಾಡುತ್ತಾಳಂತೆ, ತನ್ನ ಅಂತರಂಗವೇ ಆಗಿರುವ ಮನದರಸಿಯ ಮಾತನ್ನು ಆಲಿಸಿ, ಭಕ್ತರ ಎಲ್ಲಾ ಅಭೀಷ್ಟಗಳನ್ನು ಕ್ಷಣಮಾತ್ರದಲ್ಲಿ ಶ್ರೀ ಹರಿಯು ಈಡೇರಿಸುತ್ತಾನೆ. ಅದಕ್ಕೇ ಆಕೆಯನ್ನು ಕರುಣಾಮಯಿ, ವಾತ್ಸಲ್ಯಮಯಿ, ಜಗನ್ಮಾತೆ, ಲೋಕಮಾತೆ, ಎಂದು ದೇವತೆಗಳಾದಿಯಾಗಿ ಎಲ್ಲರೂ ಕೊಂಡಾಡುತ್ತೇವೆ. ಅಂತಹಾ ಶ್ರೀ ಮಹಾಲಕ್ಷ್ಮಿಗೆ , ಜಗದ್ಧಾತ್ರಿಗೆ ಜಯಘೋಷವನ್ನು ಮಾಡೋಣ.

**ಜಯಮಹಾಲಕ್ಷ್ಮೀ ನಿನಗೆ ಜಯತು ಜಯ ಜಯ !**

# ದೀಪಾವಳಿಯ ವೈಶಿಷ್ಟ್ಯ



-ಶ್ರೀಮತಿ. ಡಾ|| ಸಿ.ಎಸ್. ಊರ್ಮಿಳಾ

9380426830

ಸನಾತನ ಧರ್ಮ ಪರಂಪರೆಯ ಪವಿತ್ರನಾಡು ನಮ್ಮ ದೇಶದ ಸಂಸ್ಕೃತಿಯು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ. ಶರನ್ನವರಾತ್ರಿ. ದೀಪಾವಳಿ, ಶಿವರಾತ್ರಿ, ವಿನಾಯಕ ಚೌತಿ, ಶ್ರೀಕೃಷ್ಣ ಜನ್ಮಾಷ್ಟಮಿ ಮುಂತಾದ ಅನೇಕ ಹಬ್ಬ ಹರಿದಿನಗಳು ತಮ್ಮದೇ ಆದ ಐತಿಹಾಸಿಕ, ಪೌರಾಣಿಕ, ಚಾರಿತ್ರಿಕ ಅಂಶ ಗಳನ್ನು ಒಳಗೊಂಡಿವೆ. ಅವುಗಳಲ್ಲಿ ದೀಪಾವಳಿಯನ್ನು ಮಾತ್ರ ಇಡೀ ಭಾರತದಲ್ಲಿ ಅಷ್ಟೇ ಏಕೆ ವಿಶ್ವದೆಲ್ಲೆಡೆ ಆಚರಿಸುತ್ತಾರೆ. ಅದರ ಬಗ್ಗೆ ನಾವು ಸ್ವಲ್ಪ ತಿಳಿಯೋಣ.

ಭಾರತ ವರ್ಷದಲ್ಲಿ ಹಿಂದೂ ಧರ್ಮಿಯರೆಲ್ಲರೂ ಕಾತರದಿಂದ ಅತ್ಯಂತ ಉತ್ಸಾಹದಿಂದ ಆಚರಿಸುವ ಹಬ್ಬ ವೆಂದರೆ ದೀಪಾವಳಿ ಆ ಸೇತು ಹಿಮಾಚಲದವರೆಗೂ ಆನಂದ ತುಂದಿಲರಾಗಿ ಆಚರಿಸುವ ಹಬ್ಬದೀಪಾವಳಿ ದೀಪಗಳ ಸಾಲು ದೀಪಾವಳಿ ಉತ್ತರ ಭಾರತದಲ್ಲಂತೂ ನೂತನ ವರ್ಷಾಚರಣೆಯ ದಿನವಾಗಿ ದೀಪಾವಳಿ ಹಬ್ಬವು ಜನಮನದಲ್ಲಿ ಸಂಚಲನವನ್ನುಂಟು ಮಾಡುತ್ತದೆ.

ಕರ್ನಾಟಕದಲ್ಲಿ ಆಶ್ವಯುಜ ಬಹುಳ ತ್ರಯೋದಶಿ ಯಿಂದ ಹಬ್ಬದ ಆಚರಣೆ ಆರಂಭವಾಗಿ ಬಲಿಪಾಡ್ಯಮಿ ಯವರೆಗೆ ಸಂಭ್ರಮದಿಂದ ಆಚರಿಸಲ್ಪಡುತ್ತದೆ. ನರಕ ಚತುದರ್ಶಿಯು ಹಿಂದೂ ಸಮಾಜದಲ್ಲಿ ಅತ್ಯಂತ ಪವಿತ್ರವಾದ ದಿನವಾಗಿ ಆಚರಿಸಲ್ಪಡುತ್ತದೆ. ಪುರಾಣದಲ್ಲಿ ಉಲ್ಲೇಖಿಸ ಲ್ಪಟ್ಟಂತೆ ನರಕಾಸುರನ ಸೆರೆಮನೆಯಲ್ಲಿ ಬಂಧಿತರಾಗಿದ್ದ ಹದಿನಾರು ಸಾವಿರ ಕನ್ಯಾಮಣಿಗಳನ್ನು ಭಗವಾನ್ ಶ್ರೀ ಕೃಷ್ಣನು ನರಕಾಸುರನನ್ನು ಸಂಹರಿಸಿ ಬಿಡುಗಡೆ ಮಾಡಿದ. ಆ ಕನ್ಯಾಮಣಿಗಳು ಬಂಧವಿಮೋಚನೆಗೊಂಡ ದಿನವಾಗಿ ನರಕ ಚತುರ್ದಶಿಯೆಂಬ ಹೆಸರು ಬರಲು ಕಾರಣವಾಯಿತು.

ನರಕಾಸುರನ ವಧೆಯಾದ ನಂತರ ಆ ಸಕಲ ಕನ್ಯಾಮಣಿಗಳನ್ನು ಶ್ರೀಕೃಷ್ಣನು ಹದಿನಾರು ಸಾವಿರ ರೂಪಿ ನಲ್ಲಿ ವರಿಸಿ ಅವರಿಗೆ ಸೌಭಾಗ್ಯವನ್ನು ಕರುಣಿಸಿದನೆಂಬ ಉಲ್ಲೇಖವಿದೆ. ಆ ಸಂತೋಷ ಸಂಭ್ರಮಗಳು ಮುಗಿಲು ಮುಟ್ಟುವ ಸಂಕೇತವಾಗಿ ಸುಡುಮದ್ದುಗಳನ್ನು ಸುಡುವ ಪದ್ಧತಿ ಇಂದಿಗೂ ಇದೆ. ಆ ಹದಿನಾರು ಸಾವಿರ ಕನ್ಯೆಯರ ಮುಗುಳನಗೆಯ ಸಂಕೇತವೇ ಹೂವಿನಕುಂಡ ಅಸುರ ನನ್ನು ಸಂಹಾರ ಮಾಡಿದ ವಿಷ್ಣುವಿನ ನೆನಪಿನಲ್ಲಿ ವಿಷ್ಣುಚಕ್ರ, ಭೂಚಕ್ರಗಳು ಹೊತ್ತಿಸಲ್ಪಡುತ್ತವೆ. ಆದರೆ ಪಟಾಕಿ ಹಚ್ಚುವುದು ಹೆಚ್ಚಾಗಿರಕೂಡದು ಪರಿಸರ ಸಂರಕ್ಷಣೆಯೆಂಬುದು ಪ್ರತಿ ಯೊಬ್ಬರ ಜವಾಬ್ದಾರಿಯಾಗಿದೆ ಅಲ್ಲವೇ? ಅತಿ ಸರ್ವತ್ರ ವರ್ಜಯೇತ್' - ಎಂಬ ಮಾತು ಸದಾ ನಮ್ಮ ನೆನಪಿನಲ್ಲಿರಲಿ ಈ ನರಕ ಚತುರ್ದಶಿಯ ಮುನ್ನಾ ದಿನ ಸಾಯಂಕಾಲ ನೀರಿನ ಪಾತ್ರೆ ಹಂಡೆ ಅಥವಾ ಇಂದಿನ ಕಾಲಕ್ಕೆ ಅನುಗುಣ

ವಿದ್ಯುತ್ ಉಪಕರಣಗಳನ್ನು ಹೊಂದಿದ ಪಾತ್ರೆಗಳನ್ನು ತೊಳೆದು ರಂಗವಳ್ಳಿಯನ್ನಿಟ್ಟು ಆ ಪಾತ್ರೆಗಳನ್ನು ಅರಿಶಿನ ಕುಂಕುಮ ಪುಷ್ಪಗಳಿಂದ ಅಲಂಕರಿಸಿ ಮಾರನೆಯ ದಿನದ ಅಭ್ಯಂಜನ ಸ್ನಾನಕ್ಕಾಗಿ ಮನೆಯ ಮಂದಿಯರೆಲ್ಲರೂ ಸಂಭ್ರಮದಿಂದ ಸಿದ್ಧರಾಗಿರುತ್ತಾರೆ. ಈ ನೀರು ತುಂಬುವ ಹಬ್ಬದ ಸಂಭ್ರಮವನ್ನು ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿಯ ಜನರು ಕೊಂಡಾಡುವ ಸಂಭ್ರಮವನ್ನು ನೋಡಲು ನಮ್ಮ ಎರಡು ಕಣ್ಣುಗಳು ಸಾಲದು.

ನರಕ ಚತುರ್ದಶಿಯಂದು ಮನೆಯ ಚಿಕ್ಕ ಮಕ್ಕಳಿಂದ ಆರಂಭಿಸಿ ಹಿರಿಯರವರೆಗೆ ಸಂಭ್ರಮವೋ ಸಂಭ್ರಮ ಎಲ್ಲರೂ ಅಂದು ಬೆಳಗ್ಗೆ ನಾಲ್ಕು ಗಂಟೆಯಲ್ಲಿಯೇ ಎದ್ದು (ಮಕ್ಕಳು ಇನ್ನೂ ಮುಂಚೆ 2-3 ಘಂಟೆಗೆ ಏಳುತ್ತಾರೆ.) ಅಭ್ಯಂಜನಕ್ಕೆ ಸಿದ್ಧರಾಗಬೇಕು. ಮನೆಯ ಹಿರಿಯ ಮಹಿಳೆ ಒಬ್ಬೊಬ್ಬರನ್ನೇ ದೇವರ ಮುಂದೆ ಕೂರಿಸಿ ಎಳ್ಳೆಣ್ಣೆ ಹಾಗೂ ಗರಿಕೆಯಿಂದ ಅಥವಾ ಹೂವಿನ ದಳದಿಂದ ಎಣ್ಣೆ ಶಾಸ್ತ್ರ ಮಾಡುವ ಪದ್ಧತಿ ಇದೆ. ಎಣ್ಣೆ ಶಾಸ್ತ್ರಕ್ಕೆ ಮುಂಚೆ ಪ್ರತಿಯೊಬ್ಬರೂ ದೇವರಿಗೆ ಹಾಗೂ ಹಿರಿಯರಿಗೆ ನಮಸ್ಕರಿಸಿ ಎಣ್ಣೆ ಶಾಸ್ತ್ರಕ್ಕೆ ಸಿದ್ಧರಾಗಬೇಕು. ಈ ಕ್ರಮದ ಈ ಪದ್ಧತಿಯ ಹಿನ್ನೆಲೆಯಲ್ಲಿ ಸಾಕ್ಷಾತ್ ಶ್ರೀಮಹಾಲಕ್ಷ್ಮಿಯೇ ಶ್ರೀಮನ್ನಾರಾಯಣನಿಗೆ ಅಭ್ಯಂಜನ ಮಾಡಿಸುತ್ತಾಳೆ ಎಂದು ಭಾವಿಸಿ ಹಿರಿಯರಿಂದ ತೈಲ ಲೇಪಿಸಿಕೊಳ್ಳಬೇಕು. ಆಯುರಾರೋಗ್ಯ ಸಂಪತ್ತುಗಳು ಲಭ್ಯವಾಗಲೆಂದು ಲಕ್ಷ್ಮಿಯು ಆ ತೈಲದಲ್ಲಿ ಇರುವಳೆಂದು ಭಾವಿಸಿ ಹಿರಿಯರಿಂದ ತೈಲ ಲೇಪಿಸಿಕೊಳ್ಳಬೇಕು. ಮೊಟ್ಟ ಮೊದಲು ಎಣ್ಣೆಯ ಪಾತ್ರೆಯಲ್ಲಿ ಗರಿಕೆಯನ್ನು ಅದ್ದಿ ಮೂರು ಸಲ ಭೂಮಿಗೂ ಮೂರು ಸಲ ಶಿರಕ್ಕೂ ಲೇಪಿಸಿಕೊಳ್ಳಬೇಕು.ನಂತರ ಸರ್ವಾಂಗಗಳಲ್ಲಿಯೂ ಎಣ್ಣೆಶಾಸ್ತ್ರ ಮಾಡಿಸಿ ಕೊಳ್ಳಬೇಕು.

ಆ ಸಂದರ್ಭದಲ್ಲಿ ಚಿರಂಜೀವಿಗಳನ್ನು ಸ್ಮರಿಸಿಕೊಳ್ಳಬೇಕು.

ಅಶ್ವತ್ಥಾಮೋ ಬಲಿರ್ವ್ಯಾಸೋ ಹನುಮಾಂಶ್ಚ ವಿಭೀಷಣಃ।
ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಂಜೀವಿನಃ ॥

ಅಭ್ಯಂಜನ ಸ್ನಾನದ ಬಗ್ಗೆ ಅಷ್ಟಾಂಗ ಹೃದಯ ಯೋಗಗ್ರಂಥದಲ್ಲಿ ಉಲ್ಲೇಖಿಸಿದೆ. ಈ ಅಭ್ಯಂಜನವು ಮುಪ್ಪನ್ನು ಆಯಾಸವನ್ನು, ಪಾಪಗಳನ್ನು ಪರಿಹರಿಸಿ ನೇತ್ರ ದೃಷ್ಟಿಯನ್ನು ಆಯಾಸ್ಸನ್ನು ನೀಡುತ್ತದೆ. ಇದು ವಾತ, ಪಿತ್ತ, ಕಫಗಳನ್ನು ನಿವಾರಿಸಿ ದೇಹಬಲ ಸುಖನಿದ್ರೆ ಹರ್ಷವನ್ನು ನೀಡುತ್ತದೆ. ಈ ಅಭ್ಯಂಜನ ಸ್ನಾನದ ನಂತರ ಎಲ್ಲರೂ ಹೊಸಬಟ್ಟೆಗಳನ್ನು ಧರಿಸುತ್ತಾರೆ. ಸಿಹಿಯನ್ನು ಹಂಚುತ್ತಾರೆ. ಮನೆಮಂದಿಗೂ ನೆರೆಮನೆಗಳಿಗೂ , ಬಂಧು ಬಳಗದವರಿಗೂ ಸಿಹಿ ಹಂಚುತ್ತಾರೆ. ನರಕಚತುರ್ದಶಿ ಜ್ಞಾನ ವಿಜಯದ ಸಂಕೇತದ ದೀಪಾವಳಿ ದೀಪಾವಳಿ ಅಮಾವಾಸ್ಯೆ ಭಗವಂತನೆಡೆಗೆ ಕೈ ತೋರಿಸುವುದು ಭಕ್ತಿ ಸಂಕೇತ. ಬಲಿಪಾಡ್ಯಮಿಯು ಪರಮಾತ್ಮನಿಗೆ ತನ್ನ ಮಸ್ತಕದಲ್ಲಿ ಕಾಲು ಇಡು ಎಂದು ಪ್ರಸ್ಥಾನ ತೋರಿಸಿದ ಬಲಿಯ ದಾನದ ವಿರಕ್ತಿಯ ಸಂಕೇತ. ದೀಪಾವಳಿಯ ಹಬ್ಬದಂದು ಮನೆಗಳಲ್ಲೆವೂ ದೀಪಗಳಿಂದ ಬೆಳಗಿಸುತ್ತಾರೆ.

ಈ ಮೂರು ದಿನಗಳಲ್ಲಿ ಭಾರತದ ಕನ್ಯಾಕುಮಾರಿಯಿಂದ ಹಿಡಿದು ಹಿಮಾಚಲದವರೆಗೆ ಸಂಭ್ರಮದ ದೀಪಾವಳಿಯು ಪುಟಿಯುತ್ತದೆ.

ದೀಪಾವಳಿ ಎಂದರೆ ಮಗಳು ಅಳಿಯಂದಿರನ್ನು ಆಹ್ವಾನಿಸಿ ಸಡಗರ ಸಂಭ್ರಮವನ್ನು ಆಚರಿಸುವುದೇ ದೀಪಾವಳಿಯ ಹಬ್ಬಕ್ಕೆ ಸೊಗಸು ದೀಪಾವಳಿಯ ಸಮಸ್ತ ವ್ಯಾಪಾರೀ ಸಹೋದರರಿಗೆ ಸಡಗರದ ಹಬ್ಬ ಈ ದಿನವನ್ನೇ ನೂತನ ವರ್ಷವೆಂದು ಧನಲಕ್ಷ್ಮಿ ಪೂಜೆಯೊಂದಿಗೆ ಆಚರಿಸುವ ಸಂಪ್ರದಾಯವಿದೆ. ಮಹಾರಾಷ್ಟ್ರದಲ್ಲಿ ದೀಪಾವಳಿಂದು 'ತಮಾಷಾ' ಎಂಬ ನೃತ್ಯ ನಾಟಕವನ್ನು ಅಭಿನಯಿಸಿ ಆಚರಿಸುತ್ತಾರೆ. ಮಾರ ವಾಡಿಗಳು, ಜೈನರು,



ಗುಜರಾತಿಯರು, ಈ ದೀಪಾವಳಿ ಹಬ್ಬವನ್ನು ಆಚರಿಸುವುದನ್ನು ನೋಡುವುದೇ ಚೆಂದ. ಅವರ ಆಚರಣೆಯಂತೆ ಹಿಂದಿನ ವರ್ಷದ ಎಲ್ಲಾ ಬಾಕಿ ಲೆಕ್ಕಾ ಚಾರವೂ ಚುಕ್ತಾ ಆಗಲೇಬೇಕು. ಈ ದೀಪಾವಳಿ ಇಂದು ಕೇವಲ ಭಾರತಕ್ಕೆ ಮಾತ್ರ ಸೀಮಿತ ವಲ್ಲ. ವಿಶ್ವದಾದ್ಯಂತ ಸಂಭ್ರ ಮಿಸುವ ಹಬ್ಬವಾಗಿದೆ.ನಮ್ಮ ಜನ ಭಾರತೀಯರು ವಿಶ್ವದೆಲ್ಲೆಡೆ ನಮ್ಮ ಸಂಸ್ಕೃತಿ ಸಂಕೇತ ದೀಪಾವಳಿಯ ಹಬ್ಬದ ಮೂಲಕ ಹರಡಿದ್ದಾರೆ. ಈ ಹಬ್ಬವನ್ನು ಅಮೇರಿಕಾ, ಇಂಗ್ಲೆಂಡ್, ಥೈಲಾಂಡ್ ಕಾಂಬೋಡಿಯ, ವಿಯಟ್ನಾಂ ಮಲೇಷಿಯಾ ಸಿಂಗಪುರ್, ಬರ್ಮಾ ಆಸ್ಟ್ರೇಲಿಯಾ ಮುಂತಾದ ಅನೇಕ ರಾಷ್ಟ್ರಗಳಲ್ಲಿ ಆಚರಿಸುತ್ತಾರೆ. ವಿಭಿನ್ನ ಮತೀಯರು ಇತ್ತೀಚೆಗೆ ದೀಪಾವಳಿ ಹಬ್ಬದಲ್ಲಿ ಪಾಲ್ಗೊಳ್ಳು



ತ್ತಿರುವುದು ನಮ್ಮ ಹಿಂದೂಧರ್ಮಕ್ಕೆ ಸಂದು ಅಪೂರ್ವ ಜಯ ವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಸಹಬಾಳ್ವೆ ಸಮರಸ ಜೀವನದ ಸಂಕೇತ ದೀಪಾವಳಿ. ನಾವೆಲ್ಲಾ ಸಂಭ್ರಮದಿಂದ ದೀಪಾವಳಿಯನ್ನು ಆಚರಿಸೋಣ. ಸಹಬಾಳ್ವೆ ಸೋದರತ್ವವೇ ಈ ದೀಪಾವಳಿ ಬೆಳಕಿನ ಹಬ್ಬವು ಜಗತ್ತಿಗೆ ದ್ಯೋತಕವಾಗಿ ರಲಿ. ಜ್ಯೋತಿ ಬೆಳಗಲಿ... ಮನೆಯ ಮನದ ಅಂಧಕಾರವು ತೊಲಗಲಿ. ಇದೇ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ ನಮ್ಮ ಗುರಿಯಾಗಿರಲಿ.

**ಶ್ರೀ ಕೃಷ್ಣ ವಂದೇ ಜಗದ್ಗುರುಂ**



**ಅಲಮೇಲುಮಂಗಮ್ಮನವರಿಗೆ ನೈವೇದ್ಯಗಳು:**

ಶ್ರೀನಿವಾಸ ಪರಂಧಾಮನ ಪಟ್ಟದರಾಣಿ ಪದ್ಮಾವತಿಗೆ ಮುಂಜಾನೆ ಸುಪ್ರಭಾತ ಸಮಯದಲ್ಲಿ ಹಾಲು, ಹಣ್ಣು ನೈವೇದ್ಯ ಮಾಡುತ್ತಾರೆ.

ಪ್ರತಿದಿನ ಮೂರು ಹೊತ್ತು ಪುಳಿಯೋಗರೆ, ಖಾರ ಪೊಂಗಲ್, ಸಿಹಿ ಪೊಂಗಲ್, ಮೊಸರನ್ನ ನೈವೇದ್ಯ ಮಾಡುವುದರ ಜೊತೆಗೆ ಪ್ರತ್ಯೇಕವಾಗಿ ಮೊದಲ ನಿವೇದನೆಯಲ್ಲಿ ಸಿರಾ (ರವೆ ಕೇಸರಿ) ನೈವೇದ್ಯ ಮಾಡುತ್ತಾರೆ.ನಿತ್ಯವು ಜರುಗುವ ಶ್ರೀ ಪದ್ಮಾವತಿ ಪರಿಣಯೋತ್ಸವ ವೇಳೆಯಲ್ಲಿ ಕಜ್ಜಾಯಗಳು, ಸಕ್ಕರೆಪೊಂಗಲ್, ಪುಳಿಯೋಗರೆಗಳು ತಪ್ಪದೆ ಇರುತ್ತವೆ.

ಪ್ರತಿ ಸಾಯಂಕಾಲ ನಡೆಯುವ ಊಂಜಲ್ ಸೇವೆಯಲ್ಲಿ ಸಿರುಲತೆಗೆ ಕಡಲೆಕಾಳು (ಸುಂಡಲ್) ನಿವೇದಿಸುತ್ತಾರೆ.

ರಾತ್ರಿ ಏಕಾಂತಸೇವೆಯ ಸಮಯದಲ್ಲಿ ಉಗುರು ಬೆಚ್ಚಗಿನ ಹಾಲು, ಪಂಚಕಜ್ಜಾಯಗಳನ್ನು ನಿವೇದಿಸಲಾಗುತ್ತದೆ.ಪ್ರತಿ ಗುರುವಾರ ತಿರುಪ್ಪಾವಡ ಸೇವೆಯಲ್ಲಿ ಪುಳಿಯೋಗರೆಗಳ ಜೊತೆ ಪ್ರತ್ಯೇಕವಾಗಿ ಜಿಲೇಬಿಗಳನ್ನು ನಿವೇದಿಸಲಾಗುತ್ತದೆ.

ಪ್ರತಿ ಶುಕ್ರವಾರ ಮಧ್ಯಾಹ್ನದ ಸಮಯದಲ್ಲಿ ಪದ್ಮಾವತಿಗೆ ಪ್ರತ್ಯೇಕವಾಗಿ ಪಾಯಸವನ್ನು ನೈವೇದ್ಯ ಮಾಡುತ್ತಾರೆ. ಶುಕ್ರವಾರದಂದು ತೋಟದಲ್ಲಿ ಆ ಮಧ್ಯಾಹ್ನ ಅಭಿಷೇಕದ ನಂತರ ಪಾನಕ, ಖಾರಪೊಂಗಲ್ ಮತ್ತು ಅಲಂಕಾರ ಆದ ನಂತರ ಪುಳಿಯೋಗರೆ, ದೋಸೆ, ಸುಂಡಲ್ ನೈವೇದ್ಯ ಮಾಡಲಾಗುತ್ತದೆ.



# ಗಜಾರಣ್ಯ ಕ್ಷೇತ್ರ ತಲಕಾಡು ಪಂಚಲಿಂಗ ದರ್ಶನ

- ಡಾ || ಪಾರಿಜಾತ ಬಿ.ಎಸ್.

ಕಾರ್ತೀಕ ಮಾಸವು ತ್ರಿಮೂರ್ತಿಗಳಿಗೆ ಅತಿ ಪ್ರಿಯವಾದುದೆಂದು ಹೇಳಲಾಗುತ್ತದೆ. ಕಾರ್ತೀಕ ಮಾಸದ ವಿಶೇಷತೆಗೆ ಹಲವಾರು ಕಾರಣಗಳಿವೆ. ಕಾರ್ತೀಕವೆಂಬುದು ನಕ್ಷತ್ರವಾಗಿದ್ದು, ಈ ಮಾಸದಲ್ಲಿ ಚಂದ್ರನಿಗೆ ಈ ನಕ್ಷತ್ರವು ಹತ್ತಿರದಲ್ಲಿರುವ ಕಾರಣ ಈ ಮಾಸವನ್ನು ಕಾರ್ತೀಕವೆಂದು ಕರೆಯಲಾಗಿದೆಯೆಂದು ಹೇಳಲಾಗುತ್ತದೆ. ಈ ಮಾಸದ ಅಧಿಪತಿ ಶಿವನಾಗಿದ್ದಾನೆ.ಅಂತೆಯೇ ಕಾರ್ತೀಕ ಮಾಸದಲ್ಲಿ ಶಿವ ದರ್ಶನ, ಶಿವಾರಾಧನೆ, ದೀಪೋತ್ಸವ ಹೆಚ್ಚಿನ ಫಲ ನೀಡುತ್ತದೆಂಬುದಕ್ಕೇ ಅನೇಕ ಉದಾಹರಣೆಗಳಿವೆ. ಹಗಲು ಕಡಿಮೆ, ರಾತ್ರಿ ದೀರ್ಘವಾಗಿರುವ ಈ ಮಾಸವು ದೀಪಾರಾಧನೆಯ ಮಾಸವೆನಿಸಿದೆ. ಕಾರ್ತೀಕ ಮಾಸದಲ್ಲಿ ಗೋದಾನ, ಭೂದಾನ, ಗೃಹದಾನ, ಕನ್ಯಾದಾನ, ವೃಷ ಭೋತ್ಸರ್ಜನೆಗಳ ಫಲದಿಂದ ಮಹಾ ಪುಣ್ಯಶಾಲಿಗಳಾಗುವರು ಮತ್ತು ಮೋಕ್ಷ ಹೊಂದುವರೆಂಬ ನಂಬಿಕೆಯಿದೆ. ಈ ಮಾಸದಲ್ಲಿ ಸೂರ್ಯನು ತುಲಾರಾಶಿಯಲ್ಲಿರುವಾಗ ಮಾಸಾದ್ಯಂತ ತೀರ್ಥಸ್ನಾನ, ಹರಿಹರ ಪೂಜೆ, ಪುರಾಣ ಶ್ರವಣ, ದೀಪಾರಾಧನೆ, ದೀಪದಾನ ಪೂರೈಸುವವರು ಜೀವಿತಾವಧಿಯ ನಂತರ ಶಿವ ಸನ್ನಿಧಿಯನ್ನಾಗಲೀ ಶ್ರೀ ವಿಷ್ಣು ಸನ್ನಿಧಿಯನ್ನಾಗಲೀ ಸೇರುವರೆಂಬ ನಂಬಿಕೆ ಇದೆ. ಇದೇ ಮಾಸದ ಈ ಕಾಲದಲ್ಲಿ ಲಿಂಗ ರೂಪಿಯಾಗಿ ವಿವಿಧ ನಾಮಾಂಕಿತ ಶಿವನ ಸಾನಿಧ್ಯವಿರುವ ತಲಕಾಡಿನ ಪಂಚಲಿಂಗ ದರ್ಶನ ಉತ್ತಮ ಪುಣ್ಯಫಲ ಪ್ರಾಪ್ತಿಗೆ ಕಾರಣವಾಗುವುದೆಂದು ಹೇಳಲಾಗುತ್ತದೆ.

### ಶ್ರೀ ಕ್ಷೇತ್ರ ಪರಿಚಯ :

ಕರ್ನಾಟಕ ರಾಜ್ಯದ, ಮೈಸೂರು ಜಿಲ್ಲೆಯ , ತಿರುಮಕೂಡಲು ನರಸೀಪುರ ತಾಲ್ಲೂಕಿನ ತಾಯಿ ಕಾವೇರಿಯ ಮಡಿಲಲ್ಲಿರುವುದೇ ತಲಕಾಡು ಕ್ಷೇತ್ರ. ಪವಿತ್ರವಾದ ಈ ಕ್ಷೇತ್ರವು ಪಂಚಲಿಂಗ ಸ್ವರೂಪಿಯಾಗಿ ನೆಲೆಸಿರುವ ಪರಶಿವನ ಸಾನಿಧ್ಯವಿರುವ ತಾಣವಾಗಿದೆ. ಕಾವೇರಿ ನದಿಯ ದಡದಲ್ಲಿದ್ದು, ಮರಳುಗಾಡಿನಂತೆ ಮರಳಿನ ರಾಶಿಯ ನಡುವೆ ವಿಜ್ಞಾನ ಕ್ಷೇತ್ರಕ್ಕೆ ಸವಾಲಾಗಿ, ಧಾರ್ಮಿಕ ನಂಬಿಕೆಗೆ ಸಾಕ್ಷಿಯಾದ ಪವಿತ್ರ ಸ್ಥಳವಾಗಿದೆ. ಕಾವೇರಿಯ ದಡದ ಮೇಲಿನ ಭಾಗವು ಸುಮಾರು ೩.ಮೀ. ದೂರದವರೆಗೂ ಮರಳಿನಿಂದಾವೃತವಾಗಿದೆ. ಸುಂದರ ಪ್ರಕೃತಿಯ ನಡುವಿನ ಈ ಕ್ಷೇತ್ರವು ಪೌರಾಣಿಕ ಹಾಗೂ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ.ಗೋಕರ್ಣವೆಂಬ ಪವಿತ್ರ ತೀರ್ಥವೂ ಇಲ್ಲಿದೆ, ಹಿಂದೆ ಇಲ್ಲಿ ಸುಮಾರು ೩೦ ದೇಗುಲಗಳಿದ್ದು ಕಾಲಾಂತರದಲ್ಲಿ ಬಹಳಷ್ಟು ಮರಳಿನಿಂದ ಮುಚ್ಚಿ ಹೋಗಿವೆ. ಆದರೆ ಪ್ರಮುಖ ದೇಗುಲಗಳನ್ನು ಆಗಾಗ ಸ್ವಚ್ಛಗೊಳಿಸಿ,



ಮರಳನ್ನು ತೆಗೆದು ಪೂಜಾರಾಧನೆ ಕೈಗೊಳ್ಳಲಾಗುತ್ತಿದೆ. ಕಾರ್ತೀಕ ಮಾಸದ ಪಂಚಲಿಂಗ ದರ್ಶನ ಉತ್ಸವ ತಲಕಾಡಿನಲ್ಲಿ ವೈಭವದಿಂದ ನಡೆಯುತ್ತದೆ. ಈ ದರ್ಶನವು ೩,೫,೭ ಮತ್ತು ಹನ್ನೆರಡು ವರ್ಷಕ್ಕೆ ಅಥವಾ ಹದಿಮೂರು ವರ್ಷ ಗಳಿಗಾದರೂ ಆಗಬಹುದು. ಕಾರ್ತೀಕ ಮಾಸದಲ್ಲಿ ಸೂರ್ಯನು ತುಲಾರಾಶಿಯಲ್ಲಿರುವಾಗ ಪಂಚಲಿಂಗ ದರ್ಶನ ಪವಿತ್ರವಾಗಿದ್ದು, ಈ ದಿನಗಳಲ್ಲಿ ವಿಶೇಷ ಧಾರ್ಮಿಕ ಆಚರಣೆಗಳು,ಉತ್ಸವಗಳು ಜರುಗುತ್ತದೆ. ಕಾರ್ತೀಕ ಮಾಸದಲ್ಲಿ ಮನೆ ಮನೆಗಳಲ್ಲಿ, ಅನೇಕ ಶಿವ ದೇಗುಲಗಳಲ್ಲಿ, ವಿವಿಧ ಮಠ ಮಂದಿರಗಳಲ್ಲಿ, ದೇಶಾದ್ಯಂತ, ಭಕ್ತಿ ಭಾವದಿಂದ ನೆರವೇರುತ್ತದೆ.ಬಿದಿಗೆಯ ದಿನ ಹಸ್ತ ಭೋಜನವೆಂಬ ಆಚರಣೆಯು ನಡೆಯುತ್ತದೆ. ಶುಕ್ಲ ಪಂಚಮಿಯ ದಿನ ಗರುಡಪಂಚಮಿಯು, ದ್ವಾದಶಿಯ ದಿನ ತುಳಸಿ ಪೂಜೆ, ಹುಣ್ಣಿಮೆಯ ದಿನ ಚಂದ್ರ ಜಯಂತಿಯು,ಧಾತ್ರಿಹೋಮ, ಕಾರ್ತೀಕ ಸೋಮವಾರಗಳಂದು ಪರಶಿವನ ವಿಶೇಷ ಆರಾಧನೆ, ದೀಪೋತ್ಸವ ಇತ್ಯಾದಿ ಜರುಗುತ್ತದೆ. ಈ ಮಾಸದಲ್ಲಿ ನದಿ ಸ್ನಾನ, ದೀಪೋತ್ಸವ ವಿಶೇಷವೆನಿಸುತ್ತದೆ.

ಈ ವರ್ಷ ಕಾರ್ತೀಕ ಮಾಸದ ಪವಿತ್ರ ಸೋಮವಾರದಂದು ಪಂಚಲಿಂಗ ದರ್ಶನ ಭಾಗ್ಯಕ್ಕೆ ಅವಕಾಶ ದೊರಕಿದೆ. ಆದರೆ ಜಗತ್ತು ಸಾಂಕ್ರಾಮಿಕ ವೈರಾಣುವಿನ ಕೈಗೊಂಬೆಯಾಗಿ ಬಹಳ ಸಂಕಷ್ಟದ ಸಮಯವನ್ನು ಎದುರಿಸುತ್ತಿದೆ. ಹೆಚ್ಚು ಜನರು ಒಂದೆಡೆ ಸೇರಿ ಉತ್ಸವ ನಡೆಸಲು ಸಾಧ್ಯವಾಗದು. ಆದರೆ ಧಾರ್ಮಿಕ ಕಾರ್ಯವನ್ನು ಯಥಾ ಪ್ರಕಾರ ಸರಳವಾಗಿ ನಡೆಸಲು ಅಗತ್ಯವಾದ ಸಿದ್ಧತೆಗಳು ನಡೆಯುತ್ತಿವೆ. ಅಗತ್ಯ ಮುನ್ನೆಚ್ಚರಿಕಾ ಕ್ರಮಗಳ ನಡುವೆ ಉತ್ಸವ ಕಾರ್ಯ ನಡೆಯಬೇಕಿದೆ. ಈ ಮಾಸದ ದಿನಾಂಕ ೧೦ ರಿಂದ (ಡಿ.೧೦) ೧೯ರ ವರೆಗೂ ಜರುಗುವ ಈ ಉತ್ಸವವು ೧೪ ರಂದು ವಿಶೇಷ ಮಹತ್ವದ ದಿನವಾಗಿದೆ.

**ಐತಿಹಾಸಿಕ ಹಿನ್ನೆಲೆ:**

ತಲಕಾಡಿಗೆ ಸಂಸ್ಕೃತದಲ್ಲಿ "ದಲವನ ಪುರ" ವೆಂದು ತಮಿಳಿನಲ್ಲಿ "ತಲೈಕಾಡು" ಕನ್ನಡದಲ್ಲಿ "ತುಕಾಡು" ಎಂದು ಹೆಸರು.ಈ ಕ್ಷೇತ್ರವನ್ನು ಗಂಗರು, ಪಲ್ಲವರು, ಚೋಳರು, ಹೊಯ್ಸಳರು, ವಿಜಯನಗರ ಮುಂತಾದ ಅರಸರು ಆಳಿದ್ದಾರೆ.

ಕ್ರಿ.ಶ. ೧೬೧೨ ರ ವರೆಗೆ ಇದು ವಿಜಯನಗರ ಅರಸರ ಅಧೀನದಲ್ಲೇ ಇತ್ತು. ಬೆಟ್ಟದ ಚಾಮರಾಜ ಒಡೆಯರ ತಮ್ಮಂದಿರಾದ ರಾಜ ಒಡೆಯರು ಇದನ್ನು ಅವರಿಂದ ವಶಪಡಿಸಿಕೊಂಡರು. ಈಗ್ಗೇ ನಾನೂರು ವರ್ಷಗಳ ಹಿಂದೆ ಶ್ರೀರಂಗ ಪಟ್ಟಣ ಮೈಸೂರು ಅರಸರ ರಾಜಧಾನಿಯಾಗಿತ್ತು.ರಂಗರಾಯ ಎನ್ನುವವರನ್ನು ಇಲ್ಲಿಗೆ ರಾಜಪ್ರತಿನಿಧಿಯಾಗಿ ನೇಮಿಸಲಾಗಿತ್ತು. ಅವರು ಆಕಸ್ಮಿಕ "ಬೆನ್ನು ಫಣಿ' ರೋಗಕ್ಕೆ ತುತ್ತಾಗಿ ಶ್ರೀರಂಗ ಪಟ್ಟಣವನ್ನು ಸಿಂಹಾಸನವನ್ನು ರಾಜ ಒಡೆಯರಿಗೆ ಬಿಟ್ಟು ಪತ್ನಿ ಅಲುಮೇಲಮ್ಮ ಹಾಗೂ ರಂಗಮ್ಮನವರೊಂದಿಗೆ ಬಂದು ತಲಕಾಡಿನಲ್ಲಿ ನೆಲೆಸಿದರು. ಕೆಲಕಾಲದ ನಂತರ ಇಲ್ಲೇ ನಿಧನರಾದರೆಂದು ತಿಳಿದು ಬರುತ್ತದೆ.

ಪತಿಯ ನಿಧನದ ನಂತರ ಅಲಮೇಲಮ್ಮ ಹತ್ತಿರದ ಮಾಲಂಗಿಗೆ ಬಂದು ನೆಲೆಸಿದರಂತೆ, ಹಿಂದೆ ಶ್ರೀರಂಗನಾಥ ಸ್ವಾಮಿಗೆ ಅಲುಮೇಲಮ್ಮನವರ ಆಭರಣಗಳನ್ನು ವಿಶೇಷ ದಿನಗಳಲ್ಲಿ ಅಲಂಕರಿಸಿ ಹಿಂದಿರುಗಿಸಲಾಗುತ್ತಿತ್ತಂತೆ. ಈ ಪ್ರತೀತಿಯಂತೆ ಆಭರಣ ಕಳುಹಿಸಲು ಮಹಾರಾಜರು ಹೇಳಿ ಕಳುಹಿಸಲು ಅವರು ನೀಡಲು ನಿರಾಕರಿಸಿದರಂತೆ. ಅಜ್ಞಾ ಪೂರಕವಾಗಿ ಮತ್ತೆ ಆಭರಣಗಳಿಗೆ ಕರೆ ಬರಲು ಬೇಸರಗೊಂಡು ಮನನೊಂದ ಅಲುಮೇಲಮ್ಮ ತಮ್ಮ ಮೂಗುತಿಯನ್ನು ಕಳುಹಿಸಿ ಉಳಿದ ಆಭರಣಗಳೊಂದಿಗೆ "ಮಾಲಂಗಿ ಮಡುವಿಗೆ" ಬಿದ್ದರಂತೆ ಬೀಳುವ ಮುನ್ನ ಮನನೊಂದು "ತಲಕಾಡು





ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ಮಹಾರಾಜರಿಗೆ ಮಕ್ಕಳಾಗದೇ ಹೋಗಲೀ ಎಂದರಂತೆ.

ಈ ವಿಷಯ ತಿಳಿದ ರಾಜರು ಬಹಳ ವ್ಯಥೆ ಪಟ್ಟು ದುಡುಕಿನ ನಿರ್ಧಾರ ತೆಗೆದುಕೊಂಡ ಅಲುಮೇಲಮ್ಮನವರ ಬಂಗಾರದ ವಿಗ್ರಹ ಮಾಡಿಸಿದರಂತೆ, ಪರಿಹಾರವಾಗಿ ಪ್ರತಿನಿತ್ಯ ಹಾಗೂ ಉತ್ಸವದ ವಿಶೇಷ ದಿನಗಳಂದು ವಿಶೇಷ ಪೂಜೆ ನೆರವೇರಿಸುವ ಕಾರ್ಯ ಕೈಗೊಂಡರಂತೆ. ಹೀಗಾಗಿ ಕಾವೇರಿ ನದಿ ದಡದಲ್ಲಿರುವ ತಲಕಾಡು ಮರಳುಗಾಡಿನಂತೆ ಮರಳು ಮಯವಾಗಿದೆ. ಮಾಲಂಗಿ ಮಡುವಾಗಿದೆ, ಮೈಸೂರಿನ ಅರಸರಿಗೆ ಸಂತಾನವಿಲ್ಲದಂತಾಗಿದೆ ಎನ್ನಲಾಗುತ್ತದೆ.

**ಪೌರಾಣಿಕ ಹಿನ್ನೆಲೆ:**

ಪೂರ್ವ ಕಾಲದಲ್ಲಿ ಕಾಶಿಯ ವಸಿಷ್ಠ ಕುಲದ ಸೋಮದತ್ತನೆಂಬ ಭಕ್ತನು ತನ್ನ ಶಿಷ್ಯರೊಂದಿಗೆ ಸಶರೀರ ಮೋಕ್ಷದ ಸಲುವಾಗಿ ಹಾತೊರೆದು ದಕ್ಷಿಣ ಕಾಶಿ ಎನಿಸಿರುವ ಗಜಾರಣ್ಯ ಕ್ಷೇತ್ರಕ್ಕೆ ಬಂದನು. ಆದರೆ ಇಲ್ಲಿದ್ದ ಆನೆಗಳಿಂದ ಸಂಹರಿಸಲ್ಪಟ್ಟು, ನಂತರ ಆತನು ಮತ್ತು ಆತನ ಶಿಷ್ಯರು ಆನೆ ರೂಪದಲ್ಲಿ ಜನಿಸಿದರಂತೆ. ಹೀಗೆ ಜನ್ಮ ಪಡೆದ ಇವರು ಅದೇ ಅರಣ್ಯದಲ್ಲಿದ್ದ ಬುರುಗ ಮರದ ಬುಡಕ್ಕೆ ಸೊಂಡಲಿನಿಂದ ನೀರು ತಂದು ಹಾಕುತ್ತಿರಲು ಇದನ್ನು ಕಂಡ ಅಲ್ಲಿನ ತಲ, ಕಾಡ ಎಂಬ ಬೇಡರಿಬ್ಬರು ಕೊಡಲಿಯಿಂದ ಮರದ ಬುಡದಲ್ಲೇನಿದೆ ತಿಳಿಯಲು ಹೊಡೆದರಂತೆ. ತಕ್ಷಣವೇ ಅಲ್ಲಿಂದ ರಕ್ತವು ಚಿಮ್ಮಲು ರಕ್ತ ಕಂಡ ಬೇಡರು ಮೂರ್ಛಿತರಾದರಂತೆ. ತಕ್ಷಣವೇ ಯಾವುದೋ ಅದೃಶ್ಯವಾಣಿಯು ಅವರನ್ನು ಎಚ್ಚರಿಸಲು ಅವರು ಮರದ ಬುಡದಲ್ಲಿ ತಲೆ ಭಾಗಕ್ಕೆ ಗಾಯವಾಗಿ ರಕ್ತಸಿಕ್ತವಾದ ಶಿವಲಿಂಗವನ್ನು ಕಂಡರು. ಅದೃಶ್ಯವಾಣಿಯ ಸಲಹೆಯಂತೆ ಬುರುಗ ಮರದಹಣ್ಣು ಎಲೆ ಅರೆದು ಲೇಪನ ಮಾಡಿದರು. ಗಾಯವು ವಾಸಿಯಾಯಿತಂತೆ.ಹರಿದಿದ್ದ ರಕ್ತ ಹಾಲಾಹಲವಾಗಿ ಅದನ್ನು ಸೇವಿಸಿದ ತಲ-ಕಾಡರಿಗೆ ಪ್ರಥಮಗಣಾಧಿಪತ್ಯವು ಉಂಟಾಯಿತು. ಪ್ರತಿನಿತ್ಯದಂತೆ ಪೂಜೆಗೆ ಬಂದ ಗಜರೂಪಿ ಸೋಮದತ್ತನು ಅಲ್ಲಿದ್ದ ಹಾಲನ್ನು ಪಾನ ಮಾಡಿದ್ದರಿಂದ ಆನೆ ರೂಪ ಕಳೆದು ಮಾನವ ರೂಪ ಹೊಂದಿದರು.

ಹೀಗೆ ಪರಶಿವನು ತನಗೆ ತಾನೇ ಔಷದೋಪಚಾರ ಮಾಡಿಸಿಕೊಂಡಿದ್ದರಿಂದ ಈ ಶಿವಲಿಂಗಕ್ಕೆ ವೈದ್ಯನಾಥೇಶ್ವರ ಎಂಬ ಹೆಸರು ಬಂದಿದೆ. ಪ್ರಥಮಗಣಾಧಿಪತ್ಯವನ್ನು ಹೊಂದಿದ ತಲ - ಕಾಡ ಎಂಬ ಬೇಡರಿಂದ ಈ ಕ್ಷೇತ್ರಕ್ಕೆ "ತಲಕಾಡು" ಎಂಬ ಹೆಸರು ಪ್ರಾಪ್ತಿಯಾಯಿತೆಂದು ಸ್ಥಳಪುರಾಣದಿಂದ ತಿಳಿದು ಬರುತ್ತದೆ. ಸ್ವಾಮಿ ತಲೆಗೆ ಕೊಡಲಿಯಿಂದ ಗಾಯವಾದ ಗುರುತನ್ನು ಇಂದಿಗೂ ಪ್ರತ್ಯಕ್ಷವಾಗಿ ವಿಗ್ರಹದಲ್ಲಿ ಕಾಣಬಹುದಾಗಿದೆ. ಹಿಂದೆ ತ್ರೇತಾಯುಗದಲ್ಲಿ ಶ್ರೀ ರಾಮರು ಈ ಕ್ಷೇತ್ರಕ್ಕೆ ಬಂದು ವಿಶ್ರಾಂತಿ ಪಡೆದಿದ್ದನೆಂದು ಉಲ್ಲೇಖವಿದೆ.

ಕಾರ್ತೀಕ ಮಾಸದ ವಿಶೇಷ ದಿನದಂದು ದರ್ಶನ ಮಾಡಬೇಕಾದ ಇಲ್ಲಿನ ಪಂಚಲಿಂಗ ದೇವಾಲಯಗಳೆಂದರೆ

೧. ಶ್ರೀ ವೈದ್ಯನಾಥೇಶ್ವರ

೨. ಶ್ರೀ ಅರ್ಕೇಶ್ವರ

೩. ಶ್ರೀ ಪಾತಾಳೇಶ್ವರ

೪. ಶ್ರೀ ಮರುಳೇಶ್ವರ

೫. ಶ್ರೀ ಮಲ್ಲಿಕಾರ್ಜುನ



**೧. ವೈದ್ಯನಾಥೇಶ್ವರ ದೇಗುಲ :**

ಕಾವೇರಿ-ಕಪಿಲೆಯ ಸಂಗಮ ಸ್ಥಳದಲ್ಲಿ ವಸಿಷ್ಠ ಕುಲದ ಸೋಮದತ್ತನು ಪರಶಿವನ ಮೊರೆಯಿಟ್ಟು ಆಗಮಿಸಿ ಆಕಸ್ಮಿಕ ಆನೆಗಳ ದಾಳಿಗೆ ತುತ್ತಾದನು. ನಂತರ ಆನೆ ಜನ್ಮ ಪಡೆದು ಅರಣ್ಯದ ಬುರುಗ ಮರದ ಬುಡದ ಶಿವಲಿಂಗಕ್ಕೆ ಜಲಾಭಿಷೇಕ ಮಾಡುತ್ತಿದ್ದನು. ಇದನ್ನು ಕಂಡ ತಲಕಾಡ ಎಂಬುವರು ಇಲ್ಲೇನಿದೆ ಎಂಬ ಪರಿಶೀಲನೆ ನಡೆಸಿದರು. ಆ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಶಿವಲಿಂಗದ ಹಣೆಗೆ ಪೆಟ್ಟು ಬಿದ್ದು ರಕ್ತ ಸೋರಲಾರಂಭಿಸಿತು. ಇದನ್ನು ಕಂಡು ಭಯಗೊಂಡ ತಲ - ಕಾಡರು ಶಿವನ ಅಶರೀರವಾಣಿಯ ಸಲಹೆಯ ಮೇರೆಗೆ ಶಿವಲಿಂಗಕ್ಕೆ ಔಷಧೋಪಚಾರ ಮಾಡಿ ಪೂಜಿಸಿದರಂತೆ. ಹೀಗೆ ಪೂಜಿಸಿದ ಶಿವಲಿಂಗವು ಶ್ರೀ ವೈದ್ಯನಾಥೇಶ್ವರನೆನಿಸಿ, ಸೋಮದತ್ತನಿಗೆ ಒಲಿದ ಸ್ಥಳವಾಗಿದೆ. ರೋಗರುಜಿನಗಳಿಗೆ ಪರಿಹಾರ ಬೇಡಿ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ.

**೨. ಅರ್ಕೇಶ್ವರ :**

ಸೂರ್ಯದೇವನು (ಅರ್ಕ) ಉತ್ತರವಾಹಿನಿ ಕಾವೇರಿ ದಡದಲ್ಲಿ ಪರಶಿವನನ್ನು ಕುರಿತು ತಪಗೈದು, ಪೂಜಿಸಿದ ಸ್ಥಳವಾಗಿದ್ದು ಲಿಂಗರೂಪಿ ಅರ್ಕೇಶ್ವರನೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

**೩. ಪಾತಾಳೇಶ್ವರ :**

ಪೂರ್ವವಾಹಿನಿಯಾದ ಕಾವೇರಿ ತಟದಲ್ಲಿ ಪರಶಿವನು ತಪೋನಿರತ ಶ್ರೀ ವಾಸುಕಿಗೆ ದರ್ಶನವಿತ್ತನೆಂಬ ನಂಬಿಕೆಯಲ್ಲಿ ಸ್ವಾಮಿಯನ್ನು ಚರ್ಮರೋಗ ನಿವಾರಿಸುವ ಪಾತಾಳೇಶ್ವರನೆಂದು ನಂಬಿ ಪೂಜಿಸಲಾಗುತ್ತದೆ.

**೪.ಮರುಳೇಶ್ವರ :**

ಶ್ರೀಬ್ರಹ್ಮ ದೇವನು ಸರಸ್ವತಿಯನ್ನು ವಿವಾಹವಾಗುವ ಸಲುವಾಗಿ ದಕ್ಷಿಣವಾಹಿನಿ ಕಾವೇರಿಯಲ್ಲಿ ಮಿಂದು ಮರಳಿನ ಲಿಂಗವನ್ನು ಸ್ಥಾಪಿಸಿ, ಪೂಜಿಸಿದನೆಂದು ಶ್ರೀ ಮರುಳೇಶ್ವರ ದೇಗುಲವು ಬ್ರಹ್ಮಹತ್ಯಾದೋಷ ನಿವಾರಣೆಯ ತಾಣವಾಗಿದೆ.

**೫. ಮಲ್ಲಿಕಾರ್ಜುನ**

ಸೋಮಗಿರಿ ಅಥವಾ ಮುಡುಕುತೊರೆಯೆಂಬ ಸ್ಥಳದಲ್ಲಿ ಪಶ್ಚಿಮಮುಖಿಯಾಗಿ ಹರಿವ ಕಾವೇರಿ ದಡದಲ್ಲಿ ಮಧ್ಯಮ ಪಾಂಡವ ಅರ್ಜುನನು ಪರಶಿವನನ್ನು ಮಲ್ಲಿಕಾಪುಷ್ಪದಿಂದ ಅರ್ಚನೆ ಮಾಡಿ, ಪೂಜಿಸಿದನೆಂದು ಲಿಂಗರೂಪಿ ಶಿವನನ್ನು ಮಲ್ಲಿಕಾರ್ಜುನ ಸ್ವಾಮಿಯೆಂದು ಪೂಜಿಸಲಾಗುತ್ತದೆ. ಮತ್ತೊಂದು ಕಥೆಯ ಪ್ರಕಾರ ದಿಲೀಪ ಹಾಗೂ ದಮಯಂತಿಯರ ವಿಷಪ್ರಾಶನ ದೋಷ ನಿವಾರಣೆಯಾದ ಸ್ಥಳವೆಂದು ಹೇಳಲಾಗುತ್ತದೆ.

ತಲಕಾಡಿನಲ್ಲಿರುವ ಈ ದೇವಾಲಯಗಳೊಂದಿಗೆ ಮನೋನ್ಮನಿ, ಭ್ರಮರಾಂಬಿಕೆ ವೀರಭದ್ರಸ್ವಾಮಿ,ಕೀರ್ತಿನಾರಾಯಣ, ಮಹಾಗಣಪತಿ, ತಾಯಿ ಚಾಮುಂಡೇಶ್ವರಿ ಇತ್ಯಾದಿ ಪ್ರಮುಖ ದೇವಾಲಯಗಳು, ವಿಗ್ರಹಗಳಿವೆ.

ಕಾರ್ತೀಕ ಮಾಸದ ಪಂಚಲಿಂಗ ದರ್ಶನದ ಸಮಯದಲ್ಲಿ ಇಲ್ಲಿ ಗಂಗಾಪೂಜೆ, ಪಂಚಲಿಂಗದರ್ಶನ, ಗಜಾರೋಹಣ. ಬ್ರಹ್ಮರಥೋತ್ಸವ, ಶಯನೋತ್ಸವ, ತೆಪ್ಪೋತ್ಸವ, ನಂದಿವಾಹನೋತ್ಸವ ಇತ್ಯಾದಿ ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರುತ್ತವೆ.

ಪಂಚಲಿಂಗ ದರ್ಶನ ಸಮಯದಲ್ಲಿ ಬೆಂಗಳೂರು ಸೇರಿದಂತೆ ವಿವಿಧ ಪ್ರಮುಖ ಸ್ಥಳಗಳಿಂದ ಇಲ್ಲಿಗೆ ವಿಶೇಷ ಸಾರಿಗೆ ವ್ಯವಸ್ಥೆ ಇರುತ್ತದೆ. ಇತರ ದಿನಗಳಲ್ಲಿ ನಿಗದಿತ ಸಮಯದ ಸರ್ಕಾರಿ ಮತ್ತು ಖಾಸಗೀ ವಾಹನ ವ್ಯವಸ್ಥೆ ಇದೆ.



# ರಮಾ ಏಕಾದಶಿ ವ್ರತ


- ಎಸ್. ವೆಂಕಟರಾಘವನ್

9845793917


ವರ್ಷದಲ್ಲಿ ಹನ್ನೆರಡು ತಿಂಗಳು. ಒಂದು ತಿಂಗಳಲ್ಲಿ ಎರಡು ಪಕ್ಷ.ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷ. ಪಕ್ಷಕ್ಕೆ ಒಂದು ಏಕಾದಶಿ ಬರುವುದು.ಒಟ್ಟಾರೆ ಒಂದು ವರುಷದಲ್ಲಿ ೨೪ ಏಕಾದಶಿ ಇರುವವು.ಚಂದ್ರನ ಚಲನೆ ಆಧಾರಿತವಾಗಿ ಕಾಲಗಣನೆಯನ್ನು ಚಾಂದ್ರಮಾನ ಎನ್ನುವರು.ಚಾಂದ್ರಮಾನ ಆಧಾರದಲ್ಲಿ ಮೂರು ವರ್ಷಕ್ಕೊಮ್ಮೆ ಅಧಿಕ ಮಾಸ ಬರುವುದು. ಅಧಿಕಮಾಸ ಬಂದ ವರ್ಷದಲ್ಲಿ ೨೬ ಏಕಾದಶಿ ಬರುವವು. ಏಕಾದಶಿ ಎಂದರೆ ಹನ್ನೊಂದು ಎಂದು ಸಂಖ್ಯೆಯ ಪರವಾಗಿ ಮತ್ತು ತಿಥಿ ಸೂಚನೆಯಲ್ಲಿ ಹನ್ನೊಂದನೇ ದಿನ ಎಂದು ಗುರುತಿಸಲಾಗುವುದು. ಏಕಾದಶಿ ಎಂದರೆ ಚಾಂದ್ರಮಾನದ ಹನ್ನೊಂದನೆಯ ತಿಥಿ. ಪ್ರತಿ ತಿಂಗಳು ಪೌರ್ಣಿಮ ಮತ್ತು ಅಮಾವಾಸ್ಯೆ ಮುನ್ನ ಏಕಾದಶಿ ತಿಥಿ ಬರುವುದು. ಎಲ್ಲ ಏಕಾದಶಿ ದಿನಗಳಿಗೂ ಪ್ರಾಮುಖ್ಯತೆ ಇದೆ. ಶಾಸ್ತ್ರಗಳಲ್ಲಿ ಜಪ ತಪವಲ್ಲದೇ ವ್ರತ ಮಹಿಮೆ ಕೂಡಾ ತಿಳಸಲಾಗಿದೆ.

**ವರ್ಷದಲ್ಲಿ ಬರುವ ಏಕಾದಶಿಗಳ ವಿವರ:**

ಚೈತ್ರ - ಕಾಮದಾ , ವರೂಧಿನಿ

ವೈಶಾಖ - ಮೋಹಿನೀ, ಅಪರಾ

ಜ್ಯೇಷ್ಠ - ನಿರ್ಜಲ, ಯೋಗಿನೀ

ಆಷಾಢ - ದೇವಶಯನಿ, ಕಾಮಿಕಾ

ಶ್ರಾವಣ - ಪುತ್ರದಾ, ಅಜಾ,

ಭಾದ್ರಪದ - ಪರಿವರ್ತನ, ಇಂದಿರಾ

ಆಶ್ವಯುಜ - ಪಾಪಾಂಕುಶ, ರಮಾ

ಕಾರ್ತಿಕ - ಪ್ರಬೋಧಿನಿ, ಉತ್ಪತ್ತಿ

ಮಾರ್ಗಶಿರ - ಮೋಕ್ಷದಾ, ಸಫಲಾ

ಪುಷ್ಯ - ಪುತ್ರದಾ, ಷಟ್ ತಿಲಾ

ಮಾಘ - ಜಯ / ಭೀಷ್ಮ , ವಿಜಯ

ಫಾಲ್ಗುಣ - ಆಮಲಕೀ, ಪಾಪ ಮೋಚನೀ

ಅಧಿಕ ಮಾಸ (ಮೂರು ವರ್ಷಗಳಿಗೆ ಒಂದು ಬಾರಿ) - ಪದ್ಮಿನೀ, ಪರಮಾ. ಅದರಲ್ಲೂ ತುಂಬಾ ಪ್ರಾಮುಖ್ಯತೆ ಮತ್ತು ಮಹಿಮೆಯುಳ್ಳ ನಾಲ್ಕು ಏಕಾದಶಿಗಳಿವೆ. ಆಷಾಢ ಶುದ್ಧ ಏಕಾದಶಿ (ಪ್ರಥಮ ಏಕಾದಶಿ), ಕಾರ್ತಿಕ ಶುದ್ಧ ಏಕಾದಶಿ (ಉತ್ಥಾನ ಏಕಾದಶಿ) ಪುಷ್ಯ ಶುದ್ಧ ಏಕಾದಶಿ (ವೈಕುಂಠ ಏಕಾದಶಿ) ಮತ್ತು ಮಾಘ ಶುದ್ಧ ಏಕಾದಶಿ (ಭೀಷ್ಮ ಏಕಾದಶಿ).



“ಯಜ್ಞದಾನತಪಃ ಕರ್ಮನ ತ್ಯಾಜ್ಯಮ್ ಕಾರ್ಯಮೇವ ತತ್”

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ಯಜ್ಞ ದಾನ ಮತ್ತು ತಪ, ಕರ್ಮ ಯಾವುದೇ ಕಾರಣಕ್ಕೂ ಬಿಡಬಾರದು ಎನ್ನುವ ಬೋಧನೆ ಶಾಸ್ತ್ರಗಳಲ್ಲಿ ತಪ ಮಹಿಮೆ, ವ್ರತಗಳ ವಿವರಣೆ, ಆಚರಿಸುವ ಪದ್ಧತಿ, ವಿಧಾನ, ವ್ರತದ ತಿಥಿ ಮತ್ತು ಕೊಡುವ ಫಲವನ್ನು ವರ್ಣಿಸಲಾಗಿದೆ. ನದಿಯಲ್ಲಿ ಗಂಗೆ, ಪ್ರಕಾಶಮಾನ ಮಾಡಲು ಸೂರ್ಯ, ದೇವತೆಗಳಲ್ಲಿ ಶ್ರೀಹರಿ ಪ್ರಮುಖವಾದಂತೆ, ಏಕಾದಶಿ ವ್ರತಕೆ ಪ್ರಾಮುಖ್ಯತೆ ಇದೆ. ಈ ವ್ರತದ ಪ್ರಭಾವದಿಂದ ಸರ್ವರೋಗ ವಿಮುಕ್ತಿ, ಮನಃ ಶಾಂತಿ, ದೀರ್ಘ ಆಯುವು, ಸುಖ, ಶಾಂತಿ ಪ್ರಾಪ್ತಿ ಆಗುವುದು. ಇದಲ್ಲದೆ ಮನುಷ್ಯನ ಮುಖ್ಯ ಉದ್ದೇಶ್ಯವಾದ ಭಾಗವತ್ಪ್ರಾಪ್ತಿ ಆಗುವುದು.

### ಏಕಾದಶಿ ವ್ರತ ವಿಧಾನ:

ಏಕಾದಶಿಯ ಹಿಂದಿನ ದಿನ ದಶಮಿಯಂದು ಒಂದು ಹೊತ್ತು ಮಧ್ಯಾಹ್ನ ಊಟ ಮಾಡಿ, ಮರುದಿನ ಏಕಾದಶಿ ಉಪವಾಸ ಮಾಡಬೇಕು. ಏಕಾದಶಿ ದಿನದಂದು ಉಪವಾಸ ವಿದ್ದು, ದ್ವಾದಶಿಯ ದಿನ, ನಿತ್ಯಕರ್ಮ ಮುಗಿಸಿ ಭೋಜನ ಮಾಡಬೇಕು. ಉಪ - ಸಮೀಪದಲ್ಲಿ, ವಾಸಃ - ಇರುವುದು ಇಂದಿನ ದಿನ ಇಂದ್ರಿಯಗಳನ್ನು ನಿಗ್ರಹಿಸಿ, ಶ್ರೀಹರಿಗೆ ಸೇವೆ ಮಾಡುತ್ತ ಭಗವಂತನ ಸಮೀಪದಲ್ಲಿರುವ ವ್ರತ ಏಕಾದಶಿ ವ್ರತ.

ಗೃಹಸ್ಥೋ ಬ್ರಹ್ಮಚಾರೀನ ಅಹಿತಾಗ್ನಿ ಸ್ಥಥೈವಚ
ಏಕಾದಶ್ಯಾಂನ ಭುಂಜೀತ ಪಕ್ಷಯೋ ರುಭಯೋರಪಿ

ಬ್ರಹ್ಮಚಾರಿಗಳು, ಗೃಹಸ್ಥರು, ನಿತ್ಯಾಗ್ನಿ ಹೋತ್ರರು ಎರಡೂ ಪಕ್ಷದ ಏಕಾದಶಿಯಲ್ಲಿ ಭೋಜನ ಮಾಡಬಾರದು ಎಂದು ಶಾಸ್ತ್ರವಚನ. ಏಕಾದಶಿಯನ್ನು ಹರಿವಾಸರ ಎಂದು ಪರಿಗಣಿಸಲಾಗುವುದು. ಇಂದ್ರಿಯಗಳಾದ ಪಂಚಕರ್ಮೇಂದ್ರಿಯ, ಪಂಚ ಜ್ಞಾನೇಂದ್ರಿಯ ಮತ್ತು ಹನ್ನೊಂದನೆಯ ಇಂದ್ರಿಯ ಮನಸ್ಸನ್ನು ಹತೋಟಿಯಲ್ಲಿ ಇಟ್ಟು ಸತ್ಕರ್ಮ ಶ್ರೀಹರಿಯ ಪೂಜೆ ಧ್ಯಾನ ಮಾಡುವುದು ಏಕಾದಶಿ ವ್ರತದ ಮುಖ್ಯ ಉದ್ದೇಶ. ಆಹಾರ ಸೇವನೆ ಇಲ್ಲದೆ, ನಿಯಂತ್ರಿತ ಮನಸ್ಸಿನಿಂದ ಭಗವಂತ ಸಮೀಪ ಸೇರುವ ವ್ರತ ಏಕಾದಶಿ ವ್ರತ ಮನಸ್ಸು ಲಗ್ನವಾಗಿ ಭಗವಂತನ ಸಮೀಪಿಸಿದಾಗ ಜೀವಾತ್ಮ ಮೇಲೆ ಪರಮಾತ್ಮನ ಪ್ರಭಾವ ಪ್ರಸರಣೆ ಆಗುವುದು. ದ್ವಾದಶಿ ತಿಥಿಯಲಿ ಶ್ರೀಹರಿಗೆ ನೈವೇದ್ಯದ ನಂತರ ಪ್ರಸಾದವನು ಸ್ವೀಕರಿಸುವ ಮೂಲಕ ಮಂತ್ರಮಯ ವಾದ ವಾಸುದೇವ ತತ್ವವನ್ನು ಜೀವಾತ್ಮ ಅನುಭವಿಸಲು ಸಾಧ್ಯ ಏಕಾದಶಿಯಂದು ಉಪವಾಸ ಸತ್ವ ಗುಣದ ಸಂಕೇತ. ಕರ್ಮ, ಭಕ್ತಿಯೋಗದಿಂದ ದಿವ್ಯತ್ವವನ್ನು ಸಾಧನೆ ಮಾಡುವಾಗ ಮನಸ್ಸು ಅಡ್ಡಿ ಆಗುವುದು. ಸಂಕಲ್ಪ ವಿಕಲ್ಪಗಳ ಮಿಶ್ರಣ ಮನಸ್ಸು. ಇಂದ್ರಿಯಗಳಿಗೆ ಸೇವಜನಾಗದೇ ಇಂದ್ರಿಯಗಳಿಗೆ ಬುದ್ಧಿ ಅಧಿಪತಿ ಆಗಬೇಕು. ಬುದ್ಧಿಯನ್ನು ಮನಸ್ಸು ಅನುಸಂಧಾನವಾಗಬೇಕು. ಕರ್ಮಗಿಡದಲ್ಲಿ ಅರಳುವ ಹೂವಂತೆ, ಭಕ್ತಿ ಹೂವಿನಿಂದ ಉದ್ಭವವಾಗುವ ಕಾಯಿ, ಜ್ಞಾನ ಮಾಗಿದ ಹಣ್ಣಂತೆ, ಇವೆಲ್ಲವೂ ವರುಸಕ್ರಮವಾಗಿ ನಡೆದು ಹೋಗುವವು. ಭಕ್ತ ಯೋಗವೆಂದರೆ ಭಗವಂತನ ಜೊತೆ ನಿಶ್ಚಲ ಭಕ್ತಿ ಅನುಸಂಧಾನ ಮಾಡಿಕೊಳ್ಳುವುದು. ಕರ್ಮಾಪೇಕ್ಷೆ ಇಲ್ಲದೆ ಮನಸ, ವಾಚ, ಕರ್ಮಣಾ ತನ್ನನು ತಾನೇ ಭಗವಂತನಿಗೆ ಅರ್ಪಣೆ ಮಾಡುವುದೇ ಭಕ್ತಿ ಯೋಗ.

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿ ಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥

ನಿರಂತರವಾಗಿ ನನ್ನ ಧ್ಯಾನಾದಿಗಳಲ್ಲಿ ತೊಡಗಿ, ಪ್ರೇಮದಿಂದ ಭಜಿಸುವ ಭಕ್ತರಿಗೆ ನಾನು ನನ್ನನ್ನು ಪಡೆಯುವ ತತ್ವ ಜ್ಞಾನರೂಪ ಯೋಗವನ್ನು ಕರುಣಿಸುತ್ತೇನೆ ಎಂದು ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಉಪದೇಶ ಮಾಡಿದ್ದಾರೆ. ಕರ್ಮವನ್ನು ಕಾಶಲಂ ಯೋಗಃ ಎಂದು ಉಪದೇಶ. ನಿರ್ದೇಶಿತ ಕೆಲಸವನ್ನು ಹೃದಯಪೂರ್ವಕವಾಗಿ ಶಕ್ತಿ ವಂಚನೆ ಇಲ್ಲದೆ ಮಾಡುವುದು ಯೋಗ. “ಯೋಗಾಹ್ ಚಿತ್ತ ವೃತ್ತಿ ನಿರೋಧ” ಬಾಹ್ಯ ಮತ್ತು ಅಂತರ ಇಂದ್ರಿಯಗಳನ್ನು ನಿಗ್ರಹಿಸಿ ಬುದ್ಧಿಯನ್ನು, ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದೇ ಯೋಗ. “ಸಮತ್ವಂ ಯೋಗಮುಚ್ಯತೇ” ಎಲ್ಲ ಸಮಯ ಸಂದರ್ಭದಲ್ಲಿ ಸಮತ್ವ ಭಾವನೆಯಿಂದ ನಡೆದುಕೊಳ್ಳುವುದೇ ಯೋಗ. ಆರೋಗ್ಯರೀತ್ಯಾ ಅಥವಾ ಬೇರೆ ಕಾರಣಗಳಿಂದ ಕಟಿಕ

ಉಪವಾಸ (ನಿರಾಹಾರ) ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ, ಹಾಲು, ಹಣ್ಣು ಸೇವನೆ ಮಾಡಬಹುದು. ಏಕಾದಶಿಯಂದು ಅನ್ನ ಸೇವನೆ ನಿಷಿದ್ಧ. ಕೆಲವರು ಏಕಾದಶಿಯಂದು ಮೌನವ್ರತ ಸಹ ಆಚರಿಸುತ್ತಾರೆ.

**ರಮಾ ಏಕಾದಶಿ :**

ಆಶ್ವಯುಜ ಮಾಸದ ಕೃಷ್ಣಪಕ್ಷ ಏಕಾದಶಿ (ದೀಪಾವಳಿ ಹಬ್ಬ ಮುನ್ನ) ರಮಾ ಏಕಾದಶಿ ಎಂದು ಆಚರಿಸಲಾಗುವುದು. ರಮಾದೇವಿ ಶ್ರೀ ಮಹಾಲಕ್ಷ್ಮಿ, ಸಕಲ ಅಭೀಷ್ಟ ಸಕಲ ಭಾಗ್ಯ ಪ್ರದಾಯಿನಿ ಶ್ರೀಮಹಾಲಕ್ಷ್ಮಿ ದೇವಿ. ಏಕಾದಶಿಯ ದಿನ ಪ್ರಾತಃ ಕಾಲದಲ್ಲಿ ನಿತ್ಯಕೃತ್ಯಗಳು ಮುಗಿಸಿ ದೇವರ ಮನೆ ಅಲಂಕರಿಸಿ, ದೀಪಾರಾಧನೆ ಮಾಡಿ ಶ್ರೀ ಹರಿಯ ಪ್ರಾರ್ಥನೆ ಮತ್ತು ವ್ರತ ಸಂಕಲ್ಪ ಮಾಡಬೇಕು.

ಏಕಾದಶ್ಯಾಂ ನಿರಾಹರಃ ಸ್ಥಿಥ್ವಾಹ ಮಪರೇಹನಿ।
ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭಾವಾಚ್ಯುತ॥

ಕಮಲನಯನ ಅಚ್ಚ್ಯುತ ! ನಾನು ಏಕಾದಶಿಯಂದು ನಿರಾಹಾರನಾಗಿ ಮರುದಿನ ಭೋಜನ ಮಾಡುವೆನು. ನಿಮ್ಮ ಪಾದಗಳಿಗೆ ಶರಣು ಶ್ರೀ ಹರಿ.

ಅಜ್ಞಾನತಿ ಮಿರಾಂಧಸ್ಯ ವ್ರತೇನಾನೇನ ಕೇಶವ।
ಪ್ರಸೀದ ಸುಮುಖೋ ಭೂತ್ವಾ ಜ್ಞಾನದೃಷ್ಟಿಪ್ರದೋ ಭವ॥

ಸ್ವಾಮಿ ಕೇಶವ! ನಾನು ಅಜ್ಞಾನರೂಪಿ. ಅಂಧಕಾರದಲ್ಲಿ ಮುಳುಗಿ ಜ್ಞಾನರಹಿತನಾಗಿರುವೆ ! ಈ ವ್ರತದ ಆಚರಣೆ ಇಂದ ಪ್ರಸನ್ನರಾಗಿ ಜ್ಞಾನದೃಷ್ಟಿ ಪ್ರಸಾದಿಸಿ ಎಂದು ಸ್ವಾಮಿಗೆ ಬೇಡಿಕೆ.

ಮನೆಯಲ್ಲಿ ಸಾಲಿಗ್ರಾಮವಿದ್ದಲ್ಲಿ ಹಾಲಿನಿಂದ, ನೀರಿನಿಂದ ಅಭಿಷೇಕ ಮಾಡಿ, ತುಳಸಿ ಸಮರ್ಪಿಸಬೇಕು. ಏಕಾದಶಿಯ ದಿನ ಜಾಗರಣೆ ಮಾಡುವ ಆಚಾರವೂ ಇದೆ. ಹರಿನಾಮ ಸ್ಮರಣೆ, ಭಜನೆ ಮಾಡುತ್ತ ಶ್ರೀ ಹರಿಯ ಧ್ಯಾನದಿಂದ ರಾತ್ರಿಯ ಸಮಯದ ನಂತರ ದ್ವಾದಶಿ ತಿಥಿ ಸೂರ್ಯೋದಯ ಮುನ್ನ ಪೂಜೆ, ಅರ್ಚನೆ, ಪಠನ ಮಾಡುವುದನ್ನು ದ್ವಾದಶಿ ಪಾರಾಯಣ ಎನ್ನುವರು. ದ್ವಾದಶಿಯಂದು ಶ್ರೀ ಹರಿಯ ಪೂಜೆ ಮಾಡಿ, ನೈವೇದ್ಯ ಸಮರ್ಪಿಸಿ ದ್ವಾದಶಿ ಪಾರಾಯಣ ಮಾಡಬೇಕು. ಪಾರಾಯಣದ ನಂತರ ಭೋಜನ ಮಾಡಬೇಕು. ಅನುಕೂಲವಾದಲ್ಲಿ ಬ್ರಾಹ್ಮಣರನ್ನು ಕರೆದು ಊಟ ಉಪಚಾರ ಮಾಡಿಸಿ, ದಕ್ಷಿಣೆ ತಾಂಬೂಲ ಸಮರ್ಪಿಸಿ ಆಶೀರ್ವಾದ ಪಡೆಯಬೇಕು.

**ರಮಾ ಏಕಾದಶಿ ವ್ರತ ಕಥೆ:**

ಪೂರ್ವ ಕಾಲದಲ್ಲಿ ಮುಚುಕುಂದ ಮಹಾರಾಜರು ಮಹಾ ವಿಷ್ಣು ಭಕ್ತರಾಗಿದ್ದರು. ರಾಜ್ಯಭಾರ ಹೊತ್ತು ನಿಷ್ಕಂಟಕನಾಗಿ ಧರ್ಮದಿಂದ ರಾಜ್ಯವ ಆಳುತ್ತಿದ್ದರು. ಮಹಾರಾಜರಿಗೆ ಶ್ರೇಷ್ಟ ನದಿಯಾದ ಚಂದ್ರಭಾಗ ಮಗಳಾಗಿ ಜನಿಸಿದರು. ಹೀಗಾಗಿ ಪುತ್ರಿಯ ಹೆಸರು ಚಂದ್ರಭಾಗ. ಯುಕ್ತ ವಯಸ್ಸಲಿ ಚಂದ್ರಸೇನ ಕುಮಾರರಾದ ಶೋಭನ ಯುವರಾಜರ ಜೊತೆ ಚಂದ್ರಭಾಗ ವಿವಾಹವಾಯಿತು. ವಿವಾಹದಾನಂತರ ಒಂದು ದಿನ ಸತಿಯ ಜೊತೆ ಶೋಭನ ಯುವರಾಜರು ಮಾವನ ಮನೆಗೆ ಬಂದರು. ಅಂದು ತಿಥಿ ದಶಮಿ, ಮುಚುಕುಂದರ ರಾಜ್ಯದಲ್ಲಿ ಏಕಾದಶಿ ವ್ರತ ರಾಜಮಂದಿರದಲ್ಲಿ ವಾಸವಿರುವವರು ಸೇರಿ ರಾಜ್ಯದ ಪ್ರಜೆಗಳೆಲ್ಲಾ ಏಕಾದಶಿ ವ್ರತ ಆಚರಿಸುವರು. ಉಪವಾಸ, ಶ್ರೀಹರಿ ಕೀರ್ತನೆ, ಪೂಜೆ, ಜಾಗರಣೆ ಮಾಡಿ ದ್ವಾದಶಿ ತಿಥಿಯಂದು ಪಾರಾಯಣ, ನೈವೇದ್ಯ ಸಮರ್ಪಣೆ ಮಾಡಿ ಊಟ ಮಾಡುವ ಆಚಾರ ಕಡ್ಡಾಯವಾಗಿತ್ತು. ಶೋಭನ ಯುವರಾಜರು ಗಾಬರಿಗೊಂಡು ಚಿಂತೆಯಲ್ಲಿ ಮುಳಗಿದ್ದರು. ಯುವರಾಜರಿಗೆ ಉಪವಾಸವಿರುವ ಅಭ್ಯಾಸವಿಲ್ಲ. ಹಸಿವು ಒಂದು ಒಪ್ಪತ್ತು ಕೂಡ ತಾಳಲಾರರು. ಶೋಭನ ಯುವರಾಜರು ಉಪವಾಸ ದೀಕ್ಷೆ ಹಿಡಿದು ಜಾಗರಣೆ ಮಾಡುತ್ತ ಹಸಿವು ತಾಳದೇ ಸೂರ್ಯೋದಯ ಸಮಯದಲ್ಲಿ ದ್ವಾದಶಿ ಘಳಿಗೆಯಲ್ಲಿ ಪ್ರಾಣ ತ್ಯಾಗ ಮಾಡಿದರು. ಶೋಭನಯುವರಾಜರ ಅಂತ್ಯಕ್ರಿಯೆ ನಡೆದು, ಚಂದ್ರಭಾಗ ತನ್ನ ತಂದೆ ಮುಚುಕುಂದರ ರಾಜ್ಯದಲ್ಲೇ ಇದ್ದರು. ರಮಾ ಏಕಾದಶಿ ಉಪವಾಸ, ಜಾಗರಣೆ ಮಹಿಮೆಯಿಂದ, ಶೋಭನ ಯುವರಾಜರಿಗೆ ಮಂದರಾಚಲ ಶಿಖರದಲ್ಲಿ ರಮಣೀಯವಾದ ದೇವಪುರ ರಾಜ್ಯ ಪ್ರಾಪ್ತಿಆಯಿತು. ಮುಚುಕುಂದ ರಾಜ್ಯದಲ್ಲಿ ಸೋಮಶರ್ಮ ಎಂಬುವ ಬ್ರಾಹ್ಮಣ ವಾಸವಿದ್ದು ಮಂದರಾಚಲ ಪರ್ವತಬಳಿ ಬಂದಾಗ ಶೋಭನ ರಾಜರನ್ನು ಗುರುತಿಸಿದರು. ನೀವು ಮುಚುಕುಂದ ಪ್ರಭುಗಳ ಅಳಿಯ, ಇಲ್ಲಿ ಹೇಗೆ ಬಂದಿರಿ? ಎಂದು ಪ್ರಶ್ನಿಸಿದರು. ಶೋಭನ ಯುವರಾಜರು ಏಕಾದಶಿ ವ್ರತ ಮಹಿಮೆ ತಿಳಿಸಿ, ಅದರ ಫಲವೇ ಈ ನಗರಿ ಪ್ರಾಪ್ತಿ ಆಗಿದೆ ಎಂದು ನುಡಿದು ಚಂದ್ರಭಾಗ ಮತ್ತು ಮುಚುಕುಂದ ರಾಜರ ಯೋಗಕ್ಷೇಮ ತಿಳಿಸಲು ಕೇಳಿದರು. ಎಲ್ಲರೂ ಕುಶಲ, ನೀವು ಹೇಗೆ ಇಲ್ಲಿ? ಮುಚುಕುಂದ ರಾಜರಿಗೆ ತಿಳಿಸುವೆನು ಎಂದು ಹೇಳಿ ತಮ್ಮ ರಾಜ್ಯಕ್ಕೆ ತೆರಳಿದರು. ಕಂಡ ಎಲ್ಲ ವಿಷಯವನ್ನೂ ರಾಜರಿಗೆ ತಿಳಿಸಿ, ಶೋಭನ ಯುವರಾಜರು ಮಂದರಾಚಲ ನಗರಿಯಲ್ಲಿ ಇದ್ದ ವಿಷಯವನ್ನು ತಿಳಿಸಿದರು. ಸೋಮಶರ್ಮ ಚಂದ್ರಭಾಗಾ ರಾಣಿಯನ್ನು ಮಂದರಾಚಲ ಪರ್ವತದ ಬಳಿ ವಾಮದೇವ ಮುನಿಯ ಆಶ್ರಮಕ್ಕೆ

ಕರೆದುಕೊಂಡು ಹೋದರು.ವಾಮದೇವ ಮುನಿಗಳ ಮಂತ್ರ ಪ್ರಭಾವದಿಂದ ಚಂದ್ರಭಾಗ ದಿವ್ಯಗತಿ ಪಡೆದು ಮರಳಿ ಶೋಭನ ಯುವರಾಜರ ಬಳಿ ಬಂದು ಸೇರಿದರು. ಚಂದ್ರಭಾಗ ಮಹಾ ರಾಣಿ ಎಂಟನೆಯ ವರುಷದಿಂದ ಏಕಾದಶಿ ವ್ರತಪಾಲನೆ ಮಾಡುವುದರಿಂದ ಪತಿವಿಯೋಗ ದೂರವಾಗಿ, ಶ್ರೇಷ್ಟ ನಗರಕ್ಕೆ ನೀವು ರಾಜರಾಗಿದ್ದೀರ ! ಈ ನಗರ ಸ್ಥಿರವಾಗಿ, ಸಮೃದ್ಧಿ ಯಾಗಿ ನೆಲೆಯುವುದು ಎಂದು ನುಡಿದರು. ಇಬ್ಬರು ದಂಪತಿ ಗಳು ಅನ್ಯೋನ್ಯವಾಗಿ ರಮಣೀಯ ನಗರದಲ್ಲಿ ಸುಖವಾಗಿ ದ್ದರು. ರಮಾ ಏಕಾದಶಿ ಚಿಂತಾಮಣಿ, ಕಾಮಧೇನುವಂತೆ ಎಲ್ಲ ಮನೋರಥಗಳನ್ನು ಪೂರೈಸುವ ವ್ರತವಾಗಿದೆ.

ಕೇದಾರ ಕ್ಷೇತ್ರದಲ್ಲಿ ತೀರ್ಥ ಸೇವನೆಯಿಂದ ಪುನರ್ಜನ್ಮ ವಿಲ್ಲ. ಏಕಾದಶಿ ವ್ರತದ ಫಲ ಬಹು ಹೆಚ್ಚಾಗಿದೆ. ಏಕಾದಶಿ ವ್ರತ ನೂರು ಅಶ್ವಮೇಧ ಯಾಗದ ಫಲ, ನೂರು ಗೋದಾನ ಮಾಡಿದ ಫಲ ಸಾವಿರ ಯಜ್ಞ ಮಾಡಿದ ಫಲವಲ್ಲದೇ, ಮುಕ್ತಿಗೆ ಸೋಪಾನ. ಏಕಾದಶಿ ವ್ರತವನ್ನು ನಿಯಮ, ನಿಷ್ಠೆಯಿಂದ ಆಚರಿಸಿದವರಿಗೆ ಸಕಲ ಬಾಧೆಗಳಿಂದ ವಿಮುಕ್ತಿ ಹೊಂದು ಮರಣಾನಂತರ ವೈಕುಂಠಪ್ರಾಪ್ತಿ ಲಭಿಸುವುದು. ಫಲದಾಯಕ ಸುಲಭ ವ್ರತವಾದ ರಮಾ ಏಕಾದಶಿ ವ್ರತ ಆಚರಿಸಿ ಲಕ್ಷ್ಮೀ ನಾರಾಯಣ ಕೃಪೆಗೆ ಪಾತ್ರರಾಗೋಣ.

ಮಂಗಳಂ ಲಕ್ಷ್ಮೀ ನಾರಾಯಣ ! ಜಯಮಂಗಳಂ ಶುಭ ಮಂಗಳಂ....



## ಪದ್ಮಾವತಿಗೆ ಪರಂಧಾಮನ ಬಾಗಿನ

ಪದ್ಮಾವತಿಯ ಹುಟ್ಟುಹಬ್ಬದ ದಿನದಂದು ನಡೆಯುವ ಹತ್ತು ದಿನಗಳ ಹಬ್ಬವೇ ಕಾರ್ತೀಕ ಬ್ರಹ್ಮೋತ್ಸವಗಳು. ಕೊನೆಯ ದಿನ ಅಂದರೆ ಅಲಮೇಲುಮಂಗಮ್ಮ ಅವತರಿಸಿದ "ಪಂಚಮಿತೀರ್ಥ" ದಿನದಂದು ತಿರುಮಲೆಯ ಪರಂಧಾಮನು ಪ್ರೀತಿಯಿಂದ ಹುಟ್ಟಿದ ದಿನದ ಬಾಗಿನವನ್ನು ಕಳುಹಿಸುತ್ತಾನೆ. ಎರಡು ರೇಷ್ಮೆ ಸೀರೆ, ಎರಡು ರೇಷ್ಮೆ ಕಬುಸ ಬಟ್ಟೆಗಳು, ಅರಿಶಿನ ಮುದ್ದೆ, ಶ್ರೀಗಂಧದ ಚಕ್ಕೆ ಹಸಿಯಾ ಅರಿಶಿನಕೊಂಬಿರುವ ಹಸಿಯಾದ ಅರಿಶಿನದ ಗಿಡ, ಹೂ ಮಾಲೆಗಳು, ತುಳಸಿ ಮಾಲೆಗಳೊಂದಿಗೆ ಒಂದು ಬಂಗಾರದ ಹಾರ, ಇವಲ್ಲದೆ ತಿಂಡಿ ತಿನಿಸುಗಳು ಒಂದು ಪಡಿ (51) ದೊಡ್ಡ ಲಡ್ಡುಗಳು, ಒಂದು ಪಡಿ (51) ವಡೆಗಳು, ಒಂದು ಪಡಿ (51) ಅಪ್ಪಾಗಳು, ಒಂದು ಪಡಿ (51) ದೋಸೆಗಳು.

ಇವೆಲ್ಲವುಗಳನ್ನು ಆ ದಿನ ಪ್ರಾತಃ ಕಾಲದಲ್ಲಿ ಮೊದಲೇ ತಿರುಮಲೆಯಲ್ಲಿ ಸ್ವಾಮಿಯವರ ಮೂಲಮೂರ್ತಿಗೆ ಸಮರ್ಪಿಸುತ್ತಾರೆ. ಆ ನಂತರ ಇವುಗಳನ್ನು ದೇವಸ್ಥಾನದ ಅಧಿಕಾರಿಗಳು, ಪರಿಚಾರಕರು, ಸಿಬ್ಬಂದಿ, ಕೆಲವು ಬಿದಿರು ಬುಟ್ಟಿಗಳಲ್ಲಿ ಇಟ್ಟುಕೊಂಡು ಕಾಲ್ನಡಿಗೆಯಲ್ಲಿ ಅಲಿಪಿರಿ ಪಾದಗಳ ಮಂಟಪದ ಹತ್ತಿರ ಇರುವ ಶ್ರೀಪದ್ಮಾವತಿ ಅರಿಶಿನ ಮಂಟಪದ ಹತ್ತಿರ ಬರುತ್ತಾರೆ. ಅಲ್ಲಿಂದ ಅರಿಶಿನಕುಂಕುಮ, ಸೀರೆ ಉಡಿಗಳನ್ನು ಆನೆ ಅಂಬಾರಿಯ ಮೇಲೆ ಇಟ್ಟುಕೊಂಡು ತಾಳಮೇಳಗಳಿಂದ ಶ್ರೀ ಕೊದಂಡರಾಮಸ್ವಾಮಿಯವರ ದೇವಾಲಯ. ಶ್ರೀ ಗೋವಿಂದ ರಾಜಸ್ವಾಮಿ ದೇವಾಲಯಗಳ ಮೇಲಿನಿಂದ ತಿರುಚಾನೂರಿಗೆ ಬರುತ್ತಾರೆ. ಅಲ್ಲಿ ಶ್ರೀ ಪದ್ಮಾವತಿ ದೇವಾಲಯದ ಅರ್ಚಕರು. ಅಧಿಕಾರಿಗಳು ತಿರುಮಲೆ ಸ್ವಾಮಿಯವರ ಬಾಗಿನಕ್ಕೆ ದಿವ್ಯಮಂಗಳನೀರಾಜನಗಳಿಂದ ಭವ್ಯವಾದ ಸ್ವಾಗತವನ್ನು ನೀಡುತ್ತಾರೆ. ನಂತರ ತಿರುಚಾನೂರು ಪುರಬೀದಿಗಳಲ್ಲಿ ಮೆರವಣಿಗೆ ಮಾಡಿ ಶ್ರೀಪದ್ಮಾವತಿ ಅಮ್ಮನವರಿಗೆ ಸಮರ್ಪಿಸುತ್ತಾರೆ. ಅವುಗಳಿಂದ ಶ್ರೀ ಪದ್ಮಾ ವತಿ ಅಮ್ಮನವರಿಗೆ ಶ್ರೀ ಸುದರ್ಶನ ಚಕ್ರತ್ತಾಳ್ವಾರರಿಗೆ ತಿರು ಮಂಜನಾದಿಗಳನ್ನು ವೈಭವದಿಂದ ನೆರವೇರಿಸಿದ ನಂತರ ಪದ್ಮಸರೋವರದಲ್ಲಿ ಸುದರ್ಶನ ಚಕ್ರತ್ತಾಳ್ವಾ ರರಿಗೆ ಅರ್ಚಕರು ಪವಿತ್ರ ಸ್ನಾನವನ್ನು ಮಾಡಿ ಸುತ್ತಾರೆ. ಸರಿಯಾಗಿ ಆ ಸಮಯದಲ್ಲಿ ಸಾವಿ ರಾರು ಭಕ್ತರು ಪವಿತ್ರ ಸ್ನಾನವನ್ನು ಮಾಡು ತ್ತಾರೆ.



# ಕರ್ನಾಟಕದ ವೈಷ್ಣವ ದೇವಾಲಯಗಳು

1



# ಮಧುಗಿರಿಯ ಶ್ರೀ ವೆಂಕಟೇಶ್ವರ ದೇವಾಲಯ

- ಡಾ॥ ಕೆಂಗೇರಿ ಚಕ್ರಪಾಣಿ
9448386886

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ ಮಧುಗಿರಿ. ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ಸುಮಾರು 45 ಕಿ.ಮೀ. ದೂರದಲ್ಲಿ ತುಮಕೂರು - ಹಿಂದೂಪುರ ರಸ್ತೆಯಲ್ಲಿರುವ ಸುಪ್ರಸಿದ್ಧ ಐತಿಹಾಸಿಕ ಸ್ಥಳ. ಮಧುಗಿರಿಯ ಬೆಟ್ಟವು ಇಡೀ ಏಷ್ಯಾ ಖಂಡದಲ್ಲಿಯೇ ಪ್ರಥಮವಾದ ಏಕಶಿಲಾ ಬೆಟ್ಟವೆಂಬ ಖ್ಯಾತಿಯನ್ನು ಹೊಂದಿದೆ.

ಮಧುಗಿರಿಯ ಪ್ರಾಚೀನ ನಾಮ ಮದ್ದಗಿರಿಯಾಗಿದ್ದು, ಸ್ವಾತಂತ್ರ್ಯ ನಂತರ ಮಧುಗಿರಿಯೆಂದು ಪುನರ್ ನಾಮಕರಣಗೊಂಡಿದೆ. ಮಧುಗಿರಿಯಲ್ಲಿ 16 ನೆಯ ಶತಮಾನದಿಂದ 18 ನೆಯ ಶತಮಾನದವರೆಗೆ ಮಧುಗಿರಿ ಮಹಾನಾಡು ಪ್ರಭುಗಳೆಂದು ಪ್ರಸಿದ್ಧರಾದ ಪಾಳೆಯಗಾರರು ಆಳ್ವಿಕೆ ನಡೆಸಿದ್ದರು ವೀರಪ್ಪ ಗೌಡನಿಂದ ಸ್ಥಾಪಿತವಾದ ಈ ಪಾಳೆಯಗಾರರಲ್ಲಿ ಮುಮ್ಮಡಿ ಚಿಕ್ಕಪ್ಪಗೌಡ,ಇಮ್ಮಡಿ ಚನ್ನೇಗೌಡ, ಸಪ್ಪೇಂದ್ರ ಮುಂತಾದವರನ್ನು ಹೆಸರಿಸಬಹುದು.

ಮಧುಗಿರಿಯ ಬೆಟ್ಟದ ಮೇಲಿರುವ ಕೋಟೆಯು ಚಾರಣಿಗರಿಗೆ ಹೇಳಿ ಮಾಡಿಸಿದ ಸ್ಥಳವಾಗಿದೆ. ಬೆಟ್ಟದ ಮೇಲೆ ಹಲವಾರು ದಿಡ್ಡಿಬಾಗಿಲುಗಳು, ಕೋಟೆಯ ಅವಶೇಷಗಳು, ಅನೇಕ ನೀರಿನ ದೋಣೆಗಳು ಬುರುಜುಗಳು ಹಾಗೂ ಗೋಪಾಲಕೃಷ್ಣ ದೇವಾಲಯ ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ.

**ಮಧುಗಿರಿಯ ವೆಂಕಟೇಶ್ವರ ದೇವಾಲಯ:**

ಮಧುಗಿರಿಯ ಊರ ಮಧ್ಯೆ ಶ್ರೀಮಲ್ಲೇಶ್ವರ ಮತ್ತು ಶ್ರೀ ವೆಂಕಟೇಶ್ವರ ದೇವಾಲಯಗಳಿದ್ದು ನೋಡಲು ಬಹಳ ಆಕರ್ಷಕವಾಗಿವೆ. ವಿಜಯನಗರೋತ್ತರ ಕಾಲದಲ್ಲಿ ನಿರ್ಮಿತವಾಗಿರುವ ಎರಡೂ ದೇವಾಲಯಗಳು ಜೋಡಿ ದೇವಾಲಯಗಳೆಂದೇ ಖ್ಯಾತಿಯನ್ನು ಹೊಂದಿದ್ದು, ಒಂದರ ಪಕ್ಕದಲ್ಲಿ ಮತ್ತೊಂದು ದೇವಾಲಯಗಳಿವೆ. ಮಧುಗಿರಿಯ ನಾಡ ಪ್ರಭುಗಳಿಂದ ನಿರ್ಮಿಸಲಾಗಿರುವ ಈ ದೇವಾಲಯಗಳ ವಿನ್ಯಾಸವು ಒಂದನೊಂದು ಹೋಲುತ್ತವೆ. ದೇವಾಲಯಗಳು ವಿಜಯ ನಗರ ಶೈಲಿಯನ್ನು ಅನುಸರಿಸಿರುವುದು ಗಮನಾರ್ಹ.

ಮಧುಗಿರಿಯ ವೆಂಕಟೇಶ್ವರ ದೇವಾಲಯವು ಒಂದು ಬೃಹತ್ ದೇವಾಲಯವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಕಲ್ಯಾಣಮಂಟಪಗಳನ್ನೊಳಗೊಂಡ ಆಕರ್ಷಕ ರಚನೆಯಾಗಿದೆ. ಗರ್ಭಗುಡಿಯಲ್ಲಿ ಸುಮಾರು ಆರು ಅಡಿ ಎತ್ತರದ ಅತ್ಯಂತ ಮನೋಹರವಾದ ಶ್ರೀ ವೆಂಕಟೇಶ್ವರನ ಮೂರ್ತಿಯಿದೆ. ಒಮ್ಮೆಲೆ ನೋಡಿದರೆ ತಿರುಪತಿಯ ವೆಂಕಟೇಶ್ವರನನ್ನೇ ನೆನಪಿಸುವ ಸ್ವಾಮಿಯು ಮೇಲಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ, ಕೆಳಗಿನ ಬಲಗೈ ವರದ ಹಸ್ತವನ್ನು ಹೊಂದಿದ್ದು. ಕೆಳಹಸ್ತವು ಕಟೀಹಸ್ತವಾಗಿರುತ್ತದೆ. ಸ್ವಾಮಿಯು ಕಿರೀಟ ಧಾರಿಯಾಗಿದ್ದು ದೇವನ ವಕ್ಷಃಸ್ಥಳದಲ್ಲಿ ಲಕ್ಷ್ಮೀದೇವಿಯು



ವಿರಾಜಮಾನಳಾಗಿರುವಳು. ನವರಂಗದಲ್ಲಿ ನಾಲ್ಕು ಕಂಬಗಳನ್ನು ಹೊಂದಿದ್ದು ನಡುವೆ ಲಕ್ಷ್ಮೀವೆಂಕಟೇಶ್ವರನ ಸುಂದರ ಉತ್ಸವ ಮೂರ್ತಿಯನ್ನಿಡಲಾಗಿದೆ.

ನವರಂಗದ ಪ್ರವೇಶ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಾದ ಜಯ - ವಿಜಯರಿರುವರು. ನವರಂಗವನ್ನು ಪ್ರವೇಶಿಸಲು ಮೆಟ್ಟಿಲುಗಳಿದ್ದು ಎಡ ಬಲಗಳಲ್ಲಿ ಒಂದು ಕಡೆ ಹನುಮನ ಮೂರ್ತಿಯಿದ್ದರೆ ಮತ್ತೊಂದು ಕಡೆ ಗರುಡನ ಮೂರ್ತಿಗಳಿವೆ. ಮುಖ ಮಂಟಪವು ಬಹಳ ವಿಸ್ತಾರವಾಗಿದ್ದು ಸುಮಾರು 30 ಕಂಬಗಳನ್ನು ಹೊಂದಿರುತ್ತದೆ. ಮುಖ ಮಂಟಪದ ಎಡಬದಿಯಲ್ಲಿ ಕನ್ನಡಿ ಮಂಟಪವಿದೆ. ವಿಶೇಷ ದಿನಗಳಲ್ಲಿ ಉತ್ಸವ ಮೂರ್ತಿಯನ್ನು ಈ ಮಂಟಪದ ಉಯ್ಯಾಲೆ ಮೇಲೆ ಕೂರಿಸುವರು. ಬಹುದೊಡ್ಡ ಪ್ರಾಕಾರವನ್ನು ಹೊಂದಿರುವ ಈ ದೇವಾಲಯದಲ್ಲಿ ಶ್ರೀ ವೆಂಕಟೇಶ್ವರ ದೇವಾಲಯದ ಎಡ ಬಲಗಳಲ್ಲಿ ಶ್ರೀದೇವಿ ಹಾಗೂ ಭೂದೇವಿಯರ ದೇವಾಲಯಗಳಿವೆ.

ವೆಂಕಟೇಶ್ವರ ದೇವಾಲಯವು ಸುಂದರವಾದ ಪ್ರವೇಶ ದ್ವಾರವನ್ನು ಹೊಂದಿದ್ದು, ಮೇಲೆ ಅಂದವಾದ ರಾಯ ಗೋಪುರವಿದೆ. ಪ್ರಸ್ತುತ ಗೋಪುರಕ್ಕೆ ಚಂದ್ರಮುಖ ವಿಮಾನಗೋಪುರವೆಂತಲೂ ಹೆಸರಿದೆ. ಮಧುಗಿರಿಯ ವೆಂಕಟೇಶ್ವರ ದೇವಾಲಯದ ಮೇಲ್ಚಾವಣಿಯನ್ನು ಪ್ರವೇಶಿಸಲು ಮೆಟ್ಟಿಲುಗಳಿವೆ. ಅಟ್ಟದ ಮೇಲೆ ನಿಂತರೆ ಮಧುಗಿರಿಯ ಏಕಶಿಲಾಬೆಟ್ಟದ ಸೌಂದರ್ಯವು ಗೋಚರಿಸುತ್ತದೆ. ಈ ಜೋಡಿ ದೇವಾಲಯದ ಶಿಖರಗಳನ್ನು, ಮಹಾದ್ವಾರ, ಪ್ರಾಕಾರ ಮಂಟಪಗಳನ್ನು ಕ್ರಿ.ಶ. 1690 ರಲ್ಲಿ ಮೈಸೂರು ಅರಸರಾದ ಚಿಕ್ಕ ದೇವರಾಜ ಒಡೆಯರು ನಿರ್ಮಿಸಿರುವರು. ಮಧುಗಿರಿಯ ವೆಂಕಟೇಶ್ವರನು ಪೂರ್ವದಲ್ಲಿ ಸಮೀಪದ ಮಡಕಶಿರಾದ ಕೆರೆಯಲ್ಲಿದ್ದು ಮಧುಗಿರಿ ಮಹಾನಾಡ ಪ್ರಭುವಿನ ಸ್ವಪ್ನದಲ್ಲಿ ಕಾಣಿಸಿಕೊಂಡ ನಂತರ ಇಲ್ಲಿ ತಂದು ಪ್ರತಿಷ್ಠಾಪಿಸಲಾಯಿತೆಂಬ ಐತಿಹ್ಯವಿದೆ. ಶ್ರೀ ವೆಂಕಟೇಶ್ವರ ಸ್ವಾಮಿಗೆ ಶ್ರಾವಣಮಾಸ, ವೈಕುಂಠ ಏಕಾದಶಿಗಳಲ್ಲಿ ಹಾಗೂ ವಿಶೇಷ ಹಬ್ಬಗಳಲ್ಲಿ ಬಹಳ ಸಾಂಗವಾಗಿ ಪೂಜಾ ಕೈಂಕರ್ಯಗಳು ಜರುಗುವುದು.

ಮಧುಗಿರಿ ವೆಂಕಟರಮಣಸ್ವಾಮಿಯ ಬ್ರಹ್ಮರಥೋತ್ಸವವು ಪ್ರತಿವರ್ಷ ಮಾಘ ಶುದ್ಧ ಸಪ್ತಮಿ (ರಥ ಸಪ್ತಮಿಯಂದು) ಅದ್ದೂರಿಯಾಗಿ ಪಾಂಚರಾತ್ರಾಗಮ ಪೂಜಾವಿಧಿ ರೀತ್ಯಾ ಬಹು ವಿಜೃಂಭಣೆಯಿಂದ ಜರುಗುವುದು. ಹತ್ತು ದಿನಗಳ ಕಾಲ ನಡೆಯುವ ರಥೋತ್ಸವವು ಮೊದಲದಿನ ಅಂಕುರಾರ್ಪಣೆ, ಗಜೇಂದ್ರ ಮೋಕ್ಷ ಉತ್ಸವವು ಜರುಗುವುದು. ನಂತರ ಎರಡನೆಯ ದಿನ ಸ್ವಾಮಿಗೆ ಕಲ್ಯಾಣೋತ್ಸವ ಹಾಗೂ ಗರುಡೋತ್ಸವ ಕಾರ್ಯಕ್ರಮಗಳು ನೂರಾರು ಭಕ್ತರ ಸಮ್ಮುಖದಲ್ಲಿ ನಡೆಯುವುದು. ಮೂರನೆಯ ದಿನ ಬೆಳಿಗ್ಗೆ ಸೂರ್ಯ ಮಂಡಲೋತ್ಸವ ಮಧ್ಯಾಹ್ನ ಬ್ರಹ್ಮರಥೋತ್ಸವವು ಬಹಳ ವೈಭವವಾಗಿ ನೆರವೇರುವುದು ನಂತರ ದಿನಗಳಲ್ಲಿ ಕ್ರಮವಾಗಿ ಉಯ್ಯಾಲೋತ್ಸವ ಪ್ರಾಕಾರೋತ್ಸವ, ವಸಂತೋತ್ಸವ, ಶೇಷವಾಹನೋತ್ಸವ, ರಾಸ ಕ್ರೀಡೋತ್ಸವ, (ಸ್ವಾಮಿಯನ್ನು ಗೋಪಿಕಾ ಸ್ತ್ರೀಯರು ಸುತ್ತುವರಿದಿರುವ ಶ್ರೀಕೃಷ್ಣನ ರೂಪದಲ್ಲಿ ಅಲಂಕರಿಸಲಾಗುವುದು) ನಂತರ ವೈಕುಂಠ ಮಾಳಿಗೆ ಉತ್ಸವ (ಉತ್ಸವ ಮೂರ್ತಿಯನ್ನು ಅಟ್ಟದ ಮೇಲೆ ಕೂಡಿಸಲಾಗುವುದು)

ತದನಂತರ ಶಯನೋತ್ಸವ ಸುಪ್ರಭಾತ ಸೇವೆಯೊಂದಿಗೆ ಉತ್ಸವಕ್ಕೆ ತೆರೆ ಬೀಳುವುದು.

ವೇಂಕಟೇಶ್ವರ ಸ್ವಾಮಿಗೆ ನವರಾತ್ರಿಯ ಶುಭದಿನಗಳಲ್ಲಿ ದಶಾವತಾರದ ಅಲಂಕಾರ (ಪ್ರತಿದಿನ ಒಂದೊಂದು ಅವ ತಾರದ ಅಲಂಕಾರ) ಹಾಗೂ ಕೆಲವು ಸಲ ಅಷ್ಟಲಕ್ಷ್ಮಿಯರ ಅಲಂಕಾರಗಳನ್ನು ಬಹಳ ಆಕರ್ಷಕವಾಗಿ ಮಾಡಲಾಗುತ್ತದೆ. ಶ್ರೀ ವೆಂಕಟೇಶ್ವರ ಸ್ವಾಮಿಗೆ ಕಾರ್ತಿಕಮಾಸದ ಕಡೆಯ ಸೋಮವಾರ ಲಕ್ಷ ದೀಪೋತ್ಸವವು ಬಹು ವೈಭವದಿಂದ ಜರು ಗುವುದು.ಮಕರ ಸಂಕ್ರಾಂತಿಯಂದು ಈ ಜೋಡಿ ದೇವಾ ಲಯಗಳಲ್ಲಿ ವಿಶೇಷ ದಿನ, ಆ ಶುಭದಿನದಂದು ಈ ದೇವಾ ಲಯಗಳ ಮಧ್ಯದಲ್ಲಿರುವ ದ್ವಾರವನ್ನು ತೆಗೆಯಲಾಗುತ್ತದೆ. ಸಹಸ್ರಾರು ಭಕ್ತರು ಮೊದಲು ಮಲ್ಲೇಶ್ವರ ಸ್ವಾಮಿಯನ್ನು ದರ್ಶಿಸಿ ನಂತರ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಪದ್ಧತಿ ಬಹಳ ಹಿಂದಿನಿಂದಲೂ ಬಹಳ ಸಾಂಗವಾಗಿ ನಡೆದು ಬಂದಿದೆ. ಮಧುಗಿರಿಯಲ್ಲಿ ದಂಡಿನ ಮಾರಮ್ಮಾ ದೇವಾಲಯವು ಇದ್ದು, ಪ್ರತಿವರ್ಷ ಶಿವರಾತ್ರಿಯ ನಂತರ ಬರುವ ಮಂಗಳವಾರದಲ್ಲಿ ಸಂಭ್ರಮದ ಜಾತ್ರೆ ನಡೆಯುತ್ತದೆ.

ಹೀಗೆ ಬನ್ನಿ ...

ಮಧುಗಿರಿಯು ತುಮಕೂರು ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರವಾಗಿದೆ. ತುಮಕೂರು - ಹಿಂದೂಪುರ ರಸ್ತೆಯ ತುಮಕೂರಿನಿಂದ ಸುಮಾರು 45 ಕಿ.ಮೀ. ದೂರದಲ್ಲಿದೆ. ತುಮಕೂರು , ಪಾವಗಡ, ಸಿರಾ, ಹಿಂದೂಪುರ, ಮುಂತಾದ ಸ್ಥಳಗಳಿಂದ ಮಧುಗಿರಿಗೆ ಸಾಕಷ್ಟು ವಾಹನ ಸೌಕರ್ಯವಿರು ವುದು.

ಮಧುಗಿರಿಯನ್ನು ಸಂದರ್ಶಿಸಿದ ಪ್ರವಾಸಿಗರಿಗೆ ಅಲ್ಲಿಯ ನಾಣ್ಣುಡಿಯಾದ "ಧರೆಯೊಳೆಲ್ಲೇ ಇರಲಿ ಮರೆಯಲಾರೆ ಮಧು ಗಿರಿಯ" ಎಂಬುದು ನೆನಪಾಗದೆ ಇರದು.





# ಶ್ರೀದೇವಿಯ ಪರಿಕಲ್ಪನೆ

– ಡಾ|| ಗುರುರಾಜ ಪೋಶೆಟ್ಟಿಹಳ್ಳಿ
9739369621

ಶ್ರೀ ಲಕ್ಷ್ಮೀಯನ್ನು "ಸಿರಿದೇವಿ" ಎನ್ನುತ್ತಾರೆ. ಅಂದರೆ ಅವಳು "ಸರ್ವೈಶ್ವರ್ಯ ಪ್ರದಾಯಿನೀ". ಸಾಮಾನ್ಯರು ಪ್ರಾಪಂಚಿಕ ಬದುಕಿನಲ್ಲಿ ಇಂದ್ರಿಯಜನ್ಯ ಆನಂದವನ್ನು ಉತ್ಪತ್ತಿ ಮಾಡುವ ಸಂಪನ್ಮೂಲಗಳೆನಿಸಿರುವ ಧನ, ಧಾನ್ಯ, ವಸ್ತ್ರಾಭರಣಗಳು,ಗೃಹ,ಸಂತಾನ,ವಾಹನ, ಆರೋಗ್ಯ ಇತ್ಯಾದಿಗಳನ್ನು ಕೊಡುವ ದೇವತೆ ಶ್ರೀಲಕ್ಷ್ಮಿ ಎಂದು ಭಾವಿಸಿರುತ್ತಾರೆ.ಲಕ್ಷ್ಮೀದೇವಿಯು ಸಾಕಾರಳಾಗಿ ಅವರ ಮುಂದೆ ಮೂರ್ತಿರೂಪದಲ್ಲಿ ಸ್ಥಾಪನೆಯಾದಾಗ ಅವರಿಗೆ ಅವಳು ಕಾಣಿಸುವುದು ಹೇಗೆ?

ನಾಲ್ಕು ಹಸ್ತಗಳು, ಅಭಯಮುದ್ರೆ, ಅತ್ತಿತ್ತ ಆನೆಗಳು ಸುವರ್ಣಕಳಶ, ಕಮಲಾಸನ ಇತ್ಯಾದಿ, ಇವುಗಳ ಹಿಂದಿರುವ ಸಂಕೇತವನ್ನರಿಯಲು ಭಕ್ತರು ಪ್ರಯತ್ನಿಸುವುದು ಅಪರೂಪ. ಶ್ರೀಲಕ್ಷ್ಮಿಯು ವಿಶ್ವಚೈತನ್ಯದ ಪ್ರತೀಕ. ಅವಳ ನಾಲ್ಕು ಕೈಗಳು ಚತುರ್ವಿಧ ಪುರುಷಾರ್ಥಗಳ (ಧರ್ಮ-ಅರ್ಥ-ಕಾಮ-ಮೋಕ್ಷ)ಸಂಕೇತ.ಅಭಯಮುದ್ರೆ ಭೀತಿರಹಿತತೆಯ, ಆನೆಗಳು ತಿಳಿವಳಿಕೆಯ,ಹೊನ್ನ ಕಳಶವು ಸತ್ಕರ್ಮಾ ಚರಣೆಯ ಸಂಕೇತಗಳು.ಇವು ದೇವಿಯ ತತ್ತ್ವದ ಒಂದು ಆಯಾಮ ಮಾತ್ರ.

ಮಂತ್ರಮಹೋದಧಿಯ ಪ್ರಕಾರ ಶ್ರೀಲಕ್ಷ್ಮೀಯಲ್ಲಿ ಮಾವಿನ ಚಿಗುರಿನ ದೇಹಚ್ಛಾಯೆ ಇದೆ. ಇವಳು ಹವಳದಂಥ ತೇಜಸ್ಸನ್ನು ಹೊಂದಿರುವ ಪ್ರೇಮಮಯಿ. ಅಷ್ಟಭುಜಶೋಭಿತೆ. ಕರುಣಾಸಮುದ್ರಳು, ದಕ್ಷಿಣ ಹಸ್ತಗಳಲ್ಲಿ ಪದ್ಮ, ಜಪಮಾಲೆ, ಶೂಲದಂಡ, ಶಕ್ತಿ, ಖಡ್ಗ, ಪರಶು, ಸುದರ್ಶನ ಚಕ್ರ, ಬಾಣಗಳಿವೆ. ಅದೇ ರೀತಿ ನಾಲ್ಕು ಹಸ್ತಗಳಲ್ಲಿ ಅಮೃತಕಳಸ, ಕುಂಡಿಕ, ಗದೆ, ಘಂಟೆ, ಪಾನಪಾತ್ರೆ, ಶಂಖ, ವಜ್ರ, ಧನಸ್ಸು,ಅಭಯ ಇತ್ಯಾದಿಗಳಿವೆ. ದುರ್ಗಾಸಪ್ತಶತಿಯ ಮಧ್ಯಮ ಚರಿತ್ರೆಯ ಪ್ರಾರಂಭದಲ್ಲಿ ಮಹಾಲಕ್ಷ್ಮಿಯನ್ನು ವರ್ಣಿಸಿರುವ ಬಗೆಯನ್ನು ನೋಡಿದರೆ ಸಾಕು.

ಓಂ! ಅಕ್ಷಸ್ರಕ್ರಶುಂ ಗದೇಶುಕು ಲಿಶಂಪದ್ಮಂ ಧನುಃ ಕುಂಡಿಕಾಂ;
ದಂಡಂ ಶಕ್ತಿ ಮಸಿಂ ಚ ಚರ್ಮ ಜಲಜಂ ಘಂಟಾಂ ಸುರಾಭಾಜನಮ್।
ಶೂಲಂ ಪಾಶಸುದರ್ಶನೇ ಚ ದಧತೀಂ ಹಸ್ತೈಃ ಪ್ರವಾಳ ಪ್ರಭಾಂ
ಸೇವೇ ಸೈರಿಭಮರ್ದಿನೀಮಿಹ ಮಹಾಲಕ್ಷ್ಮಿಂ ಸರೋಜಸ್ಥಿತಾಮ್।

ಹೀಗೆಂದು ಭಾವಿಸಿ ದೇವಿಯನ್ನು ಧ್ಯಾನಿಸಬೇಕು ಎಂದು ತಿಳಿಸಲಾಗಿದೆ. ಪ್ರತಿ ಪದದ ಹಿಂದೆ ದೇವಿಯ ಬಗ್ಗೆ ಭಾವಾರ್ಥ-ಪರಮಾರ್ಥಗಳು ಇರುವುದು ಆಗ ಅನುಭವಕ್ಕೆ ಬರುತ್ತದೆ.

### ಪ್ರಕೃತಿ - ಪುರುಷತತ್ವ

ಶ್ರೀಲಕ್ಷ್ಮಿಯು ವಿಷ್ಣುವಿನಲ್ಲೇ ಇದ್ದಾಳೆ. ಪರಮಾರ್ಥ ದೃಷ್ಟಿಯಿಂದ ವಿಷ್ಣುವು ಪುರುಷ, ಲಕ್ಷ್ಮಿಯು ಪ್ರಕೃತಿ. ಪುರುಷನಿಲ್ಲದ ಪ್ರಕೃತಿ ಜಡ. ಪ್ರಕೃತಿ (ಶಕ್ತಿ ) ರಹಿತನಾದ ಪುರುಷ ಕಾರ್ಯ ನಿರ್ವಹಣೆ ಮಾಡಲಾರ ಹೀಗೆ ತ್ರಿಮೂರ್ತಿಗಳು - ಬ್ರಹ್ಮ, ವಿಷ್ಣು, ಶಿವರು - ಪುರುಷರಾಗಿ, ಲಕ್ಷ್ಮಿ, ದುರ್ಗೆ, ಸರಸ್ವತಿಯರು ಪ್ರಕೃತಿಯಾಗಿ ಕೂಡಿಯೇ ಸೃಷ್ಟಿ-ಸ್ಥಿತಿ-ಲಯಕಾರ್ಯಗಳನ್ನು ನಿರ್ವಹಿಸುವುದು ಒಂದು ದೈವಿಕ ನಿಯಮ-ಒಂದು ವ್ಯವಸ್ಥೆ.

ಅಷ್ಟೋತ್ತರ ನಾಮಾವಳಿಯ, ಮೊದಲನೆಯ ನಾಮದಲ್ಲೇ ಶ್ರೀಲಕ್ಷ್ಮಿಯನ್ನು 'ಪ್ರಕೃತಿ' ಎಂದು ಹೇಳಲಾಗಿದೆ. ಇದನ್ನೇ ಸಹಸ್ರನಾಮದಲ್ಲೂ ತಿಳಿಸಲಾಗಿದೆ. ಪ್ರಕೃತಿ - ಪುರುಷ, ಶಿವ - ಶಕ್ತಿ , ವಿಧಾತ - ವಾಕ್, ಹೀಗೆ ಒಂದನ್ನು ಬಿಟ್ಟು ಮತ್ತೊಂದಿಲ್ಲ ತ್ರಿಮೂರ್ತಿಗಳೂ, ತ್ರಿಶಕ್ತಿ ಸ್ವರೂಪಿಣಿಯರೂ ಒಂದೇ ಆಗಿರುವ ಪರಬ್ರಹ್ಮನ ನಾನಾ ರೂಪಗಳು, ಆಗಿರುವುದರಿಂದ ವಿಷ್ಣುವನ್ನೂ ಸಹ "ಪ್ರಜಾ ಪತಯೇ ನಮಃ"(ಪುರುಷವಾಚಕ) ಮತ್ತು "ವಿಶ್ವಯೋನಯೇ ನಮಃ" (ಪ್ರಕೃತಿವಾಚಕ ) ಎಂದು ವರ್ಣಿಸಲಾಗಿದೆ. ಇವರಲ್ಲಿನ ಶಕ್ತಿಯು ತ್ರಿಗುಣಗಳ ಸಂಕೇತವಾಗಿವೆ.

ಶ್ರೀಸೂಕ್ತವು ಶಕ್ತಿತ್ರಯ ಸ್ವರೂಪಿಣಿಯಾಗಿರುವ ಮಹಾಲಕ್ಷ್ಮಿಯ ದಿವ್ಯ ಸ್ತೋತ್ರವಾಗಿದೆ. ಋಗ್ವೇದದ ಖಿಲಮಂತ್ರಗಳ ಭಾಗವೆನಿಸಿರುವ ಈ ಸೂಕ್ತದ ಮೂಲಕ ದೇವಿಯನ್ನು ಆರಾಧಿಸಬಹುದೆಂದು ಪದ್ಮಪುರಾಣದಲ್ಲಿ ಹೇಳ ಲಾಗಿದೆ. ಇದು ಆಧ್ಯಾತ್ಮಿಕ ವಿಕಾಸಕ್ಕೂ ನೆರವಾಗುವಂಥ ಸೂಕ್ತವಾಗಿದೆ. ದೈವ ಯಾ ದೇವಿಯ ಆರಾಧನೆ ಮಾಡುವಾಗ ಈಕೆಯಲ್ಲಿ ವಿಷ್ಣುವಿಗೆ 'ಇದೆ' ಎಂದು ತಿಳಿಸಿರುವ ಈಶ್ವರತ್ವ, ಜಗತ್ತಕಾರಣತ್ವ, ಸರ್ವಜ್ಞತ್ವ, ಸರ್ವವ್ಯಾಪ ಕತ್ವ, ಸರ್ವಶಕ್ತಿತ್ವ ಇತ್ಯಾದಿ ಎಲ್ಲವೂ ಇವೆ ಎಂದು ಅರಿತು ಕೊಂಡು ಆರಾಧಿಸ ಬೇಕು. ಏಕೆಂದರೆ ವಿಷ್ಣು - ಲಕ್ಷ್ಮಿಯರು ಬೇರೆ - ಬೇರೆಯಲ್ಲ.

ಶ್ರೀಸೂಕ್ತದಲ್ಲಿ ತಿಳಿಸಿರುವ ಕೆಲವು ಅಂಶಗಳು ಬಹಳ ಅರ್ಥಪೂರ್ಣ ವಾಗಿವೆ. ಶ್ರೀಲಕ್ಷ್ಮಿಯನ್ನು ಸ್ವಯಂ ಪರಮಾತ್ಮನೇ ಆದ ಅಗ್ನಿದೇವನು ನಮ್ಮ ಬಳಿಗೆ ಕರೆತರಲಿ ಎಂದು ಪ್ರಾರ್ಥಿಸಲಾಗಿದೆ. ಅವಳು ಒಮ್ಮೆ ಬಂದರೆ ಅವಳ ಹಿಂದೆಯೇ ಅವಳ ಲಕ್ಷಣಗಳೆನಿಸಿರುವ ಜ್ಞಾನ, ಐಶ್ವರ್ಯ, ಸುಖ, ಆರೋಗ್ಯ, ಧನ, ಧ್ಯಾನ, ಜಯ ಇತ್ಯಾದಿಗಳು ತಾವಾಗಿಯೇ ಬರುತ್ತವಲ್ಲವೆ? ಅವು ಅವಳೂ ಒಂದೇ ಲಕ್ಷ್ಮಿಯು ಜ್ಯೋತಿಯಂತೆ ಬೆಳಗುವವಳಾದರೂ ಅವಳ ಪ್ರಕಾಶವು ಶಶಿಯ ಬೆಳದಿಂಗಳಿನಂತೆ ಹಿತಕರ. ಅವಳು ಜನಸಾಮಾನ್ಯರ ನಂಬಿಕೆಯಂತೆ "ಚಂಚಲೆ". ಅವಳು ಸ್ಥಿರವಾಗಿರಲೆಂದು (ಆಶಿಸುವವರ ತಿಳಿವಳಿಕೆಗಾಗಿ) ಇಂದ್ರಾದಿದೇವತೆಗಳು ಮಹಿಷಾಸುರವಧಾ ನಂತರ ಲಕ್ಷ್ಮಿ ಯನ್ನು ಹೀಗೆ ಪ್ರಾರ್ಥಿಸುತ್ತಾರೆ.

ಯಾ ಶ್ರೀಃ ಸ್ವಯಂ ಸುಕೃತಿನಾಂ ಭುವನೇಶ್ವಲಕ್ಷ್ಮೀಃ
ಪಾಪತ್ಮನಾಂ ಕೃತಧಿಯಾಂ ಹೃದಯೇಷು ಬುದ್ಧಿಃ।
ಶ್ರದ್ಧಾ ಸತಾಂ ಕುಲಜನಂಪ್ರಭವಸ್ಯ ಲಜ್ಜಾ ತಾಂ
ತ್ವಾಂ ನತಾಃ ಪರಿಪಾಲಯ ದೇವಿ ವಿಶ್ವಮ್ ॥

ಅಂದರೆ ಮುಖ್ಯವಾಗಿ ಅರಿತುಕೊಳ್ಳಬೇಕಾದ ವಿಷಯವೆಂದರೆ ದೇವಿಯು ಪುಣ್ಯಾತ್ಮರ ಗೃಹಗಳಲ್ಲಿ 'ಲಕ್ಷ್ಮಿ'ಯಾಗಿಯೂ ಪಾಪಿಗಳ ಸದನಗಳಲ್ಲಿ 'ಅಲಕ್ಷ್ಮಿ'ಯಾಗಿಯೂ ಇರುತ್ತಾಳೆ.ಆದ್ದರಿಂದ ದೇವಿಯನ್ನು ಸ್ಥಿರವಾಗಿ ಉಳಿಸಿ ಕೊಳ್ಳಬೇಕಾದರೆ ನಮ್ಮಲ್ಲಿ ಶ್ರದ್ಧೆ ಇತ್ಯಾದಿ ಸದ್ಗುಣಗಳು ಇರಲೇಬೇಕು. ನಾವು ಸುಸಂಸ್ಕೃತರಾಗಿದ್ದರೆ ಮಾತ್ರ ನಮ್ಮಲ್ಲಿ ನಿಶ್ಚಯಾತ್ಮಕ ಬುದ್ಧಿರೂಪದಲ್ಲಿ ಅವಳು ನೆಲೆಸಿರುತ್ತಾಳೆ.



ಚಿಕ್ಕಶೇಷವಾಹನ
ನೋಡಿರೋ! ಸಿರಿಗಳ ತಾಯಿ ಚಿಕ್ಕ ಶೇಷವಾಹನೋತ್ಸವ ದರ್ಶನ!
ಅಶೇಷ ದೋಷಸಮೂಹಕ್ಕೆ ಪಲಾಯನ!

ದೊಡ್ಡಶೇಷವಾಹನ
ಏಳು ಹೆಡೆಗಳ ದೊಡ್ಡಶೇಷನ ಮೇಲೆ...... ತಾಯಿ ಶ್ರೀಪದ್ಮಾವತಿದೇವಿಯನ್ನು
ದರ್ಶಿಸಿದರೆ ಸಾಕು! ಸಕಲ ಕೋರಿಕೆಗಳು ಸಿದ್ಧಿಸುತ್ತದೆ !!

ಹಂಸವಾಹನ
ಚಿನ್ನದ ಹಂಸದ ಮೇಲೆ ವಿಹರಿಸುವ ಜ್ಞಾನದಾತ್ರಿ
ಶ್ರೀ ಪದ್ಮಾವತಿಯನ್ನು ದರ್ಶಿಸಿ! ಪರಮಹಂಸರಾಗಿ
ಆಧ್ಯಾತ್ಮಿಕತೆಯಲ್ಲಿ ವಿಹರಿಸಿ!!

ಮುತ್ತಿನ ಚಪ್ಪರ
ನೋಡಿರೋ! ಮುತ್ತಿನ ಚಪ್ಪರದಲ್ಲಿ ಶೋಭಿಸುತ್ತಿರುವ ಶ್ರೀ ಪದ್ಮಾವತಿ!
ಎಲ್ಲರನ್ನು ಅನುಗ್ರಹಿಸುತ್ತಿರುವ ಆ ತಾಯಿಗೆ ಜಾಂಗುಭಲೆ!

ಸಿಂಹವಾಹನ
ಅರಿವೀರ ಭಯಂಕರಿ ಅಲಮೇಲುಮಂಗ! ಭಕ್ತರನ್ನು ಅರಿಷಡ್ವರ್ಗಗಳಿಂದ
ರಕ್ಷಿಸಲು ಸಿಂಹವಾಹಿನಿಯಾಗಿ ಬರುತ್ತಿದ್ದಾಳೆ! ಜಯಹೋ ಮಾತೆ! ಜಯ
ಜಯಹೋ!!

ಕಲ್ಪವೃಕ್ಷವಾಹನ
ಕಲ್ಪವೃಕ್ಷದ ನೆರಳಿನಲ್ಲಿ ಬೆಟ್ಟದೊಡೆಯನ ಪಟ್ಟದ ರಾಣಿ
ಶ್ರೀ ಪದ್ಮಾವತಿ! ಬೇಡಿರಿ ಬೇಡಿರಿ! ಆಕೆಯು ನೀಡುವಳು ಬೆಟ್ಟದಷ್ಟು
ಸಿರಿಯನ್ನು!

ಹನುಮದ್ವಾಹನ
ಅಂದು ಶ್ರೀರಾಮನನ್ನು, ಆ ರಾಮನ 'ರಾಮ' ನೂ ನಾನೇ !
ರಾಮಬಂಟ ಹನುಮಂತನ ಮೇಲೆ ನಯನವಾಗಿ ದರ್ಶನ ನೀಡುತ್ತಿರುವ
ಶ್ರೀ ವೆಂಕಟೇಶ್ವರನ ರಮಣೀದೇವಿ ಅಲಮೇಲುಮಂಗ!

ಪಲ್ಲಕಿಯಲ್ಲಿ ಮೋಹಿನಿ
ಅದೇ! ನೋಡಿರೋ! ಮೋಹಿನಿರೂಪ!! ಅದೇ ಶ್ರೀ ವೈಕುಂಠವನ್ನು
ಭುವಿಗೆ ತಂದ ಶೃಂಗಾರ ಶ್ರೀದೇವಿಯ ಮೋಹರೂಪ!!



**ಗಜವಾಹನ**
ಅದೇ ನೋಡಿರೀ! ದರ್ಶಿಸಿ! ಗಜರಾಜನ ಮೇಲೆ ಗಂಭೀರವಾಗಿ ವಿಹರಿಸುತ್ತಿರುವ ಶ್ರೀ ಮಹಾಲಕ್ಷ್ಮಿ! ಗಜಲಕ್ಷ್ಮಿಯಾದ ಶ್ರೀ ಪದ್ಮಾವತಿಯು ಐಶ್ವರ್ಯ ಪ್ರದಾಯಿನಿ !!

**ಸರ್ವಭೂಪಾಲವಾಹನ**
ಅದೇ ! ದರ್ಶಿಸಿ ಸರ್ವಭೂಪಾಲ ವಾಹನದಲ್ಲಿ ಸಪ್ತಗಿರೀಶನ ರಾಣಿ! ಅಕೆ ಅಮರವಂದಿತ ಅಲಮೇಲುಮಂಗ! ಕಷ್ಟವನ್ನು ತೀರಿಸುವ ಆಕಾಶಗಂಗೆ!!

**ಗರುಡವಾಹನ**
ವೇದಸ್ವರೂಪನಾದ ಗರುಡನ ಮೇಲೆ ದರ್ಶನ ನೀಡುತ್ತಿರುವ ವೇದಮಾತೆ ಶ್ರೀ ಪದ್ಮಾವತಿ! 'ಗರುಡನ ಮೇಲೇರಿ ಭಕ್ತ ಜನರಿಗೆ' ಆಶೀರ್ವದಿಸುತ್ತಿರುವ ಮಹಾತಾಯಿ!

**ಸೂರ್ಯಪ್ರಭಾವಾಹನ**
ಸೂರ್ಯಪ್ರಭವಾಹನದಲ್ಲಿ ಸೂರ್ಯರಶ್ಮಿಯಂತೆ ಸಾವಿರ ಕಿರಣಗಳೊಂದಿಗೆ ಶ್ರೀವೆಂಕಟೇಶನ ರಾಣಿ ಅಲಮೇಲುಮಂಗ! ಅ ತಾಯಿ ದರ್ಶನ, ಆರೋಗ್ಯ, ಆನಂದ, ಐಶ್ವರ್ಯಪ್ರದ!

**ಚಂದ್ರಪ್ರಭವಾಹನ**
ತಂಪಾದ ಇರುಳಿನಲ್ಲಿ, ಬೆಳ್ಳನೆ ಚಂದ್ರಪ್ರಭದಲ್ಲಿ ಚಂದ್ರ ಸಹೋದರಿ, ಚೆಲುವಿನ ತಾಯಿ ಪದ್ಮಾವತಿ! ಅ ತಾಯಿಯನ್ನು ದರ್ಶಿಸಿದರೆ ಸಾಕು, ನಮಗೆ ಸಿಗುತ್ತದೆ ಮನಃಶಾಂತಿ!!

**ರಥೋತ್ಸವ**
ತಿರುಚಾನೂರು ತಿರುವೀಧಿಗಳಲ್ಲಿ ಮೆಲ್ಲ ಮೆಲ್ಲಗೆ ಮುಂದೆ ಸಾಗುತ್ತಿರುವ ತಿರುಮಲೇಶನ ರಾಣಿಯ ದಿವ್ಯರಥ! ಅ ರಥೋತ್ಸವ ದರ್ಶನ ಮನೋರಥವನ್ನು ತೀರಿಸುವ ದಿವ್ಯ ಸಂದರ್ಶನ!

**ಅಶ್ವವಾಹನ**
ನೀನು ತುರುಗದ ಮೇಲೆ ಮೆರೆಯೇ - ಎಂಬಂತೆ ಅಶ್ವವಾಹನದ ಮೇಲೆ ವಿಹರಿಸುತ್ತಿರುವ ಅಲಮೇಲುಮಂಗ! ಕಲಿಕಲ್ಮಷ ನಾಶವು ಅ ತಾಯಿ ದರ್ಶನವು!!

**ವಸಂತೋತ್ಸವ**
'ವಾಡಲ ವಾಡಲ ವೆಂಟ ವಸಂತಮು, ಜಾಡತೋ ಚಲ್ಲೆರು ನೀಪೈ, ಜಾಜರ ಜಾಜರ' - ಎಂಬಂತೆ ಸಖಿಯರೊಡನೆ ವಸಂತೋತ್ಸವ ಆಡುತ್ತಿರುವ ವಯ್ಯಾರಿಭಾಮೆ ಶ್ರೀ ಅಲಮೇಲುಮಂಗ

ದೇವಿಯು ದಯಾಮೂರ್ತಿ ಎಂಬುದು ನಿಜ. ಆದರೆ ಲೋಕಕಲ್ಯಾಣಕ್ಕೆ ಉದ್ದೇಶಪೂರ್ವಕವಾಗಿ ಹಾನಿಯುಂಟು ಮಾಡುವವರ ಪಾಲಿಗೆ ಆಕೆ 'ಭಯಂಕರೀ'. ಶ್ರೀಲಕ್ಷ್ಮಿಯು ಮಹಿಷ ಮರ್ದಿನಿಯಾಗಿ ಕೋಲ್ಹಾಪುರ ಭಯಂಕರಿಯಾಗಿ ಏಕೆ ಬದಲಾದವಳು? ಉತ್ತರ ಸ್ಪಷ್ಟ. ದುಷ್ಟಶಕ್ತಿಗಳ ನಿರ್ಮೂಲಕ್ಕಾಗಿ, ರಜಸ್ತೋಮಗುಣಗಳ ಪ್ರಾಬಲ್ಯದಿಂದ ಸತ್ವಗುಣವು ತೊಂದರೆಗೀಡಾಗಿ ಹಿನ್ನೆಲೆಗೆ ಸರಿದು, ಜಗತ್ತಿನಲ್ಲಿ ಇರಬೇಕಾದ ಸಹಜವಾದ ದೈವೀ ಪ್ರಕಾಶದ ಬದಲು ಕೃತಕವಾದ ಬೆಳಕು ಮೂಡತೊಡಗಿದರೆ ಜಗನ್ನಿಯಾಮಕತ್ವ ಲಕ್ಷಣದಿಂದ ಕೂಡಿದ ಲಕ್ಷ್ಮೀ ದೇವಿ ವಿಶಿಷ್ಟರೂಪ ಧರಿಸಿ ಈಶ್ವರೀಯ ಪ್ರಕಾಶವನ್ನುಂಟು ಮಾಡುವುದು ಅನಿವಾರ್ಯವಾಗುತ್ತದೆಂಬ ಅಂಶವು ಮುಖ್ಯ ವಾದದ್ದು. ಶ್ರೀಕೃಷ್ಣ (ವಿಷ್ಣು) ನೂ ಇದೇ ಕೆಲಸ ಮಾಡುವುದಾಗಿ ಅರ್ಜುನಿಗೆ ತಿಳಿಸಿರುವ ಸಂಗತಿಯು ಭಗವದ್ಗೀತೆಯಲ್ಲಿ ಕಂಡು ಬರುತ್ತದೆ. ಅಲ್ಲಿ ಶ್ರೀಕೃಷ್ಣನು ತಾನೇ ಪ್ರಕೃತಿ, ತಾನೇ ಪುರುಷ, ತಾನೇ ಈಶ್ವರ ಇತ್ಯಾದಿಯಾಗಿ "ಸೃಜಾಮ್ಯಹಮ್" ಎನ್ನುತ್ತಾನೆ. ಅಷ್ಟೇ ಅಲ್ಲ. "ಧರ್ಮ ಸಂಸ್ಥಾಪಕನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದೂ ಹೇಳುತ್ತಾನೆ. ಇದರರ್ಥ ಇನ್ನಷ್ಟು ಸ್ಪಷ್ಟ ಪರಬ್ರಹ್ಮಶಕ್ತಿಯು ಸ್ತ್ರೀಯು ಪುರುಷರೂಪಧರಿಸಿ ಅವತರಿಸಿ ಆಸುರೀ ಗುಣಗಳನ್ನು ಹಿಂದಕ್ಕೆ ಸರಿಸಿ ದೈವೀ ಗುಣಗಳು ಪ್ರಕಾಶಕ್ಕೆ ಬರುವಂತೆ ಮಾಡುತ್ತದೆ. ಪುರುಷ ಮತ್ತು ಪ್ರಕೃತಿ (ವಿಷ್ಣು ಮತ್ತು ಲಕ್ಷ್ಮಿ)ಗಳು ಅಭಿನ್ನರಾದ್ದರಿಂದ ಈ ದುಷ್ಟ ನಿಗ್ರಹಕಾರ್ಯಕ್ಕೆ ಅವಶ್ಯಕತೆಗೆ ತಕ್ಕ ರೂಪ ಧಾರಣೆಯಾಗುತ್ತದೆಂದು ತಿಳಿಯಬೇಕು.

### ಅಷ್ಟಲಕ್ಷ್ಮಿ ತತ್ತ್ವ

ಲಕ್ಷ್ಮಿದೇವಿಯನ್ನೂ ಪೂಜಿಸುವಾಗ ಜನರು ತಮ್ಮ ಮನಸ್ಸುಗಳಲ್ಲಿ ವಿವಿಧ ಉದ್ದೇಶಗಳನ್ನು ಹೊಂದಿರುತ್ತಾರೆ. ಒಂದೊಂದು ಉದ್ದೇಶ ಈಡೇರಿಸಲು ಲಕ್ಷ್ಮಿಯು ವಿವಿಧ ಶಕ್ತಿಗಳನ್ನು ಆಹ್ವಾನಿಸಿ ಅರ್ಚಿಸುತ್ತಾರೆ. ಶ್ರೀಲಕ್ಷ್ಮಿ ಅಂದರೆ ಪ್ರಕೃತಿಯ ಭೂ ರೂಪದಿಂದ ಅನುಗ್ರಹಿಸುವ ವಿಚಾರವನ್ನು ಈಗಾಗಲೇ ತಿಳಿಸಲಾಗಿದೆ. ಲಕ್ಷ್ಮಿಶಕ್ತಿಯ ಸಿದ್ಧಿಯನ್ನು, ಸಮೃದ್ಧಿಯನ್ನು ಎಂಟು ವಿಧವಾಗಿ ಗುರುತಿಸಲಾಗಿದ್ದು, ಇದು 'ಅಷ್ಟಲಕ್ಷ್ಮಿಯರ' ಪರಿಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಎಲ್ಲೆಲ್ಲಿ ಸತ್ವ ತುಂಬಿರುವುದೋ ಅಲ್ಲಿ ಲಕ್ಷ್ಮಿ ಇರುತ್ತಾಳೆ. ಸತ್ವವೇ ಧೈರ್ಯ. ಆದ್ದರಿಂದ ಎಲ್ಲವೂ ಸಾಧ್ಯ. (ಲಾಭಾಸ್ವಾ ಲಕ್ಷ್ಮಿ, ಲಕ್ಷಣಾದ್ವಾಲಕ್ಷ್ಮೀ, ಲಪ್ಯನಾದ್ವಾಲಕ್ಷ್ಮಿಗ್ಮೀ ಲಕ್ಷತೇರ್ವಾ,ಲಗ್ನತೇರ್ವಾ,ಲಜ್ಜಿತೇರ್ವಾಲಕ್ಷ್ಮಿ). ಜ್ಞಾನ, ಐಶ್ವರ್ಯ, ಸುಖ, ಆರೋಗ್ಯ, ಧ್ಯಾನ, ಜಯ - ಇವೆಲ್ಲವೂ ಅವಳ ಲಕ್ಷಣಗಳೇ

ಆಗಿವೆ.ಮಾನವರ ಇಷ್ಟದೈವಗಳಾಗಿ ಅಷ್ಟ ಲಕ್ಷ್ಮಿಯರು ಪೂಜೆಗೊಳ್ಳುತ್ತಾರೆ.

ಆದಿಲಕ್ಷ್ಮಿ ಜಗತ್ತಿನ ಮೂಲಪ್ರಕೃತಿಯ ಸಂಕೇತ ಲೋಕ ವಿಖ್ಯಾತ ಪಾತ್ರಗಳಾಗಿರುವ ಸೀತಾ, ರುಕ್ಮಿಣೀ, ಭಾಮ, ಮಾಯಾ ಮೊದಲಾದವರು ಆದಿಲಕ್ಷ್ಮಿಯ ಅಂಶಗಳೇ, ಅಂದರೆ ಸರ್ವ ವ್ಯಾಪಕತ್ವ ಹೊಂದಿರುವ ಆದಿಶಕ್ತಿಯೇ ಮಹಾಲಕ್ಷ್ಮಿ, ವಿದ್ಯಾ ಲಕ್ಷ್ಮೀಯು ದಾರಿದ್ರ್ಯಧ್ವಂಸಿನಿಯಾದ ದೇವತಾ ಸ್ವರೂಪಳೂ, ಪುರುಷಾರ್ಥಗಳನ್ನು ಪೂರೈಸುವವಳೂ, ಇವಳೇ ಸರ್ವಪ್ರಾಣಿಗಳಿಗೂ ಆಧಾರ, ಧನ, ಧಾನ್ಯ,ಗೋ ಇತ್ಯಾದಿ ಸಂಪತ್ತುಗಳೊಂದಿಗೆ ವಿದ್ಯೆ ಎಂಬ ಐಶ್ವರ್ಯವನ್ನೂ ಕೊಡುವವಳು ಈ ದೇವಿ.ಇವಳು ಧನಲಕ್ಷ್ಮಿಯೂ ಹೌದು ಭೂಮಿಯನ್ನು ಪ್ರವೇಶಿಸಿ, ಮಣ್ಣಿನಲ್ಲಿ ಸತ್ವ ರೂಪವಾಗಿ ಹೊಕ್ಕು ಗಿಡ ಮರ-ಬಳ್ಳಿಗಳಿಗೆ ಬಣ್ಣ, ರಸ, ರುಚಿ, ಶಕ್ತಿಗಳನ್ನು ನೀಡಿ ಅವುಗಳ ಕೃಷಿಯಲ್ಲಿ ನಿರತರಾಗಿರುವವರಿಗೆ ಅನುಗ್ರಹಿಸುವ ಪರಾಶಕ್ತಿಯೇ ಧಾನ್ಯಲಕ್ಷೀ ಲಕ್ಷ್ಮಿ ಹಿರಣ್ಮಯೀ, ಇವಳು ಅನುಗ್ರಹಿಸಿದರೆ ಸಾಕು ಅಮೂಲ್ಯ ಹರಳುಗಳೂ, ಬೆಲೆಬಾಳುವ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ ಇತ್ಯಾದಿ ಲೋಹಗಳೂ, ಸಂಪದ್ಭರಿತ ಭೂಮಿಯೂ ಲಭಿಸುತ್ತದೆ. ಈ ಶಕ್ತಿ ಇರುವುದರಿಂದ ಇವಳು ಐಶ್ವರ್ಯಲಕ್ಷ್ಮಿ ಎನಿಸಿಕೊಂಡಿದ್ದಾಳೆ. ಮನುಷ್ಯರಲ್ಲಿ ಕಾರ್ಯನಿರ್ವಹಣಾಶಕ್ತಿ ಮೂಡಲು ಬೇಕಾದ ಶಕ್ತಿ ಸಂಚಯನ ಕ್ರಿಯೆ ನಡೆಸುವ ದೇವಿ ಈ ಲಕ್ಷ್ಮಿಯೇ. ಜನರು ವೀರರಾಗಿ ಶೋಭಿಸಲು ಕಾರಣಳು ಇವಳು. ಇವಳನ್ನು ಧೈರ್ಯಲಕ್ಷ್ಮಿ ಎನ್ನುತ್ತಾರೆ. ಯಶಸ್ಸು, ಕೀರ್ತಿ ವಿಜಯಗಳನ್ನು ಪಡೆಯಲು ಪ್ರಯತ್ನಿಸಿದಾಗ ಅಡ್ಡಿಯಾಗುವಂಥದ್ದನ್ನೆಲ್ಲ ನಿವಾರಿಸಿ ಅವಳ ಆರಾಧಕರ ಪಾಲಿಗೆ ಅವಳು ವಿಜಯಲಕ್ಷ್ಮಿಯಾಗಿ ಕಂಗೊಳಿಸುತ್ತಾಳೆ. ಐಸಿರಿಯ ಮದದಿಂದ ಅಹಂಕಾರ ತುಂಬಿ ವರ್ತಿಸಬಾರದೆಂಬ ಎಚ್ಚರಿಕೆ ನೀಡಲು ಗಜಲಕ್ಷ್ಮಿ ಇದ್ದಾಳೆ. ಮದದ ಸಂಕೇತವಾದ ಆನೆಗಳು ಇವಳ ಬಳಿ ಸದಾ ಸೇವಕರಂತೆ ಇರುವುದೇ ಇದಕ್ಕೆ ಸಾಕ್ಷಿ. ಇನ್ನು ಕಡೆಯದಾಗಿ ತಾನು ನಿತ್ಯ ಪುಷ್ಟಳಾಗಿ ಎಲ್ಲರನ್ನೂ ಪೋಷಿಸುತ್ತಾ ಇರುವ ಈ ಶಕ್ತಿಯನ್ನು ಸಂತಾನ ಭಾಗ್ಯಕ್ಕಾಗಿ ಅರ್ಚಿಸುತ್ತಾರೆ. ಆದ್ದರಿಂದ ಇವಳಿಗೆ ಸಂತಾನಲಕ್ಷ್ಮಿ ಎಂದು ಹೆಸರಿದೆ. ದೀಪಾವಳಿ ಮತ್ತು ನವರಾತ್ರಿಗಳಲ್ಲಿ ಲಕ್ಷ್ಮಿ ಪೂಜೆಗೆ ವಿಶೇಷ ಮಹತ್ವವುಂಟೆಂಬುದನ್ನು ಎಲ್ಲರೂ ಗಮನಿಸಿರಬಹುದು.



### ದೀಪಲಕ್ಷ್ಮೀ

ದೀಪವು ಲಕ್ಷ್ಮಿಯ ಸ್ವರೂಪ. ಇದು ಕತ್ತಲೆಯನ್ನು ನೀಗಿಸಿ ಬೆಳಕನ್ನು ತಂದು ಕೊಡುತ್ತದೆ. ಪ್ರತಿದಿನ ಮನೆಯ ಮುಂದೆ ಅಥವಾ ತುಳಸಿಯ ಮುಂದೆ ದೀಪ ಬೆಳಗುವುದರಿಂದ ದಾರಿದ್ರ್ಯವು ತೊಲಗಿ ಲಕ್ಷ್ಮಿಯ ಪೂರ್ಣಾನುಗ್ರಹವು ಲಭಿಸುತ್ತದೆ. ದೀಪವಿರುವಲ್ಲಿ ದೇವತಾ ಶಕ್ತಿಗಳು ನೆಲೆಸಿರುತ್ತವೆಂಬುದು ಆರ್ಷೇಯವಾಣಿ.

ದೀಪಂ ಜ್ಯೋತಿಃ ಪರಬ್ರಹ್ಮ
ದೀಪಂ ಜ್ಯೋತಿರ್ಜನಾರ್ದನ ।
ದೀಪೇನ ಸಾಧ್ಯತೇ ಸರ್ವಂ
ದೀಪಲಕ್ಷ್ಮೀ ನಮೋಸ್ತುತೇ ॥

(ದೀಪವು ಲಕ್ಷ್ಮಿಯ ರೂಪ. ಕತ್ತಲೆಯನ್ನು ಕಳೆಯುವ ಶಕ್ತಿ ದೀಪಕ್ಕಿರುವುದರಿಂದ ದೀಪವು ಪೂಜಾರ್ಹ ವಸ್ತುವಾಗಿದೆ.ದೇವತಾರ್ಚನೆಯಲ್ಲಾಗಲೀ, ಶುಭ ಕಾರ್ಯಗಳಲ್ಲಾಗಲೀ ಮೊದಲು ದೀಪವನ್ನು ಹಚ್ಚಿ ಬಳಿಕ ಕಾರ್ಯವನ್ನು ಪ್ರಾರಂಭಿಸುತ್ತೇವೆ.)

### ಲಕ್ಷ್ಮಿಯ ಅಂಶಾವತಾರಗಳು:

### ವೇದವತಿ:

ರಥಧ್ವಜನೆಂಬ ರಾಜನು ತನ್ನ ವಂಶದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದ ಮಹಾಲಕ್ಷ್ಮಿಯ ಪೂಜೆಯನ್ನು ನಿಲ್ಲಿಸಿದನು. ಇದರಿಂದ ಅವನಿಗೆ ಲಕ್ಷ್ಮಿಯ ಅನುಗ್ರಹವು ತಪ್ಪಿ ಶತ್ರುಗಳಿಂದ ಸೋತು ರಾಜ್ಯವನ್ನು ಕಳೆದುಕೊಂಡನು. ರಥಧ್ವಜನ ಮಕ್ಕಳಾದ ಕುಶಧ್ವಜ-ಧರ್ಮಧ್ವಜರು ತಂದೆಯು ಎಸಗಿದ ತಪ್ಪಿಗೆ ವ್ಯಥೆ ಪಟ್ಟು ತಪಸ್ಸು ಮಾಡಿ ಲಕ್ಷ್ಮಿಯನ್ನು ಒಲಿಸಿಕೊಂಡರು.ಅವರ ಕೋರಿಕೆಯಂತೆ ಕಳೆದು ಹೋದ ರಾಜ್ಯವು ಮರಳಿ ಲಭಿಸಿ ಲಕ್ಷ್ಮಿಯು ಕುಶಧ್ವಜನ ಮಗಳಾಗಿ ಜನಿಸಿದಳು. ಹುಟ್ಟಿದಾಗಲೇ ವೇದ ಮಂತ್ರಗಳನ್ನು ಪಠಿಸುತ್ತಿದ್ದ ಕಾರಣ ಮತಾ-ಪಿತೃಗಳು ಅವಳಿಗೆ ವೇದವತಿ ಎಂಬ ಹೆಸರಿಟ್ಟರು. ದೊಡ್ಡ



ವಳಾದ ಮೇಲೆ ಅವಳು ವಿಷ್ಣುವನ್ನು ಪತಿಯನ್ನಾಗಿ ಪಡೆಯಲು ಪುಷ್ಕರ ಕ್ಷೇತ್ರದಲ್ಲಿ ತಪೋನಿರತಳಾದಳು. ಇದೇ ವೇಳೆಯಲ್ಲಿ ಲಂಕಾಧಿಪತಿ ರಾವಣನು ಅಲ್ಲಿಗೆ ಬಂದು ಪರಮ ಸುಂದರಿಯಾದ ವೇದವತಿಯಲ್ಲಿ ಅನುರಕ್ತನಾಗಿ ತನ್ನನ್ನು ವಿವಾಹವಾಗಬೇಕೆಂದು ಬಲಾತ್ಕರಿಸಿದನು. ಇದರಿಂದ ಕುಪಿತಳಾದ ವೇದವತಿಯು ರಾವಣನ ಕೋರಿಕೆಯನ್ನು ನಿರಾಕರಿಸಿ ಮುಂದೆ ಅವನ ಸಾವಿಗೆ ತಾನೇ ಕಾರಣಳಾಗುವುದಾಗಿ ಶಪಿಸಿ ಅಗ್ನಿಕುಂಡದಲ್ಲಿ ದೇಹತ್ಯಾಗ ಮಾಡಿದಳು.

### ಸೀತೆ

ಕೃತಯುಗದಲ್ಲಿನ ವೇದವತಿಯು ತ್ರೇತಾಯುಗದಲ್ಲಿ ಸೀತೆಯೆಂಬ ಹೆಸರಿನಿಂದ ವಿದೇಹದ ಜನಕರಾಜನ ಪುತ್ರಿಯಾಗಿ ಬೆಳೆದಳು. ಅಯೋಧ್ಯಾಧಿಪತಿ ದಶರಥನ ಪಟ್ಟದ ರಾಣಿ ಕೌಸಲ್ಯೆಯ ಗರ್ಭದಲ್ಲಿ ವಿಷ್ಣುವೇ ಶ್ರೀರಾಮನಾಗಿ ಜನಿಸಿದನು. ಮುಂದೆ ರಾಮನು ವಿಶ್ವಾಮಿತ್ರ ಋಷಿಗಳ ಕೋರಿಕೆಯಂತೆ ಅವರ ಯಾಗಸಂರಕ್ಷಣೆ ಮಾಡಿ ಅವರೊಂದಿಗೆ ಜನಕನ ರಾಜಧಾನಿ ಮಿಥಿಲೆಗೆ ಬಂದು ಪಣವಾಗಿಟ್ಟಿದ್ದ ಶಿವಧನುಸ್ಸನ್ನು ಮುರಿದು ಸೀತೆಯನ್ನು ವಿವಾಹವಾದನು. ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದವು. ರಾಮಾಯಣದಲ್ಲಿ ಸೀತಾರಾಮರ ಕತೆಯು ಸವಿಸ್ತಾರವಾಗಿ ಹೇಳಲ್ಪಟ್ಟಿದೆ.

### ತುಳಸಿ

ಧರ್ಮಧ್ವಜನ ಸತಿಯಾದ ಮಾಧವಿಯಲ್ಲೂ ಲಕ್ಷ್ಮಿಯು ತನ್ನ ಒಂದಂಶದಿಂದ ತುಳಸಿಯಾಗಿ ಅವತರಿಸಿದಳು. ಪ್ರಾಪ್ತ ವಯಸ್ಸಿಗೆ ಬಂದಮೇಲೆ ಅವಳು ವಿಷ್ಣುವನ್ನು ವಿವಾಹವಾದಳು. ವಿಷ್ಣುವು ಅವಳಿಗೆ 'ನೀನು ದೇಹತ್ಯಾಗ ಮಾಡಿ ನನ್ನೊಡನೆ ಇರು. ನಿನ್ನ ದೇಹವು ಗಂಡಕೀ ನದಿಯಾಗಿ ಹರಿಯಲಿ. ಸಾಲಿಗ್ರಾಮ ಶಿಲೆಯಾಗಿ ನಾನು ಆ ನದಿಯಲ್ಲಿ ವಾಸಿಸುತ್ತೇನೆ. ನಿನ್ನ ಕೇಶವು ತುಳಸೀ ಗಿಡವಾಗಿ ಜನರ ಪೂಜೆಗೆ ಅರ್ಹವಾಗಲಿ' ಎಂಬುದಾಗಿ ಹೇಳಿದನು. ವಿಷ್ಣುವಿನ ಸಂಕಲ್ಪದಂತೆ ತುಳಸಿಯ ದೇಹವು ಗಂಡಕೀ ನದಿಯಾಗಿ ಹರಿದು ವಿಷ್ಣುವು ಸಾಲಿಗ್ರಾಮ ಶಿಲೆಯಾಗಿ ಅದರಲ್ಲಿ ನೆಲೆಸಿದನು. ತುಳಸಿಯ ಕೇಶದಿಂದ ತುಳಸೀ ಗಿಡವು ಹುಟ್ಟಿತು.

ತುಳಸೀ ಗಿಡವನ್ನು ಬೃಂದಾವನದಲ್ಲಿಟ್ಟು ಸುಮಂಗಲಿಯರು ನಿತ್ಯವೂ ಅದನ್ನು ಪೂಜಿಸಿ ಪ್ರಾರ್ಥನೆ ಮಾಡಿ ಕೊಳ್ಳುವುದು ಪರಂಪರೆಯಿಂದ ಬಂದಿದೆ. ತುಳಸಿ ಸುಖ- ಸೌಭಾಗ್ಯಗಳನ್ನು ಅನುಗ್ರಹಿಸುವ ದೇವತೆ.

ಮನಃ ಪ್ರಸಾದಜನನೀ ಸುಖಸೌಭಾಗ್ಯವರ್ಧಿನೀ ।
ಆಧಿವ್ಯಾಧಿಂ ಚ ಹರ ಮೇ ತುಳಸೀ ತ್ವಾಂ ನಮಾಮ್ಯಹಮ್ ॥

ಮನಸ್ಸಿಗೆ ಪ್ರಸನ್ನತೆಯನ್ನುಂಟು ಮಾಡುವ, ಸುಖವನ್ನೂ ಸೌಭಾಗ್ಯವನ್ನೂ ವೃದ್ಧಿಮಾಡುವ ಮನೋವ್ಯಥೆ ಮತ್ತು ರೋಗಗಳನ್ನು ಪರಿಹರಿಸುವ ಎಲೈ ತುಳಸೀ ದೇವಿಯೇ! ನಿನಗೆ ನಮಸ್ಕರಿಸುತ್ತೇನೆ.

**ರುಕ್ಮಿಣಿ:**

ದ್ವಾಪರಯುಗದಲ್ಲಿ ವಿಷ್ಣುವು ಕೃಷ್ಣಾವತಾರ ಮಾಡಿದಾಗ ಲಕ್ಷ್ಮಿಯು ರುಕ್ಮಿಣಿ ಎಂಬ ಹೆಸರಿನಿಂದ ವಿದರ್ಭದ ದೊರೆ ಭೀಷ್ಮಕನ ಮಗಳಾಗಿ ಅವತರಿಸಿದಳು.ರುಕ್ಮಿಣಿಗೆ ಶ್ರೀಕೃಷ್ಣನನ್ನೇ ಪತಿಯನ್ನಾಗಿ ಪಡೆಯುವ ಆಸೆ. ಮಗಳ ಇಚ್ಛೆಗೆ ತಂದೆಯೂ ಸಮ್ಮತಿಸಿದನು. ವಿವಾಹಕ್ಕೆ ಸಿದ್ಧತೆಗಳಾದುವು. ಈ ವಿವಾಹವನ್ನು ಬಲವಾಗಿ ವಿರೋಧಿಸಿದ ಭೀಷ್ಮಕನ ಮಗ ರುಕ್ಮಿ ಮತ್ತು ಅವನ ಸಹಚರರನ್ನು ಕೃಷ್ಣನು ಯುದ್ಧದಲ್ಲಿ ಸೋಲಿಸಿ ರುಕ್ಮಿಣಿಯನ್ನು ದ್ವಾರಕೆಗೆ ಕೊಂಡೊಯ್ದು ವಿವಾಹವಾದನು.



**ಪದ್ಮಾವತಿ**

ಚೋಳದೇಶದ ಅರಸು ಆಕಾಶರಾಜನು ಸಂತಾನ ಪ್ರಾಪ್ತಿಗಾಗಿ ಯಾಗಮಾಡಲು ನೇಗಿಲಿನಿಂದ ಭೂಮಿಯನ್ನು ಉಳುವಾಗ ಸಹಸ್ರದಳದ ತಾವರೆ ಹೂವಿನ ಮೇಲೆ ಮಲಗಿದ್ದ ಹೆಣ್ಣು ಶಿಶುವು ಕಾಣಿಸಿತು. ಆಶ್ಚರ್ಯ- ಆನಂದಗಳಿಂದ ಒಡನೆಯೇ ಶಿಶುವನ್ನು ಎತ್ತಿಕೊಂಡು ದೊರೆಯ ತನ್ನ ರಾಣಿಯಾದ ಧಾರಿಣೀ ದೇವಿಗೆ ಕೊಟ್ಟನು. ಮಗುವಿಗೆ ಪದ್ಮಾ ವತಿ ಎಂದು ನಾಮಕರಣವಾಯಿತು. ಲಕ್ಷ್ಮಿಯೇ ಪದ್ಮಾವತಿಯಾಗಿ ಜನಿಸಿ ವೈಕುಂಠವನ್ನು ಬಿಟ್ಟು ಶ್ರೀನಿವಾಸನೆಂಬ ಹೆಸರಿನಿಂದ ವೆಂಕಟಾದ್ರಿಯಲ್ಲಿ ನೆಲೆಸಿದ್ದ ವಿಷ್ಣುವನ್ನು ಮದುವೆಯಾದಳು.

**ಅಷ್ಟಲಕ್ಷ್ಮಿಯರು**

ಲಕ್ಷ್ಮಿಯು ಅನಂತರೂಪ ತಾಳಿ ಭಕ್ತರಿಂದ ಪೂಜೆಯನ್ನು ಸ್ವೀಕರಿಸುತ್ತಾಳೆ. ಅವುಗಳ ಪೈಕಿ ಆಕೆಯ ಎಂಟು ರೂಪಗಳನ್ನು ಇಲ್ಲಿ ಹೆಸರಿಸಬಹುದು. ಪರಾಶಕ್ತಿಯಾಗಿ ಸಕಲೈಶ್ವರ್ಯಗಳನ್ನು ಕರುಣಿಸುವ ಆದಿಲಕ್ಷ್ಮಿ: ಬುದ್ಧಿ - ಅಜ್ಞಾನಗಳೊಂದಿಗೆ ಸಮಸ್ತ ವಿದ್ಯೆಗಳನ್ನು ಅನುಗ್ರಹಿಸುವ ವಿದ್ಯಾಲಕ್ಷ್ಮಿ: ಗೋಧನ ಭೋಧನ ಮುಂತಾದ ಅಖಂಡ ಸಂಪತ್ತುಗಳನ್ನು ನೀಡುವ ಧನಲಕ್ಷ್ಮಿ ಬದುಕಿಗಾಧಾರವಾದ ಅನ್ನವನ್ನು ಕೊಡುವ ಧಾನ್ಯಲಕ್ಷ್ಮಿ ಕಾರ್ಯೋನ್ಮುಖನಾದವನಿಗೆ ಧೈರ್ಯ ತುಂಬುವ ಧೈರ್ಯಲಕ್ಷ್ಮೀ: ಕೊಳದಲ್ಲಿ ಎರಡು ತಾವರೆ ಹೂಗಳ ಮೇಲೆ ಆಸೀನಳಾಗಿ ಉಭಯಪಾರ್ಶ್ವಗಳಲ್ಲಿರುವ ಎರಡು ಆನೆಗಳಿಂದ ಅಭಿಷೇಕ ಸ್ವೀಕರಿಸುತ್ತಿರುವ ಗಜಲಕ್ಷ್ಮಿ: ಗಜಲಕ್ಷ್ಮಿಯ ಪ್ರತಿರೂಪವನ್ನು ಮನೆಯ ಬಾಗಿಲ ಮೇಲಿರಿಸಿದರೆ ಆ ಮನೆಯು ಅಷ್ಟೈಶ್ವರ್ಯಗಳಿಂದ ತುಂಬಿ ತುಳುಕಾಡುವುದೆಂಬ ನಂಬಿಕೆ. ಕಾರ್ಯ ಸಾಧನೆಗೆ ವಿಜಯಲಕ್ಷ್ಮೀ: ವಂಶಾಭಿವೃದ್ಧಿಗೆ ಸಂತಾನ ಕರುಣಿಸುವ ಸಂತಾನಲಕ್ಷ್ಮಿ: ಮನುಕುಲದ ಅಸ್ತಿತ್ವಕ್ಕೆ ಹಾಗೂ ಅಭಿವೃದ್ಧಿಗೆ ಅಷ್ಟಲಕ್ಷ್ಮಿಯರ ಅನುಗ್ರಹವು ಅಗತ್ಯವಾಗಿಬೇಕು.



# ತಿರುಚಾನೂರು
# ಶ್ರೀ ಪದ್ಮಾವತಿ ಅಮ್ಮನವರ
# ಕಾರ್ತೀಕ ಬ್ರಹ್ಮೋತ್ಸವಗಳು
## 2020 ನವೆಂಬರ್ 11 ರಿಂದ 19 ರ ವರೆಗೆ

**11-11-2020 ಬುಧವಾರ**
ಹಗಲು: ತಿರುಚ್ಚಿ ಉತ್ಸವ, ಧ್ವಜಾರೋಹಣ.
ರಾತ್ರಿ: ಚಿಕ್ಕಶೇಷವಾಹನ.

**12-11-2020 ಗುರುವಾರ**
ಹಗಲು: ದೊಡ್ಡಶೇಷವಾಹನ
ರಾತ್ರಿ: ಹಂಸವಾಹನ

**13-11-2020 ಶುಕ್ರವಾರ**
ಹಗಲು: ಮುತ್ತಿನ ಚಪ್ಪರ ವಾಹನ
ರಾತ್ರಿ: ಸಿಂಹವಾಹನ

**14-11-2020 ಶನಿವಾರ**
ಹಗಲು: ಕಲ್ಪವೃಕ್ಷ ವಾಹನ
ರಾತ್ರಿ: ಹನುಮದ್ವಾಹನ

**15-11-2020 ಭಾನುವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿಅವತಾರೋತ್ಸವ
ರಾತ್ರಿ: ಗಜವಾಹನ

**16-11-2020 ಸೋಮವಾರ**
ಹಗಲು: ಸರ್ವಭೂಪಾಲ ವಾಹನ
ರಾತ್ರಿ: ಗರುಡವಾಹನ

**17-11-2020 ಮಂಗಳವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**18-11-2020 ಬುಧವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ



**19-11-2020 ಗುರುವಾರ**
ಹಗಲು: ಚಕ್ರಸ್ನಾನ, ಪಂಚಮಿತೀರ್ಥ
ರಾತ್ರಿ: ಧ್ವಜಾವರೋಹಣ



ತಿರುಮಲೆ ಸ್ವಾಮಿಯವರ ಆಲಯದಲ್ಲಿ ಇತ್ತೀಚೆಗೆ ಏಕಾಂತವಾಗಿ ನಡೆದ ಪಾರ್ವೇಟಿ ಉತ್ಸವ ದೃಶ್ಯ



ತಿರುಮಲೆಯಲ್ಲಿರುವ ತರಿಗೊಂಡ ವೆಂಗಮಾಂಬ ನಿತ್ಯಾನ್ನ ಪ್ರಸಾದ ಭವನದಲ್ಲಿ ಭಕ್ತರೊಂದಿಗೆ ಮಾತನಾಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ ॥ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ .ಎ.ವಿ. ಧರ್ಮಾರೆಡ್ಡಿ, ಐ.ಡಿ. ಈ.ಎಸ್., ರವರು



ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ ॥ ಕೆ.ಎಸ್. ಜವಹರ್ ರೆಡ್ಡಿ , ಐ.ಎ. ಎಸ್., ಇತರ ತಿ.ತಿ.ದೇ., ಉನ್ನತಾಧಿಕಾರಿಗಳೊಂದಿಗೆ ತಿರುಮಲೆಯಲ್ಲಿರುವ ಹಲವು ಪ್ರಾಂತ್ಯಗಳನ್ನು ತನಿಖೆ ಮಾಡುತ್ತಿರುವ ದೃಶ್ಯ.



ಲೋಕ ಕಲ್ಯಾಣಕ್ಕಾಗಿ ತಿ.ತಿ.ದೇ., ಕೈಗೊಂಡ ಷೋಡಶದಿನ
ಸುಂದರಕಾಂಡ ಪಾರಾಯಣ ದೀಕ್ಷೆ ಪೂರ್ಣಗೊಂಡ ಸಂದರ್ಭವಾಗಿ
ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಡಾ|| ಕೆ.ಎಸ್. ಜವಹರ್ ರೆಡ್ಡಿ ಐ.ಎ.ಎಸ್., ರವರು ಇತರ ಉನ್ನತಾಧಿಕಾರಿಗಳು



ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಡಾ||ಕೆ.ಎಸ್. ಜವಹರ್ ರೆಡ್ಡಿ , ಐ.ಎ.ಎಸ್.,ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರನ್ನು ಇತ್ತೀಚೆಗೆ ದರ್ಶಿಸಿಕೊಂಡಿರುವ ದೃಶ್ಯ



ನವರಾತ್ರಿ ಉತ್ಸವದ ಮುಕ್ತಾಯದ ಸಂದರ್ಭವಾಗಿ ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಉತ್ಸವ ಮೂರ್ತಿ ಶ್ರೀ ಮಹಾಲಕ್ಷ್ಮಿ
ಅಲಂಕಾರದಲ್ಲಿ ಗಜವಾಹನದ ಮೇಲೆ ದರ್ಶನ ನೀಡುತ್ತಿರುವ ದೃಶ್ಯ



ತಿರುಮಲೆಯಲ್ಲಿರುವ ಕಲ್ಯಾಣ ಕಟ್ಟೆಯನ್ನು ಪರಿಶೀಲಿಸುತ್ತಿರುವ
ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಡಾ|| ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ಅಡಿಷನಲ್
ಕಾರ್ಯನಿರ್ವಹಣಾಧಿಕಾರಿ ಶ್ರೀ.ಎ.ವಿ.ಧರ್ಮರೆಡ್ಡಿ, ಐ.ಡಿ.ಈ.ಎಸ್.



ಕೇಂದ್ರೀಯ ವಿಜಿಲೆನ್ಸ್ ಕಮಿಷನರ್ ರವರು ದೇಶ ವ್ಯಾಪ್ತಿಯಾಗಿ ಇತ್ತೀಚೆಗೆ ನಿರ್ವಹಿಸಿದ
ಭ್ರಷ್ಟಾಚಾರದ ವಿರುದ್ಧ, ಭದ್ರತೆಯ ಬಗ್ಗೆ ಅವಗಾಹನೆ ವಾರೋತ್ಸವದ ಸಂದರ್ಭವಾಗಿ
ತಿ.ತಿ.ದೇ., ಉದ್ಯೋಗಿಗಳೊಂದಿಗೆ ಪ್ರಮಾಣ ಮಾಡಿಸುತ್ತಿರುವ ತಿ.ತಿ.ದೇ.,
ಕಾರ್ಯನಿರ್ವಹಣಾಧಿಕಾರಿ ಮತ್ತು ಉನ್ನತಾಧಿಕಾರಿಗಳು



ಆಂಧ್ರಪ್ರದೇಶ್ ದತ್ತಿ ಇಲಾಖೆಯ ವಿಶೇಷ ಆಯುಕ್ತರು
ಶ್ರೀ. ಪಿ. ಅರ್ಜುನ್ ರಾವು,ಐ.ಎ.ಎಸ್., ತಿ.ತಿ.ದೇ.
ಪಾಲಕಮಂಡಲಿ ಎಕ್ಸ್-ಅಫಿಷಿಯಾ ಸದಸ್ಯರಾಗಿ
ಪ್ರಮಾಣ ಸ್ವೀಕರಿಸುತ್ತಿರುವ ದೃಶ್ಯ



02-10-2020 ದಿನಾಂಕ ರಾಷ್ಟ್ರದ ದತ್ತಿ ಇಲಾಖೆಯ
ಕಾರ್ಯದರ್ಶಿ ಶ್ರೀ ಎಂ. ಗಿರಿಜಾಶಂಕರ್ ಐ.ಎ.ಎಸ್., ತಿ.ತಿ.ದೇ.
ಪಾಲಕ ಮಂಡಲಿ ಎಕ್ಸ್-ಅಫಿಷಿಯಾ ಸದಸ್ಯರಾಗಿ
ಪ್ರಮಾಣ ಸ್ವೀಕರಿಸುತ್ತಿರುವ ದೃಶ್ಯ !





10-10-2020 ದಿನಾಂಕ ತಿ.ತಿ.ದೇ. ನೂತನ ಕಾರ್ಯನಿರ್ವಹಣಾಧಿಕಾರಿಯಾಗಿ
ಡಾ॥ ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ರವರು ಬಾಧ್ಯತೆಗಳನ್ನು ಸ್ವೀಕರಿಸಿದ
ನಂತರ ಸ್ವಾಮಿಯವರ ಆಲಯದಲ್ಲಿ ಉನ್ನತಾಧಿಕಾರಿಗಳೊಂದಿಗೆ....

# ಭಾಗ್ಯದ ಲಕ್ಷ್ಮೀ ಬಾರಮ್ಮ

– ಶ್ರೀಮತಿ. ಕೆ.ವಿ. ಪದ್ಮಾವತಿ
9743722327

### ಲಕ್ಷ್ಮಿಯ ಮೂಲ

ನಾನಾ ರೂಪಗಳಲ್ಲಿರುವ ಲಕ್ಷ್ಮಿಯು ಸಮುದ್ರದಲ್ಲಿ ಕಾಣಿಸಿಕೊಂಡಳೆಂದು ಪುರಾಣದಲ್ಲಿದೆ.ಸಮುದ್ರ ಯಾವುದೋ ಒಂದು ವರ್ಗಕ್ಕೆ ಸೇರಿರುವ ಒಂದು ಪ್ರದೇಶವಲ್ಲ. ಅದು ಈ ಪ್ರಪಂಚಕ್ಕೆ ಸೇರಿರುವ ಆಗಾಧ ಜಲರಾಶಿ.ಅಲ್ಲಿಂದ ಬಂದಿರುವ ಲಕ್ಷ್ಮೀದೇವಿಯಾದರೂ ಎಲ್ಲರ ಆಸ್ತಿ.ಅದೊಂದು ಹೆಣ್ಣು ಎಂಬುದು ಅಲಂಕಾರಿಕ ಕಲ್ಪನೆಯಷ್ಟೆ. ನದ ಪುರುಷನಾದರೆ, ನದಿ ಸ್ತ್ರೀ ಎನ್ನುವುದೂ,ನದಿಗಳೆಲ್ಲವೂ ಪತಿಯಾದ ಸಮುದ್ರ ರಾಜನಲ್ಲಿ ಒಂದಾಗುವುದೆಂಬುದೂ ಅರ್ಥಪೂರ್ಣವಾದ ಕಲ್ಪನೆ. (ಅದನ್ನು ಇದ್ದ ಹಾಗೆಯೇ ತಿಳಿದುಕೊಂಡರೆ ಒಳ್ಳೆಯದು. ಇಲ್ಲದ ಕಲ್ಪನೆಯನ್ನು ಇದೆಯೆಂದುಕೊಂಡರೆ ಅನರ್ಥವಾಗಬಹುದು.)

ತಾವರೆಯಲ್ಲಿ ಲಕ್ಷ್ಮಿಯಿದ್ದಾಳೆ ಎಂದರೆ,ತಾವರೆ ಸುಂದರ ವಾಗಿದೆ ಎಂದು ಅರ್ಥವಾಗುತ್ತದೆ. ಒಬ್ಬನು ಸಿರಿವಂತನೆಂದರೆ, ಸಿರಿ (ಶ್ರೀ)ಯೆಂಬ ಹೆಣ್ಣು ಅವನ ಬಳಿಯಿದೆ ಎಂಬ ಅರ್ಥ ವೇನೂ ಆಗುವುದಿಲ್ಲ. ಅನೇಕರು ಸಿರಿವಂತರಿರುತ್ತಾರೆ. ತಾವರೆಗಳೆಲ್ಲವೂ ಲಕ್ಷ್ಮಿಯ ಆಸನ. ಹೀಗೆ ಪ್ರಕೃತಿಯಲ್ಲಿ ಒಂದಾಗಿರುವ ತತ್ವವನ್ನು ಒಂದೊಂದು ಭಾಷೆಯಲ್ಲಿ ಒಂದೊಂದು ಹೆಸರಿನಲ್ಲಿ ಕರೆಯಲಾಗುತ್ತದೆ. ಅಂತಹ ಸಂದರ್ಭದಲ್ಲಿ ಅರ್ಥ ಒಂದೇ ಆದರೂ ಹೆಸರು ಹಲವಾರು. ಲಕ್ಷ್ಮಿಯೆಂಬ ಸಂಸ್ಕೃತ ಶಬ್ಧ ಕನ್ನಡದಲ್ಲಿ ಲಕುಮಿ, ಲಚುಮಿ, ಲಚ್ಮಿ, ಲಚ್ಚಿ ಎಂದೆಲ್ಲಾ ಆಗಬಹುದು.ಅವುಗಳ ಅರ್ಥವೊಂದೇ ಇರುತ್ತದೆ. ಸ್ವಲ್ಪ ವ್ಯತ್ಯಾಸ ತೋರಿದರೂ ತೊಂದರೆಯೇನೂ ಇಲ್ಲ. ಮಹಾಲಕ್ಷ್ಮಿಗೂ ಈ ಮಾತು ಅನ್ವಯಿಸುತ್ತದೆ. ಅದನ್ನು ಸಂಸ್ಕೃತದಲ್ಲಿ ಪೂಜಿಸುವಂತೆ ಬೇರೆಯ ಭಾಷೆಯಲ್ಲಿಯೂ ಸ್ತುತಿಸಬಹುದು.

### ಲಕ್ಷ್ಮಿಯ ಪೂಜೆ

ಹೀಗೆ ಹೇಳಿದರೆ ಲಕ್ಷ್ಮಿಯು ಸೃಷ್ಟಿಯೆಂದಾಗಬಹುದು. ಆದರೆ ಈ ಶಬ್ಧ ಸೃಷ್ಟಿಯ ಹೊರತಾಗಿಯೂ ಲಕ್ಷ್ಮಿಯ ತತ್ವ ಇದೆ. ಅದು ಪರಮಾತ್ಮನ ಹೃದಯ ಮಂದಿರದಲ್ಲಿದೆ. ನಮ್ಮ ಕಣ್ಣಿಗೆ ಕಾಣದಿರುವ ಪರಮಾತ್ಮನು ಶ್ರೀರಾಮನೋ ಶ್ರೀ ಕೃಷ್ಣನೋ ಆದಂತೆಯೇ ಅವನ ಮನೋಮಂದಿರ ನಿವಾ ಸಿನಿಯೂ ಆಗುತ್ತಾಳೆ. ಅವಳು ಸೀತಾ, ರುಕ್ಮಿಣಿ ಮುಂತಾದ ರೂಪಗಳನ್ನು ಕಾಣಿಸಿಕೊಳ್ಳುತ್ತಾಳೆ. ನಾನಾ ರೂಪ ಗಳನ್ನು ಹೊಂದಿ ಪ್ರಪಂಚದಲ್ಲಿ ಕ್ರೀಡಿಸುತ್ತಾಳೆ. ಅವಳನ್ನು ನಮಗೆ ಬೇಕಾದ ಬಗೆಯಲ್ಲಿ ಪೂಜಿಸಬೇಕು ಎನ್ನುವುದನ್ನು ಪಡೆಯ ಬಹುದು ಬೇಡ -





ಎನ್ನುವುದನ್ನು ನಿವಾರಿಸಬಹುದು. ಇದು ಎಲ್ಲಾ ಭಕ್ತರ ಅನುಭವದಲ್ಲಿದೆ. ಈ ಕಾರಣದಿಂದಲೇ ಕಲಶದಲ್ಲಿ ಪೂಜಿಸುವುದುಂಟು. ಚಿತ್ರವನ್ನು ಅಲಂಕರಿಸುವುದುಂಟು. ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಬೇರೆಯ ಭಾಷೆಯಲ್ಲಿಯೂ ಪದ್ಯಗಳನ್ನು ಹೇಳುವುದುಂಟು. ಆದರೆ ಸಂಸ್ಕೃತ ಪೂಜೆಗಾಗಿಯೇ ಇರುವ ಭಾಷೆ. ಅದನ್ನು ಬಳಸಿದರೆ ಮಾತ್ರ ಪೂಜೆ ಮಾಡಿದಂತೆ ಆಗುತ್ತದೆ ಎಂದು ಹಲವರ ನಂಬಿಕೆ. ಅದೇ ಬಗೆಯಲ್ಲಿ ಬೇರೆಯ ಭಾಷೆಯಲ್ಲಿ ಪೂಜಿಸಿ, ಅದೇ ಮನೋವಸ್ಥೆಯನ್ನು ಯಾರಾದರೂ ಪಡೆಯಬಲ್ಲರು ಎಂದಾದರೆ ಅದನ್ನು ಯಾರು ನಿರಾಕರಿಸುತ್ತಾರೆ.

## ಅಷ್ಟಲಕ್ಷ್ಮಿಯರು

ಮೋಕ್ಷಲಕ್ಷ್ಮಿ - ಮಹಾಲಕ್ಷ್ಮಿ - ಜಯಲಕ್ಷ್ಮಿ - ಧನಲಕ್ಷ್ಮಿ - ರಾಜಲಕ್ಷ್ಮಿ - ಧೈರ್ಯಲಕ್ಷ್ಮಿ - ಶೌರ್ಯಲಕ್ಷ್ಮಿ - ಸಿದ್ಧಿಲಕ್ಷ್ಮಿ ಎಂಬ ಎಂಟು ಲಕ್ಷ್ಮಿಯರನ್ನು ಬ್ರಹ್ಮಾಂಡಪುರಾಣ ಹೇಳಿದೆ. ಆದಿಲಕ್ಷ್ಮಿ ಧನಲಕ್ಷ್ಮಿ-ಧಾನ್ಯಲಕ್ಷ್ಮಿ - ಗಜಲಕ್ಷ್ಮಿ - ಸಂತಾನ ಲಕ್ಷ್ಮಿ - ವೀರಲಕ್ಷ್ಮೀ-ವಿಜಯಲಕ್ಷ್ಮೀ - ವಿದ್ಯಾಲಕ್ಷ್ಮೀ ಎಂದು ಎಂಟು ಲಕ್ಷ್ಮೀಯರನ್ನು ಅಷ್ಟಲಕ್ಷ್ಮೀ ಸ್ತೋತ್ರ ಗ್ರಂಥದಲ್ಲಿ ಹೇಳಿರುವುದನ್ನು ಕಾಣಬಹುದು. ಐಶ್ವರ್ಯಲಕ್ಷ್ಮೀ - ಸೌಭಾಗ್ಯಲಕ್ಷ್ಮೀ - ರಾಜಲಕ್ಷ್ಮೀ ವರಲಕ್ಷ್ಮೀ ಎಂಬ ಹೆಸರು ಅಲ್ಲಲ್ಲಿ ಕಾಣುತ್ತದೆ. ದೇಶ ವಿದೇಶಗಳಲ್ಲಿ ಈ ಲಕ್ಷ್ಮೀ ಮಂದಿರಗಳನ್ನು ಆಧುನಿಕವಾಗಿ ನಿರ್ಮಿಸಿದ್ದಾರೆ. ಲಕ್ಷ್ಮೀ ದೇವಿಯ ವಿವಿಧ ರೂಪಗಳನ್ನು ಇವು ತೋರಿಸುತ್ತವೆ. ಅಥವಾ ಲಕ್ಷ್ಮೀ ನೀಡುವ ವರಗಳನ್ನು ಇವು ಸೂಚಿಸುತ್ತವೆ. ವರವನ್ನು ನೀಡುವ ಲಕ್ಷ್ಮೀ ಅಥವಾ ಎಲ್ಲರಿಗಿಂತ ನೆಚ್ಚಿನ ಲಕ್ಷ್ಮೀ ಎನ್ನಬಹುದು. ಪ್ರಾಚೀನವಾದ ಮಂದಿರಗಳಲ್ಲಿ ಈ ಬಗೆಯ ವಿಭಾಗವನ್ನು ಮಾಡುವುದಿಲ್ಲ. ಕೊಲ್ಹಾಪುರದಲ್ಲಿ ಪ್ರಾಚೀನ ಮಂದಿರವಿದೆ. 'ಲಕ್ಷ್ಮೀ' ಎಂದರೆ ಹಣ ಎನ್ನುವ ಅಥವಾ ಹಲವು ರೀತಿಯ ಪ್ರಾಪಂಚಿಕ ಸಂಪತ್ತು ಎನ್ನುವಂತಹ ಸಾಮಾನ್ಯವಾದ ಭಾವನೆಯನ್ನು ಮೀರಿ ನಿಲ್ಲುವ ಅವಳ ವಿಶ್ವರೂಪ ದರ್ಶನವನ್ನು ಕಾಣಲು ವೇದ ಮಂತ್ರಗಳ ಆಂತರ್ಯವನ್ನು ಅರಿಯಬೇಕಾಗಿದೆ.

## ಶ್ರೀಸೂಕ್ತ

ಹಿರಣ್ಯವಾರ್ಣಾಂ ಹರಿಣೀ ಸುವರ್ಣರಜತಸ್ರಜಾಂ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥

ಸಾಂಪ್ರದಾಯಕವಾಗಿ, ಪುರುಷಸೂಕ್ತದೊಡನೆ ಅನುಸಂಧಾನ ಮಾಡುವ ಶ್ರೀಸೂಕ್ತದ ಈ ಮೊದಲ ಮಂತ್ರದಲ್ಲಿ ದೇವತೆ ಜಾತವೇದನನ್ನು ಮೊದಲು ಆಹ್ವಾನಿಸಿ,ಲಕ್ಷ್ಮೀ ದೇವಿಯನ್ನು ಕರೆತರಲು ಪ್ರಾರ್ಥಿಸುವುದು ವೈಶಿಷ್ಟ್ಯ. ಪೂರ್ಣವಾದುದು, ಸಾಮಾನ್ಯವಾಗಿ ಜಾತವೇದ ಎಂದರೆ ಅಗ್ನಿ ಎನ್ನುವ ಅರ್ಥವಿದೆ. ಆದರೆ, ಇಲ್ಲಿ ಅದು ಹುಟ್ಟಿರುವುದೆಲ್ಲವನ್ನೂ ಯಾರು ತಿಳಿಸಿದ್ದಾರೋ, ಹುಟ್ಟಿರುವ ಎಲ್ಲ ಪ್ರಾಣಿಗಳೂ ಯಾರನ್ನು ತಿಳಿದಿವೆಯೋ ಹಾಗೂ ಯಾರು ಎಲ್ಲ ಪ್ರಾಣಿಗಳಲ್ಲಿಯೂ ಪ್ರಜ್ಞಾರೂಪದಲ್ಲಿರುವನೋ (ನಿರುಕ್ತ) ಅವನು ಅಂದರೆ ಪರಮ ಪುರುಷ - ಶ್ರೀನಾರಾಯಣ ಎನ್ನುವ ಅರ್ಥವನ್ನು ಕೊಡುತ್ತದೆ. ಹಾಗಾಗಿ, ಈ ಮಂತ್ರದಲ್ಲಿ, ಲಕ್ಷ್ಮೀ ದೇವಿಯನ್ನು ನಮ್ಮ ಬಳಿಗೆ ಕರೆತರಲು ಪ್ರಾರ್ಥಿಸಿರುವುದು ಶ್ರೀಮನ್ನಾರಾಯಣನನ್ನೇ ಎನ್ನುವುದು ವಿದಿತವಾಗುತ್ತದೆ. ಹಾಗೆಯೇ, ಲಕ್ಷ್ಮೀದೇವಿಯನ್ನು ನಿನ್ನ ಪತಿಯ ಅನುಗ್ರಹವನ್ನು ದೊರಕಿಸಿ ಕೊಡು ಎನ್ನುವಂತಹ ಪ್ರಾರ್ಥನೆಗಳು ಹಲವೆಡೆ ಕಾಣುತ್ತವೆ. ಶ್ರೀಸೂಕ್ತವೊಂದರಲ್ಲಿ ಮಾತ್ರವಲ್ಲದೆ, ಲಕ್ಷ್ಮೀ ದೇವಿಯು, ವೇದ ಪ್ರತಿ ಪಾದ್ಯ ಪರಮಪುರುಷ-ಪರತತ್ವದೊಂದಿಗೆ ಅವಿನಾಭವವಾಗಿರುವ ಶಕ್ತಿಯೇ ಆಗಿದ್ದಾಳೆ. ಎಂಬುವಂತಹ ಪರದೇವತಾ ತತ್ತ್ವದ ಆಳವಾದ ದರ್ಶನವನ್ನು ದೇವಿಸೂಕ್ತಗಳ ಸಾಂಕೇತಿಕ ಅಂತರಾರ್ಥವು ತೆರೆದು ತೋರಿಸುತ್ತದೆ.

ದೇವತೆಗಳು 33 ಕೋಟಿ ಸಂಖ್ಯೆಯಲ್ಲಿದ್ದರೂ ನಮಗೆ ತಿಳಿದಿರುವ ದೇವತೆಗಳು ಕೆಲವೇ ಕೆಲವು ಶಿವನೇ ಮಹಾದೇವನೆಂದು ಶೈವರು ಹೇಳಿದರೆ, ವಿಷ್ಣುವೇ ಲೋಕ ಸ್ವಾಮಿಯೆಂದು ವೈಷ್ಣವರು ಹೇಳುತ್ತಾರೆ. ಸೂರ್ಯ ಗಣಪತಿ ಅಂಬಿಕೆ

ಷಣ್ಮುಖರಿಗೂ ಪ್ರಾಮುಖ್ಯ ದೊರೆಯುವುದುಂಟು. ಆದರೆ ನಿಜವಾಗಿ ನೋಡಿದರೆ ಲಕ್ಷ್ಮೀದೇವಿಗೆ ದೊರೆಯುವ ಪ್ರಾಧಾನ್ಯ ಇವರಲ್ಲಿ ಯಾರಿಗೂ ದೊರೆಯುವುದಿಲ್ಲ. ಸಂಪತ್ತಿನ ಅಧಿದೇವತೆಯಾದ ಮಹಾಲಕ್ಷ್ಮೀಯನ್ನು ತಿಳಿದೋ, ತಿಳಿಯದೆಯೋ ಲೋಕಮಾತೆಯೆಂದೂ ಎಲ್ಲರೂ ಆರಾಧಿಸುತ್ತಾರೆ. ಅವಳು ಎಲ್ಲರಿಗೂ ಬೇಕು. ಅವಳ ಕರುಣೆಯಿಲ್ಲದೆ ಯಾವನೂ ಸರಿಯಾಗಿ ಸಮೃದ್ಧಿಯಿಂದ ಜೀವಿಸಲಾರನು.

### ಮಹಾಲಕ್ಷ್ಮೀಯ ಪ್ರಾದುರ್ಭಾವ

ಈಗ ವೈವಸ್ವತಮನ್ವಂತರ ನಡೆಯುತ್ತಿದೆ. ಹಿಂದೆ ಚಾಕ್ಷುಷಮನ್ವಂತರದಲ್ಲಿ ದೇವತೆಗಳೂ ರಾಕ್ಷಸರು ಸೇರಿ ಅಮೃತವನ್ನು ಪಡೆಯಲೆಂದು ಪಾಲ್ಗಡಲನ್ನು ಕಡೆದರಂತೆ. ಆಗ ಮೊದಲು ಕಾಲಕೂಟ ವಿಷವು ಉತ್ಪನ್ನವಾಯಿತು. ಅದನ್ನು ಶಿವನು ಪಾನ ಮಾಡಿದ ಮೇಲೆ ಎಲ್ಲರೂ ಸಾವಿನ ದವಡೆಯಿಂದ ಪಾರಾದರು. ಸಮುದ್ರಮಥನವನ್ನು ಮುಂದುವರಿಸಿದ ಮೇಲೆ ಉಚ್ಚೈಶ್ರವಸ್ಸು ಎಂಬ ಕುದುರೆ ಹುಟ್ಟಿತು.ಅದನ್ನು ಇಂದ್ರನು ತೆಗೆದುಕೊಂಡನು. ಆಮೇಲೆ ಕಲ್ಪವೃಕ್ಷ, ಕಾಮಧೇನು ಮುಂತಾದವುಗಳೂ ನಾನಾ ಬಗೆಯ ರತ್ನಗಳೂ ಲಭಿಸಿದವು. ಆ ಮೇಲೆ ಲಕ್ಷ್ಮೀದೇವಿಯು ಪ್ರಕಟ ಗೊಂಡಳು. ಅವಳನ್ನು ಪಡೆಯುವುದಕ್ಕಾಗಿ ದೇವಾಸುರ ಸದಸ್ಸಿನಲ್ಲಿ ಸ್ವಯಂವರವೇ ನಡೆಯಿತು. ಲಕ್ಷ್ಮಿದೇವಿಯು ಪುರುಷೋತ್ತಮನನ್ನುವರಿಸಿದಳು. ಮಹಾವಿಷ್ಣುವೇ ಮಹಾಸತಿಯಾದ ಲಕ್ಷ್ಮೀದೇವಿಯ ಪತಿ. ಅವನು ಅವತಾರ ಮಾಡಿದಂತೆ ಅವಳೂ ಅವತಾರ ಮಾಡುತ್ತಾಳೆ; ಅವರದು ಅವಿನಾಭಾವಸಂಬಂಧ.

### ಭಾಗ್ಯದ ನಿಧಿ ಕರವೀರಪುರ ವಾಸಿನಿ

ದಾಸ ಎನ್ನುವ ಶಬ್ದ ಜಗಜ್ಜನನಿಯಾದ ಶ್ರೀಮಹಾಲಕ್ಷ್ಮೀ ಯಿಂದಲೇ ಪ್ರಾರಂಭ. ಸಾಕ್ಷಾತ್ ಲಕ್ಷ್ಮೀದೇವಿಯೇ ಪರಮಾತ್ಮನ ದಾಸಾನುದಾಸಳಾಗಿದ್ದಾಳೆ. ಅದಕ್ಕೆ ಮಹಾನುಭಾವರಾದ ಶ್ರೀಪುರಂದರದಾಸರು 'ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ' ಎಂದು ಉದ್ಗಾರ ತೆರೆದಿದ್ದಾರೆ. ಕೋಟಿ ಕೋಟಿ ಭಕ್ತರಿರಲು ಎಲ್ಲಾ ಜೀವರಾಶಿಗಳು ಭಗವತ್ ಅಧೀನವಾದರು ಮುಕ್ಕೋಟಿ ದೇವತೆಗಳು ಪರಮಾತ್ಮನಿಗೆ ದಾಸಾನುದಾಸರಾಗಿ ಸೇವೆಸಲ್ಲಿಸುತ್ತಾ ಇದ್ದರೂ ಎಲ್ಲ ದೇವತೆಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿದ್ದು ಅವರ ಮುಖಾಂತರ ತಾನೇ ಸರ್ವಚಿತ್ತನಾದ ಭಗವಂತನ ಸೇವೆಗಳನ್ನು ಪರಮಶ್ರೇಷ್ಠವಾಗಿ ಮಾಡುತ್ತಾ ಆನಂದ ಅನುಭವಿಸುತ್ತ ಲಕ್ಷ್ಮೀದೇವಿ ಸರ್ವತ್ರ ವ್ಯಾಪ್ತಳಾಗಿದ್ದಾಳೆ. ಸರ್ವೋತ್ತಮ ನಾದ ಶ್ರೀ ಹರಿಯು ಸಮಸ್ತ ದೇವತೆಗಳಿಗಿಂತ ಕೋಟಿ ಕೋಟಿ ಗುಣಗಳಿಂದ ಉತ್ತಮನಾಗಿದ್ದಾನೆ. ಭಗವಂತನಿಗೆ ಸಮಾನಳಾಗಿದ್ದಾಳೆ. ಬ್ರಹ್ಮ ರುದ್ರಾದಿ ದೇವತೆಗಳು ಶ್ರೀ ಮಹಾಲಕ್ಷ್ಮೀಯರನ್ನು ನಿತ್ಯ ಸರ್ವದಾ ಸ್ತುತಿ ಮಾಡಿ ತೃಪ್ತರಾಗುತ್ತಾ ಇರುತ್ತಾರೆ.

### ಆಲದೆಲೆಯ ಮೇಲೆ ಮಲಗಿದವನಾ

ಭಗವಂತನು ಈ ಜಗತ್ತನ್ನು ಸೃಷ್ಟಿ ಮಾಡುವಾಗ ಸಮಸ್ತ ಲೋಕಗಳನ್ನು ತನ್ನ ಹೊಟ್ಟೆಯಲ್ಲಿ ಹಾಕಿಕೊಂಡಾಗ ಜಗತ್ ಪ್ರಳಯವಾದಾಗ ತಾನು ಮಗುವಾಗಿ ಆಲದೆಲೆಯ ಮೇಲೆ ಹಾಯಾಗಿ ಮಲಗಿಸಿದಾಗ ಸಾಕ್ಷಾತ್ ಲಕ್ಷ್ಮೀದೇವಿ



ಆಲದೆಲೆ ಆಗಿ ಆತನ ಸೇವೆಯನ್ನು ಮಾಡುತ್ತಾ ಇದ್ದಾಳೆ ಮತ್ತು ಭಗವಂತನ ಸೃಷ್ಟಿ ಪ್ರಾರಂಭ ವಾಗಿ ಸೃಷ್ಟಿ, ಸ್ಥಿತಿ,ಲಯ ಕಾರ್ಯಗಳಲ್ಲಿ ಭಗವಂತನ ಸೇವೆಗಾಗಿ ಈ ಕಲಿಯುಗದಲ್ಲಿ ದೇವಾನು ದೇವತೆಗಳು ಯತಿಗಳಾಗಿ ಹರಿದಾಸ ರಾಗಿ ಅವತಾರ ಮಾಡಿ ಲೋಕೋದ್ಧಾರ ಮಾಡಿ ದ್ದಾರೆ. ಭಗವಂತನ ಅಂತರಂಗ ಭಕ್ತ ರಾದ ವಾಯುದೇವರು ತಮ್ಮ ಮೂರು ಅವ ತಾರ ಗಳಲ್ಲಿ ಭಗವಂತನ ಜೊತೆ ಲಕ್ಷ್ಮೀದೇವಿ ಯನ್ನು ಕೂಡಾ ಪರಿ ಪರಿಯಾಗಿ ಸ್ತುತಿ ಮಾಡಿದ್ದಾರೆ.

**ಭಕ್ತಿಯ ಪರವಶತೆ**

ಅದೇ ಪರಂಪರೆಯಲ್ಲಿ ಬಂದ ಯತಿ ಗಳು, ಹರಿದಾಸ, ಹರಿದಾಸಿಣಿಯರು ಜಗ ಜ್ಜನನಿಯಾದ ಲಕ್ಷ್ಮೀದೇವಿಯನ್ನು ತಮ್ಮ ಸ್ತೋತ್ರ ಹಾಗೂ ಹಾಡುಗಳಲ್ಲಿ ಭಕ್ತಿ ಪರವಶರಾಗಿ ಹೊಗ ಳಿದ್ದಾರೆ. ಶ್ರೀ ನರಹರಿ ತೀರ್ಥರಿಂದ ಪ್ರಾರಂಭ ವಾದ ಹರಿದಾಸ ಸಾಹಿತ್ಯ ಶ್ರೀ ಶ್ಯಾಮಸುಂದರ ದಾಸರವರೆಗೂ ಹಾಗೂ ಇನ್ನೂ ಎಲೆಮರ ಕಾಯಿಯಂತಿರುವ ಹರಿದಾಸರವರೆಗೂ ಪ್ರಸಿದ್ಧಿ ಹಾಗೂ ಅಚಂದ್ರಾರ್ಕವಾಗಿದೆ. ಇಂಥ ದಿವ್ಯವಾದ ಹರಿದಾಸ ಸಾಹಿತ್ಯದಲ್ಲಿ ಭಗವಂತ ನಾದ ಶ್ರೀಹರಿಯನ್ನು ಬಿಟ್ಟರೆ ಎರಡನೆಯ ಸ್ಥಾನ ಇರುವುದು ಶ್ರೀ ಮಹಾಲಕ್ಷ್ಮೀಗೆ.

**ಸಿರಿದೇವಿ ಸ್ತುತಿ ಸಂಪದ**

ದಾಸಕೂಟಕ್ಕೆ ಮುಕುಟ ಪ್ರಾಯವಾದ ಶ್ರೀಪಾದರಾಜರು, ಶ್ರೀವ್ಯಾಸ ರಾಜರು, ವಾದಿ ರಾಜ ಗುರುಗಳು ಮುಂತಾದ ಯತಿಶ್ರೇಷ್ಠರು ಸ್ತೋತ್ರ ಹಾಗೂ ಆಡುಭಾಷೆಯಾದ ಕನ್ನಡದಲ್ಲಿ ಹಾಡುಗಳನ್ನು ರಚನೆ ಮಾಡಿ ಜಗನ್ಮಾತೆಯನ್ನು ಸ್ತುತಿಸಿದರೆ ಕರ್ನಾಟಕ ಸಂಗೀತ ಪಿತಾಮಹ, ನಾರದಾಂಶ, ಸಂಭೂತರಾದ ಶ್ರೀಪುರಂದರ ದಾಸರು ಸಾವಿರಾರು ಹಾಡುಗಳನ್ನು ಶ್ರೀ ಮಹಾಲಕ್ಷ್ಮೀಯ ಮೇಲೆ ರಚಿಸಿದ್ದಾರೆ. ಉದಾಹರಣೆಗೆ "ಏನು ಧನ್ಯಳೋ ಲಕುಮಿ", ಪರಮಾತ್ಮನ ದಶಾವತಾರಗಳಲ್ಲಿ ಒಂದೊಂದು ಅವತಾರಕ್ಕೂ ಲಕ್ಷ್ಮೀದೇವಿಯನ್ನು ಬೇರೆ ಬೇರೆ ಹೆಸರುಗಳಿಂದ ಸ್ತುತಿಸಿದ್ದಾರೆ. ಮತ್ತ್ಯನರಸಿ ವೇದಾವತಿ ಎಂಬ ಹಾಡಿನಲ್ಲಿ ಇನ್ನೂ ಅನೇಕ ಹಾಡುಗಳಿಂದ ಆಕೆಯನ್ನು ಸ್ತುತಿಸಿದ್ದಾರೆ. ಮುಂದೆ ವಿಜಯದಾಸರು ಅನೇಕ ಹಾಡುಗಳಾದ ಅಂದರೆ 'ವೇಣಿ ಮಾಧವನ ತೋರೆ, ಕ್ಷೀರವಾರಿಧಿ ಕನ್ನಿಕೆ, ಇನ್ನೂ ಅನೇಕ ಹಾಡು, ಸುಳಾದಿಗಳಲ್ಲಿ ಲಕ್ಷ್ಮೀದೇವಿಯ ಅಸ್ತಿತ್ವವನ್ನು ಎತ್ತಿ ತೋರಿಸಿದ್ದಾರೆ.

ಶ್ರೀ ಗೋಪಾಲದಾಸರು ತಮ್ಮ ಒಂದು ಕೃತಿಯಲ್ಲಿ 'ಒಲಿದೆಯಾ ಏಕಮ್ಮ ಲಕುಮಿ ವಾಸುದೇವಗೆ ' ವಿಡಂಬನಾತ್ಮಕನಾಗಿ ಸ್ತುತಿಸಿದ್ದಾರೆ. ಅನಂತಾದ್ರಿಶರು 'ಬಾರೇ ಭಾಗ್ಯದ ನಿಧಿಯೇ' ಎಂದು ಹೇಳಿದರೆ 'ಇಂದಿರೆ ಇಂದು ವದನೆಯ' ಎಂದು ಅನೇಕ ಕೃತಿಗಳಿಂದ ಜಗನ್ನಾಥದಾಸರು ಸ್ತೋತ್ರಗೈದಿದ್ದಾರೆ.'ಬಾರೇ ನಮ್ಮನಿತನಕ ಭಾಗ್ಯದ ದೇವಿ' ಎಂದು ಸಂಪತ್ತಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯನ್ನು ಸ್ತೋತ್ರ ಮಾಡಿದ್ದಾರೆ. ಇಂದಿರೇಶ ದಾಸರು 'ಅಜ್ಞಾನವೆಂದು ಕತ್ತಲೆಯನ್ನು ಕಳೆದು ದಿವ್ಯದೃಷ್ಟಿ ದಯಪಾಲಿ ಸೆಂದು ಹೊಸಕಣ್ಣು ಹಚ್ಚಲಿಬೇಕು ಜಗದಂಬಾ ' ಎಂದು ಸ್ತೋತ್ರ ಮಾಡಿ ದ್ದಾರೆ.

ಎಲ್ಲಾ ಹರಿದಾಸರು ತಮ್ಮ ಸಾಹಿತ್ಯದಲ್ಲಿ ಸಂಪತ್ತಿಗೆ ಅಭಿಮಾನಿ, ಜಗತ್ತಿನ ಎಲ್ಲಾ ಜೀವರಾಶಿಗಳಿಗೆ ಆಧಾರಳೂ, ರಕ್ಷಕಳೂ ಆದ ಜಗನ್ಮಾತೆ ಯಾದ ತಾಯಿ ಮಹಾಲಕ್ಷ್ಮೀಯನ್ನು ಭಕ್ತಿ ಪುರಸ್ಸರವಾಗಿ ಸ್ತೋತ್ರ ಮಾಡಿ ಹಾಡಿ ಭಕ್ತಿ ಪರಾಕಾಷ್ಠೆಯನ್ನು ಪ್ರದರ್ಶಿಸಿದ್ದಾರೆ. ಹೀಗೆ ಸಮಸ್ತ ದೇವತೆ ಗಳಿಂದ ಯತಿಪುಂಗವರಿಂದ, ಹರಿದಾಸರಿಂದ ಸ್ತೋತ್ರ ಮಾಡಲ್ಪಟ್ಟ ಜಗತ್ತಿನ ಸ್ಥಿತಿ,ಲಯ ಪಾಲನೆಗೆ ಪರಮಾತ್ಮನಿಗೆ ಸಹಾಯಕಳಾಗಿರುವ ಶ್ರೀ ಮಹಾ ಲಕ್ಷ್ಮಿಯ ಎಲ್ಲಾ ಜೀವರಾಶಿಗಳನ್ನು ಕರುಣಾ ದೃಷ್ಟಿಯಿಂದ ಕಾಪಾಡಲಿ ಎಂಬುದೇ ನಮ್ಮಾಸೆ.

**ದೇವಿಯೊಬ್ಬಳು ದೇಗುಲಗಳು ಹಲವು :**

**ಕೊಲ್ಲಾಪುರ ಮಹಾಲಕ್ಷ್ಮೀ ದೇವಾಲಯ**

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನ , ದೇಶದ 52 ಶಕ್ತಿ ಪೀಠಗಳಲ್ಲಿ ಒಂದಾದ್ದರಿಂದ ಅತ್ಯಂತ ಪ್ರಸಿದ್ಧಿ ಮಂದಿರ. ತನ್ನ ಪತ್ನಿಯ ದೇವಸ್ಥಾನ ಇರುವ ಕಾರಣಕ್ಕೆ ಮಹಾವಿಷ್ಣುವಿಗೆ ಈ ಪ್ರದೇಶದ ಮೇಲೆ ವಿಶೇಷ ಅಕ್ಕರೆ ಎಂಬ ನಂಬಿಕೆ ಇದೆ. ಕರ್ನಾಟಕದ ಚಾಲುಕ್ಯರಿಂದ ನಿರ್ಮಾಣವಾದ ಈ ದೇವಸ್ಥಾನಕ್ಕೆ ಪ್ರತಿ ವರ್ಷ ಲಕ್ಷಾಂತರ ಭಕ್ತರು ಆಗ ಮಿಸುತ್ತಾರೆ.



## ಗೊರವನಹಳ್ಳಿ ಲಕ್ಷ್ಮೀ ದೇವಸ್ಥಾನ

ಕರ್ನಾಟಕದ ಮಟ್ಟಿಗೆ ಲಕ್ಷ್ಮೀ ಎಂದೊಡನೆ ಪ್ರಮುಖವಾಗಿ ಗೊರವನ ಹಳ್ಳಿ ದೇವಸ್ಥಾನ ನೆನಪಿಗೆ ಬರುತ್ತದೆ. ಊರ ಹೊರವಲಯದಲ್ಲಿ ಸೊರಗಿ ನಿಂತಿದ್ದ ದೇವಾಲಯವನ್ನು ಕಮಲಮ್ಮ ಎಂಬು ವರು ಅಭಿವೃದ್ಧಿ ಪಡಿಸಿದರು. ಮನೆಯ ಸಮಸ್ಯೆಗಳು, ವಿವಾಹವಾಗದಿರುವಿಕೆ ಸೇರಿ ಅನೇಕ ಕಾರಣಗಳಿಗೆ ಗೊರವನಹಳ್ಳಿ ಲಕ್ಷ್ಮೀ ಕೃಪಾ ಕಟಾಕ್ಷವಿದ್ದರೆ ಬಗೆ ಹರಿಯುತ್ತದೆ ಎಂಬ ನಂಬಿಕೆ ಇದೆ. ದೇವಸ್ಥಾನದ ಸಲುವಾಗಿ ಸ್ವತಃ ಕಮಲಮ್ಮನವರೂ ಭಕ್ತರಿಗೆ ದೇವರ ರೂಪ ವಾಗಿಯೇ ಕಾಣುತ್ತಿದ್ದರು.

## ಹಾಸನ ಲಕ್ಷ್ಮೀದೇವಿ ದೇವಸ್ಥಾನ

ಭಕ್ತರ ಸಂಖ್ಯೆ ಲೆಕ್ಕದಲ್ಲಿ ಹೆಚ್ಚಲ್ಲದ್ದಿದರೂ ಪ್ರಾಚೀನತೆಯ ದೃಷ್ಟಿಯಿಂದ ಹಾಸನ ಜಿಲ್ಲೆ ದೊಡ್ಡಗದವಳ್ಳಿಯ ಲಕ್ಷ್ಮೀದೇವಿ ದೇವಸ್ಥಾನ ಮುಖ್ಯಸ್ಥಾನ ಪಡೆಯುತ್ತದೆ. ಸಾಮಾನ್ಯವಾಗಿ ಶಿವನ ದೇವಸ್ಥಾನ ನಿರ್ಮಾಣಕ್ಕೆ ಹೆಸರುವಾಸಿಗಳಾದ ಹೊಯ್ಸಳ ರಾಜರ ಕಾಲದಲ್ಲಿ ಲಕ್ಷ್ಮೀ ದೇವಸ್ಥಾನ ನಿರ್ಮಾಣವಾಗಿದೆ. ಹೊಯ್ಸಳ ರಾಜರ ಅನುಮತಿ ಮೇರೆಗೆ ಮಹಾರಾಷ್ಟ್ರದ ವ್ಯಾಪಾರಿ ಕುಲ್ಲಣ ರಾವತ್ ನಿರ್ಮಿಸಿದ ದೇಗುಲವಿದು. ಉಳಿದ ಹೊಯ್ಸಳ ದೇವಾಲಯಕ್ಕಿಂತ ಸ್ವಲ್ಪ ಭಿನ್ನವಾಗಿರುವ ದೇವಾಲಯ ನಾಲ್ಕು ಶಿಖರ ಹೊಂದಿದೆ.

## ವೆಲ್ಲೂರು ಶ್ರೀಪುರಂ ಗೋಲ್ಡನ್ ಟೆಂಪಲ್

ತಮಿಳುನಾಡಿನ ವೆಲ್ಲೂರಿನಲ್ಲಿರುವ ಶ್ರೀಪುರಂನ ಗೊಲ್ಡನ್ ಟೆಂಪಲ್ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುತ್ತದೆ. ದೇವಸ್ಥಾನ ಹಾಗೂ ಗೋಪುರ ಸಂಪೂರ್ಣ ಚಿನ್ನದಿಂದ ಅಲಂಕೃತವಾಗಿ ದೇಶದಲ್ಲೆ ಲಕ್ಷ್ಮೀ ದೇವಾಲಯಗಳ ಪೈಕಿ ವಿಶಿಷ್ಟ ಸ್ಥಾನ ಪಡೆದಿದೆ. ಲಕ್ಷ್ಮೀ ಶ್ರೀಚಕ್ರವನ್ನೆ ಹೋಲುವ ಪ್ರದಕ್ಷಿಣೆ ದಾರಿಯನ್ನು ಹೊಂದಿದೆ, ಮಲೈಕೋಟಿ ಪರ್ವತ ದಲ್ಲಿರುವ ದೇವಸ್ಥಾನ, ದೇಶದ ಬೃಹತ್ ದೇವಸ್ಥಾನಗಳ ಪೈಕಿ ಒಂದು.

## ಚೆನ್ನೈ ಅಷ್ಟಲಕ್ಷ್ಮೀ ದೇವಸ್ಥಾನ

ಚೆನ್ನೈನಲ್ಲಿರುವ ಅಷ್ಟಲಕ್ಷ್ಮೀ ದೇವಸ್ಥಾನದಲ್ಲಿ 8 ಬಗೆಯ ಲಕ್ಷ್ಮೀ ರೂಪಗಳನ್ನು ಒಟ್ಟಿಗೆ ನೋಡುವ ಅವಕಾಶ ಲಭಿಸುತ್ತದೆ. ಪ್ರತಿ ರೂಪಕ್ಕೂ ಪ್ರತ್ಯೇಕ ದೇವಸ್ಥಾನ ಹೊಂದುವ ಮೂಲಕ ಲಕ್ಷ್ಮೀ ದೇವಸ್ಥಾನಗಳ ಸಮುಚ್ಛಯವಾಗಿ ನಿರ್ಮಾಣವಾಗಿದೆ. ಈಲಿಯಟ್ ಬೀಚ್ ಸಮೀಪ ದಲ್ಲಿರುವ ದೇವಸ್ಥಾನದಲ್ಲಿ ವಿಷ್ಣುವಿನ ದೇಗುಲವೂ ಇದೆ.

## ಮುಂಬೈಯಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನ

ಮುಂಬೈನಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನ ವಾಣಿಜ್ಯ ನಗರಿಯ ಪ್ರಮುಖ ಮಂದಿರಗಳಲ್ಲೊಂದು. ಮಂದಿರ ನಿರ್ಮಾಣಕ್ಕೆ ಹಿನ್ನೆಲೆಯಾಗಿ ರೋಚಕ ಕಥೆಯೊಂದಿದೆ. ಮುಂಬೈ ಹಾಗೂ ಸಮೀಪದ ದ್ವೀಪಗಳನ್ನು ಸಂಪರ್ಕಿಸಲು ಹಾರ್ನ್‌ಬೀ ವೆಲ್ಲಾರ್ಡ್ ಸೇತುವೆ ನಿರ್ಮಾಣ ಕಾರ್ಯ ಸಾಗಿತ್ತು. ನಿರ್ಮಾಣ ಹಂತ ದಲ್ಲಿದ್ದ ಸೇತುವೆ ಎರಡು ಬಾರಿ ನೆಲಕಚ್ಚಿತ್ತು ಒಂದು ದಿನ ಇಂಜಿನಿಯರ್ ಕನಸಿನಲ್ಲಿ ಲಕ್ಷ್ಮೀ ದೇವಿಯು ಪ್ರತ್ಯಕ್ಷಳಾಗಿದ್ದಾಳು. ನಂತರ ಸೇತುವೆ ಪ್ರದೇಶವನ್ನು ಹುಡುಕಿದಾಗ ಲಕ್ಷ್ಮೀ ವಿಗ್ರಹ ಪತ್ತೆಯಾಯಿತ್ತು. ವಿಗ್ರಹವನ್ನು ಸ್ಥಾಪಿಸಿ ದೇವಸ್ಥಾನ ನಿರ್ಮಾಣ ಮಾಡಲಾಯಿತು. ಅಚ್ಚರಿಯ ಬೆಳ ವಣಿಗೆಯಲ್ಲಿ ವೆಲ್ಲಾರ್ಡ್ ಸೇತುವೆ ಯೋಜನೆ ಯಶಸ್ವಿಯಾಗಿ ಮುಕ್ತಾಯ ಕಂಡಿತ್ತು.

(ವಿವಿಧ ಮೂಲಗಳಿಂದ)



## ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್

'ಮಾನವ ಸೇವೆಯೇ ಮಾಧವ ಸೇವೆ' ಎನ್ನುವ ಗುರಿ ಹೊಂದಿರುವ ತಿ.ತಿ.ದೇವಸ್ಥಾನವು ವಿವಿಧ ಸಾಮಾಜಿಕ ಸಂಕ್ಷೇಮ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಇದರ ಅಂಗವಾಗಿ ಬಾಲಬಾಲೆಯರಿಗೆ ಸಹಾಯಮಾಡುವ ಸಂಕಲ್ಪದೊಂದಿಗೆ 1943 ನೇ ಇಸವಿಯಲ್ಲಿ ಶ್ರೀವೇಂಕಟೇಶ್ವರ ಬಾಲಮಂದಿರ (ತಿರುಪತಿ) ಟ್ರಸ್ಟ್, ತಿ.ತಿ.ದೇ. ಸ್ಥಾಪಿಸಿದೆ. ಈ ಶ್ರೀ ವೇಂಕಟೇಶ್ವರ ಬಾಲಮಂದಿರ ಟ್ರಸ್ಟ್ ಪ್ರಸ್ತುತ ಶ್ರೀವೇಂಕಟೇಶ್ವರ ಜಲನಿಧಿ ಪಥಕಂ, ಕಲ್ಯಾಣಮಸ್ತು ಟ್ರಸ್ಟ್ . ಶ್ರೀ ವೇಂಕಟೇಶ್ವರ ಸಮಾಚಾರ ಸಾಂಕೇತಿಕ ಟ್ರಸ್ಟ್‌ಗಳು ಎಲ್ಲವನ್ನು ಸೇರಿಸಿ 'ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್, ಎಂಬುದಾಗಿ ರೂಪ ತಳೆದಿದೆ.

## ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್‌ನ ಗುರಿಗಳು:

1. ಅನಾಥ ಮಕ್ಕಳು,ವೃದ್ಧರು,ನಿರಾಶ್ರಿತರು,ಅಭಾಗ್ಯರು, ಬಡ-ಬಗ್ಗರು, ಬಲಹೀನರ ಅಭಿವೃದ್ಧಿ, ಅವರ ಸಂರಕ್ಷಣೆ, ಅವರ ಸಂಕ್ಷೇಮಕ್ಕಾಗಿ ಧರ್ಮಶಾಲೆಗಳು, ವಸತಿ ಗೃಹಗಳ ಏರ್ಪಾಟು.

   ಅನಾಥರು, ಆರ್ಥಿಕವಾಗಿ ಹಿಂದುಳಿದವರು, ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಸಹಾಯ ಮಾಡುವುದು.

2. ದಿವ್ಯಾಂಗರು, ಮಾನಸಿಕರೋಗಿಗಳಿಗೆ ಉಚಿತ ವೈದ್ಯಕೀಯ ಅನುಕೂಲಗಳನ್ನು ಒದಗಿಸಿ, ಅವರ ಜೀವನದಲ್ಲಿ ಹೊಸದೊಂದು ಆಯಾಮವನ್ನು ಕಲ್ಪಿಸುವುದು. ಈ ಲಕ್ಷ್ಯದಲ್ಲಿ ಕುಲ, ಮತ, ಜಾತಿ,ವರ್ಗ, ವರ್ಣ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಸ್ವೀಕರಿಸುವುದು.

3. ಕಿವುಡು, ಮೂಕಮಕ್ಕಳಿಗೆ, ಹುಟ್ಟಿನಿಂದಲೇ ಲೋಪವಿರುವ ಶಿಶುಗಳಿಗೆ ಶಿಶುವಿಹಾರಗಳನ್ನು ಏರ್ಪಾಟು ಮಾಡುವುದು.

4. ಪ್ರವಾಹ - ಬರ ಬಂದು ಪ್ರಕೃತಿ ವಿಪತ್ತುಗಳ ಸಮಯದಲ್ಲಿ ಅಗ್ನಿ ಅನಾಹುತಗಳಿಂದ ಅನಪೇಕ್ಷಿತ ದುರ್ಘಟನೆಗಳ ವೇಳೆಯಲ್ಲಿ ಯಥೋಚಿತವಾದ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು.

5. ಅಲ್ಲದೇ ವಿಕಲಚೇತನರಾಗಿ ಹುಟ್ಟಿ ತಂತಮ್ಮ ಗ್ರಾಮಗಳಲ್ಲಿ ನೆಲೆಸಿರುವ ಮಕ್ಕಳಿಗೆ ಬೇಕಾಗುವ ಎಲ್ಲಾ ಪರಿಕರಗಳನ್ನು ಒದಗಿಸುವುದು ಮತ್ತು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು.

6. ಬದುಕಲು ಅತ್ಯಾವಶ್ಯಕವಾದ ಕುಡಿಯುವ ನೀರನ್ನು ಪ್ರತಿನಿತ್ಯ ತಲುಪಿಸುವುದು. ತಿರುಮಲೆ ಪಂಚಾಯಿತಿ, ತಿರುಮಲೆ ಕಾರ್ಪೋರೇಷನ್‌ಗಳಿಗೆ ಬೇಕಾಗುವ ನೀರು ಅಣೆಕಟ್ಟುಗಳನ್ನು ನಿರ್ಮಿಸುವುದು. ನೀರಿನ ಇತರ ಸಮಸ್ಯೆಗಳಿಗೆ ಉಚಿತವಾದ ಕಾರ್ಯಗಳನ್ನು ಮಾಡುವುದು.

7. ಪುಸ್ತಕಗಳಿಂದ ಆರಂಭಿಸಿ ಇಂಟರ್‌ನೆಟ್ ಮತ್ತಿತರ ಆಧುನಿಕ ಉಪಕರಣಗಳಿಂದ ನಮ್ಮ ದೇಶದ ಚರಿತ್ರೆ, ಸಾಂಸ್ಕೃತಿಕ ಸಂಪದಗಳನ್ನು ಮುಂದಿನ ಪೀಳಿಗೆಗೆ ಮುಟ್ಟಿಸುವುದು.

8. ಕ್ರಮಬದ್ಧವಾದ ಶಿಕ್ಷಣ, ನೈತಿಕ ಆದರ್ಶವಾದಗಳಿಂದ ಯುವಕರ ಆತ್ಮವಿಶ್ವಾಸವನ್ನು ಬಲಪಡಿಸುವುದು.

9. ಶ್ರೇಯಸ್ಕರವಾದ ವೈವಾಹಿಕ ಕಾರ್ಯಕ್ರಮಗಳಿಂದ ವಧುವರರು ಗೌರಾವಾಭಿಮಾನಿಗಳಿಂದ ಉನ್ನತ ದಾಂಪತ್ಯ ಜೀವನವನ್ನು ಹೊಂದುವಂತೆ ಮಾಡುವುದು.

10. ಮುಂದಾಗಿ ಕೀರ್ತಿ ಸಾಧನೆಗಳಿಗಾಗಿ ಕಷ್ಟಪಡುತ್ತಿರುವ ವ್ಯಕ್ತಿ ಮತ್ತು ಸಂಘಟನೆಗಳಿಗೆ ಸಹಕಾರ ಕೊಡುವುದು.

11. ಇವೆಲ್ಲವೂ ಅಲ್ಲದೇ, ಮೇಲ್ಕಂಡ ಗುರಿ ಸಾಧಿಸುವಲ್ಲಿ ಯಾವುದೇ ಲಾಭಾಪೇಕ್ಷೆಗೆ ಅವಕಾಶವಿರದಂತೆ ನೋಡುವುದು.

**ಶ್ರೀ ವೆಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ವಿರಾಳದ ವಿವರಗಳು......**

1) ಈ ಪಥಕ ವಿರಾಳಕ್ಕಾಗಿ ಕನಿಷ್ಟ ರೂ. 1000/-

2) ರೂ. 1000/- ಗಿಂತ ಕಡಿಮೆ ವಿರಾಳ ಸ್ವಾಮಿಯವರ ಹುಂಡಿಗೆ, ದಾತರಿಗೆ ಯಾವುದೇ ಸಮಾಚಾರವಿಲ್ಲದೆ ಜಮಾ ಮಾಡಲಾಗುತ್ತದೆ. ಎಲ್ಲಾ ವಿರಾಳವು ಒಂದೇ ಜಾತೀಯ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಬೇಕು. ಅದರ ಮೇಲೆ ಬರುವ ಬಡ್ಡಿಯನ್ನು ಈ ಪಥಕಕ್ಕಾಗಿ ಬಳಸಲಾಗುತ್ತದೆ. "ದಿ ಎಗ್ಜಿಕ್ಯೂಟಿವ್ ಆಫೀಸರ್, ಶ್ರೀ ವೆಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ತಿ.ತಿ.ದೇ. ದೇವಸ್ಥಾನ, ತಿರುಪತಿ, ಎಂಬ ಹೆಸರಿನಿಂದ ಯಾವುದಾದರೂ ಬ್ಯಾಂಕ್‌ನಲ್ಲಿ ಚೆಕ್/ಡಿಮಾಂಡ್ ಡ್ರಾಫ್ಟ್ ಮುಖಾಂತರ ವಿರಾಳವನ್ನು 'ಚೀಫ್ ಅಕೌಂಟ್ಸ್ ಆಫೀಸರ್,ತಿ.ತಿ.ದೇ., ತಿರುಪತಿ - 517501 ಇವರಿಗೆ ಕಳುಹಿಸಬೇಕು.

ಇತರ ವಿವರಗಳಿಗೆ 0877 - 2264258

# ಪದಬಂಧ – 10

**ಎಡದಿಂದ ಬಲಕ್ಕೆ**

01.ಆಹ್ವಾನಕ್ಕೆ ಓ ಗೊಟ್ಟು ಬರುವಿಕೆ ...(4)
02.ಆಹಾರವನ್ನು ಸ್ವೀಕರಿಸುವವ (ಖಾರದ ಧ್ವನಿ) ...(3)
03.ಒಳಗಿನ ಮನಸ್ಸನ್ನು ತಟ್ಟುವಿಕೆ ...(5)
04.ಒಳ್ಳೆಯ ಫಲ ...(3)
05.ಅತ್ತಿಂದಿತ್ತ ತಿರುಗುವುದು ಆತಂಕಕ್ಕೊಳಪಟ್ಟು ...(4)

**ಬಲದಿಂದ ಎಡಕ್ಕೆ**

06.ಒಳ್ಳೆಯ ಅಥವಾ ಗೌರವಯುತ ...(2)
07.ದಾಖಲೆಯ ಮತ್ತೊಂದು ಹೆಸರು 'ಷ' ಯಿಂದಾರಂಭ ...(2)
08.ಹಟ ಸಾಧನೆಯ ಪ್ರವೃತ್ತಿ ...(2)
09.ಭೋಜನಕ್ಕೆ ಹೀಗೆನ್ನುತ್ತಾರೆ. ...(2)
10.ಹೆಚ್ಚಿನದಕ್ಕೆ ಇನ್ನೊಂದು ರೂಪ ...(3)

**ಮೇಲಿಂದ ಕೆಳಕ್ಕೆ**

11.ನೀರಾವರಿಯ ಒಂದು ರೂಪ 'ಏ' ಯಿಂದಾರಂಭ ...(2)
12. ಆತಂಕಕ್ಕೊಳ ಪಡುವ ಒಂದು ಸ್ಥಿತಿ 'ಕ' ಯಿಂದಾರಂಭ ...(4)
13.ಈ ಲೋಕದಲ್ಲಿನ ಜೀವನಕ್ಕೆ ಹೀಗೆನ್ನುತ್ತಾರೆ ...(2)
14.ಬಲ ಭಾಗದ ವ್ಯತಿರಿಕ್ತ ರೂಪ ...(2)
15.ಊಟಕ್ಕೆ ಅಥವಾ ಭೋಜನಕ್ಕೆ ಕರೆದು ಸತ್ಕರಿಸುವಿಕೆ ...(3)
16. ಒಡೆಯನನ್ನು ದೇವರನ್ನು ಈ ರೀತಿ ಸಂಬೋಧಿಸುತ್ತಾರೆ. ...(2)
17. ಉಷ್ಣತೆಯ ತೀಕ್ಷ್ಣತೆಗೆ ಒಂದು ಪದ ...(2)

**ಕೆಳಗಿನಿಂದ ಮೇಲಕ್ಕೆ**

18. ನೀರನ್ನು ಹೀಗೂ ಕರೆಯುತ್ತಾರೆ ...(3)
19.ಕೂಡಿ ಬಾಳಿದರೆ ಸ್ವರ್ಗ ಸುಖ ಎನ್ನುತ್ತಾರೆ ...(4)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | 6 | 11 | 12 | 13 |
| 2 | 2 | | | | | | | |
| 3 | | | | | 14 | 15 | | 16 |
| 4 | | 7 | 18 | 19 | | | | |
| 5 | | 3 | | | | | | |
| 6 | 4 | | | 8 | | 20 | | 21 |
| 7 | | 9 | | 17 | 5 | | | |
| 8 | 22 | | 23 | | | 10 | 24 | |


**– ಪಿ.ಜಿ. ಶ್ರೀನಿವಾಸನ್**

-68 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

20.ಒಬ್ಬರಿಂದ ಪಡೆದ ವಸ್ತು (ಬಿಟ್ಟು ಬಂದರೆ ಅದಕ್ಕೆ) ತೀರಿಸುವ ವರೆಗೆ ಹೀಗೆನ್ನುತ್ತಾರೆ. ...(2)
21. ಹಣ, ಐಶ್ವರ್ಯ ಸಂಪತ್ತಿಗೆ ಮತ್ತೊಂದು ಹೆಸರು ...(2)
22. ಓಡುವುದಕ್ಕೆ ಅಥವಾ ಮಾರ್ಮಿಕವಾಗಿ ಮೋಸ ಮಾಡಿ ಓಡಿಹೋದವನಿಗೆ ಹೀಗೆನ್ನುತ್ತಾರೆ. ...(2)
23. ಒಂದು ವಸ್ತುವನ್ನು ಪಡೆದು ಅನುಭವಿಸುವ ಆಸೆ ...(3)
24.ಸೋಲಿನ ಸಂಕೇತ ...(4)

# ಲೋಕಮಾತಾ ಶ್ರೀ ತುಲಸಿ

- ಶ್ರೀಮತಿ. ಸುಮ ಚಂದ್ರಶೇಖರ್
9880060354




ನಮ್ಮ ಸಂಪ್ರದಾಯದ ಪ್ರಕಾರ ಮನೆ ಮುಖದ್ವಾರ ಉತ್ತರಕ್ಕಿದ್ದರೂ ಪೂರ್ವದಿಕ್ಕನ್ನು ಸುಲಭವಾಗಿ ತೋಲಿಸಿಕೊಡುವುದು ಮನೆಯಂಗಳದ ಸಮಭಾಗದಲ್ಲಿರುವ ತುಲಸಿಕಟ್ಟೆ. ಮನೆಯವರಿಗೆ ಬರುವ ಗ್ರಹದೋಷ, ಭೂತಪ್ರೇತಾದಿ ಬಾಧೆಗಳು ತುಲಸಿಕಟ್ಟೆಯನ್ನು ದಾಟಿ ಮುಂದೆ ಬರುವುದಿಲ್ಲ ಎಂಬುದು ಸನಾತನ ನಂಬಿಕೆ. ಮನೆಯಿಂದ ಹೊರಗೆ ಹೋಗುವಾಗ ಕಟ್ಟೆಯ ಬಲಭಾಗ (ನಮಗೆ ಎಡಭಾಗ)ದಲ್ಲಿ ಹೊರಗೆ ಹೋಗಿ ಒಳಗೆ ಬರುವಾಗ ಎಡಭಾಗ (ನಮ್ಮ ಬಲಭಾಗ) ದಲ್ಲಿ ಬರುವುದು ಅಪಮೃತ್ಯು ನಿವಾರಕ ಎಂದಿವೆ ಶಾಸ್ತ್ರಗಳು. ಮುಸ್ಸಂಜೆಯ ಕಾಲದಲ್ಲಿ ತುಲಸಿಕಟ್ಟೆಯ ಮುಂದೆ ಸಕಲ ದೇವತೆಗಳೂ ನಿಂತಿರುವ ಕಾರಣ ಮನೆಯೊಳಗಿನಿಂದ ಶಂಖ ಧ್ವನಿಗೈದು ತುಲಸಿಕಟ್ಟೆಯ ಮುಂದೆ ಹಣತೆಯಲ್ಲಿ ದೀಪವುರಿಸಿಟ್ಟು ಪ್ರದಕ್ಷಿಣೆ ಬಂದು ನಮಸ್ಕರಿಸಿದರೆ ಏಕಕಾಲದಲ್ಲಿ ಸಕಲ ದೇವತೆಗಳಿಗೂ ವಂದಿಸಿದ ಪುಣ್ಯ ಮಾತ್ರವಲ್ಲ, ಶುಭಕರವೆಂಬುದು ಹಿಂದಿನವರ ಹೇಳಿಕೆ.

ತುಲಸಿಗಿಡ ನೆಡುವಲ್ಲಿ ದಿಕ್ಕುಗಳ ಪರಿಗಣನೆ ಅನವಶ್ಯಕವಾದರೂ ಸಂಜೆ ತುಲಸಿಯ ಮುಂದೆ ದೀಪ ಬೆಳಗುವುದಿದ್ದರೆ ವಾಯುವ್ಯ ದಿಕ್ಕಿನಲ್ಲಿ ಮಾತ್ರ ಅದನ್ನು ನೆಡುವುದು ಸೂಕ್ತ ಎಂಬುದು ವಾಸ್ತುಶಾಸ್ತ್ರಜ್ಞರ ಮತ ತುಲಸಿ ಒಂದು ವಿಶಿಷ್ಟ ಔಷಧಿ, ಅದು ಅಂಗಳದಲ್ಲಿದ್ದರೆ ಅಶ್ವತ್ಥಮರದ ಹಾಗೆ ಉಸಿರಾಟದ ಗಾಳಿಯನ್ನು ಶುದ್ಧಿಕರಿಸುವ ಗುಣ ಹೊಂದಿದೆ. ಮಕ್ಕಳ ಶೀತ ನೆಗಡಿಯಿಂದ ಆರಂಭಿಸಿ ಹತ್ತಾರು ವ್ಯಾಧಿಗಳಿಗೆ ಅದು ಸಿದ್ಧೌಷಧಿ, ಅದರ ಎಲೆಗಳಲ್ಲಿ ಸದಾ ನೆಲೆಸಿರುವುದಾಗಿ ಸಂಜೀವಿನಿ ದೇವತೆ ವರ ನೀಡಿದಳಂತೆ.

ತುಲಸಿಯಲ್ಲೂ ರಾಮತುಲಸಿ, ಕೃಷ್ಣತುಲಸಿ, ಶುಕ್ಲತುಲಸಿ, ನಿಂಬೆತುಲಸಿ, ಲವಂಗತುಲಸಿ, ಪಚ್ಚತುಲಸಿ ಮುಂತಾಗಿ ಹಲವು ಜಾತಿಗಳಿವೆ. ಇದರಲ್ಲಿ ಪೂಜೆಗೆ ವಿಶೇಷವಾದುದು ಬಿಳಿವರ್ಣದ ಶುಕ್ಲ ತುಲಸಿ ಎನ್ನಲಾಗಿದೆ. ವಿಷ್ಣುವಿನ ಅರ್ಚನೆಗೆ ಅದು ಶ್ರೇಷ್ಠ, ಆದರೆ ಗಣಪತಿಗೆ ತುಲಸಿ ಪ್ರಿಯವಲ್ಲ, ಪೂಜೆಗೆ ತುಲಸಿದಳವೊಂದಿದ್ದರೆ ಇನ್ನಾವ ವಸ್ತುವಿಲ್ಲದಿದರೂ ಒಂದು ದಳ ಶ್ರೀತುಲಸಿ ಬಿಂದು ಗಂಗೋಧಕವು ಇಂದಿರಾರಮಣಗರ್ಪಿತವೆನ್ನಲು ಹರಿ ಸಂಪ್ರೀತನಾಗುತ್ತಾನೆ ಎಂದಿದ್ದಾರೆ ದಾಸರು. ಸತ್ಕಾರ್ಯಗಳ ಕೊನೆಗೆ ತುಲಸಿದಳದಿಂದ ಬ್ರಹ್ಮಾರ್ಪಣ ನೀಡದಿದ್ದರೆ ಸಾಫಲ್ಯವಿಲ್ಲವೆಂಬ ವೈದಿಕ ನಂಬಿಕೆಯಿದೆ. ಶ್ರಾದ್ಧದಲ್ಲಂತೂ ತುಲಸಿ ಅತ್ಯಗತ್ಯವಾಗಿದೆ. ಪೂಜಾತೀರ್ಥವನ್ನು ಪಾವನಗೊಳಿಸುವುದೇ ಅದರೊಂದಿಗೆ ಸೇರುವ ತುಲಸಿದಳ, ಗ್ರಹಣಕಾಲದಲ್ಲಿ ವೈರಾಣು ಗಳಿಂದ ಹಾಲು, ಮೊಸರುಗಳನ್ನು ರಕ್ಷಿಸಲು ಅದರಲ್ಲಿ ಒಂದು ತುಲಸೀದಳ ಹಾಕಿಡುವುದು ಪುರಾತನ ಪದ್ಧತಿ.

**ಆರೋಗ್ಯ ಪ್ರದಾಯಕ ತುಲಸಿ**

ಆಧುನಿಕ ವಿಜ್ಞಾನವೂ ತುಲಸಿಯಲ್ಲಿ ಆಮೂಲ್ಯ ಔಷಧೀಯ ಗುಣಗಳಿರುವುದನ್ನು ಪತ್ತೆ ಹಚ್ಚಿದ್ದು ಈಗಾಗಲೇ 350 ಕ್ಕಿಂತಲೂ ಹೆಚ್ಚು ಔಷಧಿಗಳಲ್ಲಿ ತುಲಸಿ ಸಸ್ಯವನ್ನು ಬಳಸಲಾಗುತ್ತಿದೆ. ತುಲಸಿಯನ್ನು ಕುರಿತು ಸಸ್ಯಶಾಸ್ತ್ರಜ್ಞರು ಹೀಗೆ ಹೇಳುತ್ತಾರೆ - ತುಲಸಿ ಸಸ್ಯವು ಲೇಬಿಯೇಟ್ ಕುಟುಂಬಕ್ಕೆ ಸೇರಿದ್ದು ಅದು ಸಸ್ಯಶಾಸ್ತ್ರದ ಪ್ರಕಾರ ಅತ್ಯುತ್ತಮವಾಗಿದೆ. ಅದರ ಎಲೆ, ತೊಟ್ಟು ಬೀಜ, ಬೇರು.. ಹೀಗೆ ಎಲ್ಲ ಭಾಗಗಳೂ ಔಷಧಿಯ ಗುಣಗಳಿಂದ ಕೂಡಿವೆ.

ನೂರಾರು ಬಗೆಯ ಕಾಯಿಲೆಗಳನ್ನು ಗುಣಪಡಿಸುವ ಅದ್ಭುತ ಶಕ್ತಿ ತುಲಸಿಗಿದೆ. ಅದು ಅಸಂಖ್ಯ ರೋಗಗಳ ಸಂಜೀವಿನಿಯಾಗಿದ್ದು, ಮೊದಲಿನಿಂದಲೂ ಔಷಧಿಯಾಗಿ ಬಳಕೆಯಾಗುತ್ತ ಬರುತ್ತಿದೆ. ನಮ್ಮ ಆಯುರ್ವೇದದಲ್ಲಿ ತುಲಸಿಯ ಬಳಕೆ ನಿರಂತರವಾಗಿದೆ.ಚರಕಸಂಹಿತೆಯಲ್ಲಿ ತುಳಸಿ ದೇಹದ ಒಳಗೂ ಹಾಗೂ ಹೊರಗೂ ಬಹು ಉಪಯುಕ್ತ ಎಂದು ಹೇಳಲಾಗಿದೆ. ಅಂದರೆ ತುಲಸಿಯನ್ನು ಸೇವಿಸುವುದರಿಂದ ಹಾಗೂ ದೇಹದ ಮೇಲೆ ಧರಿಸುವುದರಿಂದ ಆರೋಗ್ಯ ವೃದ್ಧಿಸುತ್ತದೆ, ಎನ್ನಲಾಗಿದೆ. ತುಲಸಿಯನ್ನು ಬೆಳ್ಳಿ, ಬಂಗಾರ , ತಾಮ್ರ ಲೋಹಗಳಲ್ಲಿ ತುಂಬಿ ಸರಮಾಡಿ ಧರಿಸುತ್ತಾರೆ. ಅಮೇರಿಕಾ, ಜಪಾನ್, ಜರ್ಮನ್ ದೇಶಗಳಲ್ಲೂ ಆರೋಗ್ಯದಾಯಕವೆಂದು ತುಲಸಿಯನ್ನು ಕೊರಳಲ್ಲಿರಿಸುವ ಪದ್ಧತಿ ಈಗಲೂ ಇದೆ.ಅನೇಕ ಗ್ರಂಥಗಳಲ್ಲಿ ತುಲಸಿಯ ಮಹತ್ತ್ವ ಹಾಗೂ ಆರೋಗ್ಯದಾಯಕ ಗುಣಗಳ ವರ್ಣನೆಯಿದ್ದು, ಇದೊಂದು ಸಿದ್ಧೌಷಧ ಎಂದು ಹೇಳಲಾಗಿದೆ.

ತುಲಸಿಯ ಸಸ್ಯಶಾಸ್ತ್ರೀಯ ಹೆಸರು ಒಸಿಮಮ್ ಸೆಕ್ಟಂ ಆಗಿದ್ದು, ಇದು ಸಮುದ್ರಮಟ್ಟದಿಂದ 6000 ಅಡಿ ಎತ್ತರದ ಪ್ರದೇಶಗಳಲ್ಲೂ ಬೆಳೆಯುವ ಸಾಮರ್ಥ್ಯ ಹೊಂದಿದೆ. ನಮ್ಮ ದೇಶದ ಹವಾಮಾನ ತುಲಸಿ ಗಿಡಕ್ಕೆ ಸೂಕ್ತವಾಗಿದೆ.

ಭಾರತದಲ್ಲಿ ಹಲವು ಬಗೆಯ ತುಳಸಿ ವೈವಿಧ್ಯಗಳಿವೆ. ಕೃಷ್ಣ (ಕಪ್ಪು) ತುಲಸಿ, ರಾಮ ತುಲಸಿ, ಓಂಕಾರ ತುಳಸಿ, - ಇವೆಲ್ಲವುಗಳಲ್ಲೂ ಅನುಪಮ ಔಷಧೀಯ ಗುಣಗಳಿವೆ. ತುಲಸಿಯ ಮಹತ್ವವನ್ನು ಬಲ್ಲ ನಮ್ಮ ಮಹರ್ಷಿಗಳು ಹಾಗೂ ಪೂರ್ವಜರು ತುಲಸಿ ಸಸ್ಯದ ಹುಟ್ಟಿನಲ್ಲೂ ಆರೋಗ್ಯದಾಯಕ ಗುಣ ಮೆರೆದದ್ದು ಅವಳ ಹುಟ್ಟು ದೇವವೈದ್ಯ ಧನ್ವಂತರಿಯಿಂದ ಆಯುರ್ವೇದ ಬಗೆಗೆ ವಿವರಣೆ ನೀಡಿದ್ದಾರೆ.ದೇವದಾನವರು ಕ್ಷೀರಸಾಗರವನ್ನು ಕಡೆಯುವಾಗ ಧನ್ವಂತರಿಯ ಅವತಾರವಾಯಿತು. ಅವನ ಕೈಯಲ್ಲಿ ಅಮೃತದ ಗಿಂಡಿ ಇದ್ದಿತು.ಆ ಅಮೃತ ಕುಂಭದಲ್ಲೇ ತುಲಸಿಯ ಉತ್ಪತ್ತಿಯಾಯಿತು ಎಂದು ಹರಿವಂಶಾದಿ ಪುರಾಣಗಳಲ್ಲಿ ಹೇಳಲಾಗಿದೆ. ಸ್ಕಂದ ಪುರಾಣಗಳಲ್ಲಿ ಅಮೃತ ಕಲಶವು ತುಳುಕಿದಾಗ ನೆಲದ ಮೇಲೆ ಬಿದ್ದ ಹನಿಗಳಿಂದ ತುಲಸಿ ಹುಟ್ಟಿತೆಂದು ಹೇಳಲಾಗಿದೆ. ತುಲಸಿಯ ಔಷಧೀಯ ಗುಣಗಳನ್ನು ಹೀಗೆ ಪಟ್ಟಿ ಮಾಡಬಹುದು.

- ತುಲಸಿ ಗಿಡದ ಮೇಲಿನಿಂದ ಬೀಸಿ ಬಂದ ಗಾಳಿಯಲ್ಲಿ ಸೇವನೆಯಿಂದ ದೇಹಕ್ಕೆ ಹಿತವಾಗುತ್ತದೆ. ಕಾರಣ ಮನೆಯ ಸುತ್ತ ತುಲಸಿ ಗಿಡಗಳನ್ನು ಬೆಳೆಸಿರಿ.

- ತುಲಸಿ ಸೇವನೆಯಿಂದ ಪಚನಶಕ್ತಿ ಹೆಚ್ಚುತ್ತದೆ.

- ಟಿ.ಬಿ. ಅಸ್ತಮಾ, ಚರ್ಮರೋಗಗಳ ನಿವಾರಣೆಯಲ್ಲಿ ತುಲಸಿ ಸಿದ್ಧೌಷಧಿಯಾಗಿದೆ.

- ಸ್ತ್ರೀಯರು ತುಲಸಿ ಸೇವಿಸುವುದರಿಂದ ಗರ್ಭಧಾರಣೆ ಸ್ಥಿರವಾಗುವುದು.

- ತುಲಸಿಯಲ್ಲಿ ಬ್ಯಾಕ್ಟೀರಿಯಾಗಳನ್ನು ನಾಶ ಮಾಡುವ ಶಕ್ತಿಯಿದೆ ನಳದ ನೀರಿನಲ್ಲಿ ಒಂದು ತುಲಸಿದಳ ಹಾಕಿದರೆ ಅದರಲ್ಲಿರುವ ಕ್ರಿಮಿಗಳು ನಾಶವಾಗಿ ಪಾತ್ರೆಯ ತಳಕ್ಕೆ ಹೋಗುತ್ತವೆ ಮತ್ತು ನಲ್ಲಿ ಶುದ್ಧವಾಗುತ್ತದೆ. ಅಡುಗೆ ಪದಾರ್ಥಗಳ ಮೇಲೆ ತುಲಸಿದಳ ಹಾಕುವುದು ಒಳ್ಳೆಯದು. ಗ್ರಹಣ ಹಿಡಿದ ಸಮಯದಲ್ಲಿ ನೀರು ಹಾಗೂ ಅಡುಗೆ ಪದಾರ್ಥಗಳ ಮೇಲೆ ತುಲಸಿದಳ ಹಾಕುವುದು ಈ ಕಾರಣಕ್ಕಾಗಿಯೇ, ಕುಡಿಯುವ ನೀರು ತುಂಬಿದ ಪಾತ್ರೆಗೆ ನಿತ್ಯ ಒಂದೆರಡು ಎಲೆ ತುಲಸಿ ಹಾಕಿ ಸೇವಿಸುವುದು ತುಂಬ ಒಳ್ಳೆಯದು.

-ನಿತ್ಯ ಮುಂಜಾನೆ ಒಂದೆರಡು ತುಲಸಿದಳ ತಿಂದು ತಣ್ಣೀರು ಕುಡಿದರೆ ಮೂಲವ್ಯಾಧಿಯ ತೊಂದರೆ ಭಾಧಿಸುವುದಿಲ್ಲ.

- ನೆಗಡಿ, ಕೆಮ್ಮು, ಕಫಕ್ಕೆ ತುಲಸಿ ನಿಜಕ್ಕೂ ಸಂಜೀವಿನಿ ಆಗಿದೆ.

- ಪುರುಷವೀರ್ಯ ವೃದ್ಧಿಯಲ್ಲಿ ಇದು ಉತ್ತಮ ಔಷಧಿಯಾಗಿದೆ.

- ನಿತ್ಯ ತುಲಸಿ ಸೇವನೆಯಿಂದ ಸ್ತ್ರೀಯರ ಋತುಚಕ್ರಗಳು ನಿಯಮಿತವಾಗುತ್ತದೆ. ತೊಂದರೆಗಳು ಕಡಿಮೆಯಾಗುತ್ತವೆ.


- ನಿತ್ಯ ತುಲಸಿ ದಳ ಸೇವಿಸುತ್ತಿದ್ದರೆ ಯಾವುದೇ ಸಾಂಕ್ರಾಮಿಕ ರೋಗಗಳು ಬಾಧಿಸದು.

- ಹೃದಯ ರೋಗವನ್ನು ಉಪಶಮನಗೊಳಿಸುತ್ತದೆ.

- ಹಲ್ಲು ನೋವಿದ್ದವರು ನಿತ್ಯ ತುಲಸಿದಳ ಸೇವಿಸುತ್ತಿದ್ದರೆ ನೋವಿನಿಂದ ಮುಕ್ತರಾಗುತ್ತಾರೆ.

ತುಲಸಿ ಒಂದು ಅದ್ಭುತ ಸಸ್ಯವಾಗಿದ್ದು ಸರ್ವರೋಗ ನಿವಾರಕ ಗುಣವನ್ನು ಹೊಂದಿದೆ. ಅದು ದೇಹದ ರೋಗ ನಿರೋಧಕ ಗುಣವನ್ನು ಹೆಚ್ಚು ಮಾಡುತ್ತದೆ ಎಂಬುದು ವೈಜ್ಞಾನಿಕವಾಗಿಯೇ ಸಿದ್ಧವಾಗಿದೆ. ವಿಜ್ಞಾನಿಗಳು ತುಲಸಿ ರಸವನ್ನು ವೈಜ್ಞಾನಿಕವಾಗಿ ಪರಿಶೀಲಿಸಿದಾಗ ಅದರಲ್ಲಿ ದೇಹಕ್ಕೆ ಬೇಕಾಗುವ 27 ಲೋಹಾಂಶಗಳು ಇವೆ ಎಂಬುದು ಸಾಬೀತಾಗಿದೆ. ಇದರ ಔಷಧೀಯ ಗುಣಕ್ಕೆ ಬೇರೆ ಯಾವುದೇ ಸಸ್ಯ ಸರಿಸಾಟಿ ಅಲ್ಲವೆಂದೇ ಇದಕ್ಕೆ ನಮ್ಮ ಪೂರ್ವಜರು 'ತುಲಸಿ' ಎಂದು ಹೆಸರಿಸಿದ್ದಾರೆ. ತುಳಸಿ ನಮ್ಮ ಆರಾಧ್ಯ ಸಸ್ಯ. ತುಲಸಿಯಲ್ಲಿ ನಮ್ಮ ಆತ್ಮನ ಪಾಪ - ತಾಪ ದೂರೀಕರಿಸಬಲ್ಲ ದೇವತೆಗಳಿದ್ದಾರೆ. ಸರ್ವದೇವರ ಸಾನಿಧ್ಯ ತುಲಸಿಯಲ್ಲಿದೆ. ಆದ್ದರಿಂದ ಸರ್ವ ದೃಷ್ಟಿಯಿಂದ ತುಲಸಿ ಸರ್ವರಿಗೂ ಪೂಜ್ಯಳು. ತುಲಸಿಯನ್ನು ಆರಾಧಿಸಿ ಆರೋಗ್ಯ ಪಡೆಯೋಣ.





# ಚಿಪ್ಪಗಿರಿಯ ಚೇತನ ಶ್ರೀ ವಿಜಯದಾಸರು

## ಕ್ರಿ.ಶ. 1682-1755

- ಡಾ।। ರಾಮಚಂದ್ರದಾಸ್ ಸಿ.ಜೆ.
9483384584

ಹರಿದಾಸ ಪಂಥದವರು ಯಾರೇ ಆಗಲಿ ಶ್ರೀ ವಿಜಯದಾಸರನ್ನು ಆರಾಧಿಸದಿದ್ದರೆ, ಪೂರ್ಣ ಭಕ್ತಿಯನ್ನು ಆ ದಾಸ ವೃಂದದಲ್ಲಿ ಇಟ್ಟಂತಾಗುವುದಿಲ್ಲ. ಶ್ರೀ ಮದಾನಂದ ತೀರ್ಥ ಭಗವತ್ಪಾದರಿಗೆ ಶ್ರೀ ಜಯತೀರ್ಥರಿದ್ದಂತೆ, ಹರಿದಾಸ ಪಂಥದ ಪ್ರಭುಗಳೆನಿಸಿದ ಶ್ರೀಪುರಂದರದಾಸರಿಗೆ ಶ್ರೀ ವಿಜಯದಾಸರು ಆಗಿದ್ದಾರೆ.

ಶ್ರೀವಿಜಯದಾಸರು ಭೃಗು ಋಷಿಗಳಂಶಜರು ಎಂಬುದಾಗಿ ಶ್ರೀಮೋಹನದಾಸರು "ವಿಜಯರಾಯರ ಪಾದ ಭಜಿಸಿ..." ಎಂಬ ಕೃತಿಯಲ್ಲಿ , ಋಷಿಗಳೆಲ್ಲರೂ ಕೂಡಿ ಗಂಗಾ ತೀರದಲ್ಲಿ ಯಜ್ಞ ಮಾಡುವಾಗ, ಯಾಗದ ಫಲವನ್ನು ಸಮರ್ಪಿಸುವ ವಿಚಾರದಲ್ಲಿನ ಸಂಶಯವನ್ನು ಪರಿಹರಿಸಿ, ಹರಿಸರ್ವೋತ್ತಮನೆಂದು ಪ್ರತಿಪಾದಿಸಿದ ಭೃಗು ಋಷಿಗಳೇ ಇವರು ಎಂದು ಸ್ಪಷ್ಟ ಪಡಿಸಿದ್ದಾರೆ. ವಿಜಯದಾಸರ ಅವತಾರಗಳನ್ನು ಸ್ಮರಿಸಿದರೆ ಪಾಪ ನಾಶವಾಗುತ್ತದೆ ಎಂದು, ಇವರ ತಮ್ಮಂದಿರಾದ ಹಯವದನ ವಿಠಲದಾಸರು ಹೇಳುತ್ತಾ, ದಾಸರು ಕೃತಯುಗದಲ್ಲಿ ನಾರದರ ಸೇವೆ ಮಾಡುತ್ತಿದ್ದುದರ ಫಲವಾಗಿ, ನಾರದರು ಪುರಂದರದಾಸರಾಗಿ ಅವತರಿಸಿ, ಶ್ರೀವ್ಯಾಸ ರಾಯರ ಕೃಪೆಗೆ ಪಾತ್ರರಾಗಿದ್ದಾಗ, ಇವರ ಮನೆಯಲ್ಲಿ ಮೊದಲು ಆಕಳ ಕರುವಾಗಿ ಜನಿಸಿ, ನಂತರ ದಾಸರ ಕೊನೆಯ ಮಗ ನಾದ ಮಧ್ವಪತಿಯಾಗಿ ಅವತರಿಸಿದರು. ಪುರಂದರದಾಸರು ಪಂಚ ಲಕ್ಷಕೃತಿಗಳನ್ನು ರಚಿಸಲು ಸಂಕಲ್ಪಿಸಿ, ಬಾಕಿ ಉಳಿದ ನ್ಯೂನತೆಯನ್ನು ಪೂರ್ತಿಗೊಳಿಸುವಂತೆ ತಮ್ಮ ಕೊನೆಯ ಮಗನಾದ ಮಧ್ವಪತಿಗೆ ಅಪ್ಪಣೆ ಮಾಡಿದ್ದನ್ನು ಪೂರೈಸಲು ವಿಜಯದಾಸರಾಗಿ ಅವತರಿಸಿದ್ದಾರೆ.ತ್ರೇತಾಯುಗದಲ್ಲಿ ಸುರ ಲೀಲನೆಂಬ ಕಪಿಯಾಗಿ ಹುಟ್ಟಿ, ಶ್ರೀ ರಾಮನ ಸೇವೆಗೈದಿದ್ದಾರೆ. ದ್ವಾಪರ ಯುಗದಲ್ಲಿ ನಿಕಂಪನೆಂಬ ಯಾದವರಾಗಿ ಅವತರಿಸಿ ಕೃಷ್ಣನ ಸೇವೆಗೈದಿದ್ದಾರೆ.

ವಿಜಯದಾಸರು ತಾವು ರಚಿಸಿದ ಸುಳಾದಿಗಳಲ್ಲಿ ಅಲ್ಲಲ್ಲಿ ತಮ್ಮ ಸ್ವಾಂಶ ನಿರೂಪಣೆಯ ಬಗ್ಗೆ ಸೂಕ್ಷ್ಮವಾಗಿ ಸುಳಿವು ನೀಡಿದ್ದಾರೆ. "ದುರುಳರನ್ನು ಪರಿಹರಿಸೋ ದುರ್ಗಾ ರಮಣ ಹರಿ..." ಎನ್ನುವ ಸುಳಾದಿಯಲ್ಲಿ, ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನಿಗೆ ಒದಗಿದ,ಕುಹುಯೋಗ ಪರಿಹರಿಸಿದ ವ್ಯಾಸರಾಯರ ಶಿಷ್ಯರಾದ, ಪುರಂದರದಾಸರ ಕರುಣೆಗೆ ಪಾತ್ರನಾದ ಮಧ್ವಪತಿಯೇ ತಾವು ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ.


"ವಂಧ್ಯನೆಂದರೆ ನೀನಿಂದು.." ಎಂಬ ಸುಳಾದಿಯಲ್ಲಿ ಕಂದನ್ನ ಅಪರಾಧ ಒಂದು ಎಣಿಸಿದಿರು, ತಂದೆಯ ತಂದೆ, ತಂದೆ.... ವಿಜಯವಿಠಲರೇಯಾ.." ಎಂದು ಅರುಹಿದ್ದಾರೆ. ಇಲ್ಲಿ ತಂದೆಯ ಎಂದರೆ ಭೃಗು ಋಷಿಗಳ ತಂದೆ ವರುಣದೇವರು, ವರುಣ ದೇವರ ತಂದೆ ಬ್ರಹ್ಮದೇವರು, ಬ್ರಹ್ಮದೇವರ ತಂದೆ ವಿಜಯವಿಠಲ ಶ್ರೀಹರಿ. ಆದರೆ" ಅಂಜುವೆವು ನಿನ್ನ ಕಪಟ ನಾಟಕ ತನಕೆ.."ಎನ್ನುವ ಸುಳಾದಿಯಲ್ಲಿ ತಮ್ಮ ಮೂಲರೂಪವಾದ ಭೃಗು ಋಷಿಗಳ ಬಗ್ಗೆ ತಿಳಿಸುತ್ತಾ "ತಂದೆಯ ತಂದೆ ವಿಜಯ ವಿಠಲ.." ಎಂದಿದ್ದಾರೆ. ಮೂಲ ಭೃಗು ಋಷಿಗಳ ತಂದೆ ಬ್ರಹ್ಮ ದೇವರು, ಅವರ ತಂದೆ "ಶ್ರೀವಿಜಯವಿಠಲ" ಎಂಬುದರ ಬಗ್ಗೆ ಸಂಶಯ ಮೂಡದಂತೆ,ಅವರೇ ಪರಿಹರಿಸಿದ್ದಾರೆ. "ದಾಸರ ಮನೆಯಲ್ಲಿ ವಾಸವಾಗಿದ್ದವ..." ಎಂಬ ಸುಳಾದಿಯಲ್ಲಿ,ತಾವು ಮಧ್ವಪತಿಯಾಗಿದ್ದಾಗ, ಪುರಂದರ ದಾಸರು ತಮ್ಮನ್ನು ಲಾಲಿಸಿ, ಪಾಲಿಸಿ, ಬೆಳೆಸಿದ್ದನ್ನು ಸ್ಮರಿಸಿದ್ದಾರೆ.

ದಾಸರು, "ದಾಸರ ಸುತರ ನಾಲ್ವರ ಮುಂದೆ.... ತಮ್ಮ ದಾಸ ಪುಟ್ಟುವನೆಂದು... ಎಂಬ ಸುಳಾದಿಯಲ್ಲಿ ಪುರಂದರ ದಾಸರಾಯರ ದಾಸರಾದ ಮಧ್ವಪತಿಯು ಮುಂದೆ (ವಿಜಯ ದಾಸರಾಗಿ) ಜನ್ಮತಾಳುವನು ಎಂದು, ಪುರಂದರದಾಸರೇ ಸೂಚಿಸಿದ್ದರು ಎಂಬುದನ್ನು ತಿಳಿಸಿದ್ದಾರೆ. ಆದ್ದರಿಂದ "ದಾಸರ ನಿಜ ಕಾರುಣ್ಯ ಪಾತ್ರನು ನಾನು.." ಎಂಬ ಸುಳಾದಿಯಲ್ಲಿ, ತಾವು ಪುರಂದರದಾಸರ ಪೂರ್ಣಾನುಗ್ರಹ ಪಡೆದು ಕೃತಕೃತ್ಯರಾಗಿ ದ್ದನ್ನು ಸ್ಮರಿಸಿದ್ದಾರೆ.

ಇಂತಹ ಮಹಾನುಭಾವರಾದ ಮಧ್ವಪತಿಯು, ಅಶ್ವತ್ಥ ನರಸಿಂಹ ಕ್ಷೇತ್ರವಾದ ಚೀಕಲಪರವಿಯಲ್ಲಿ, ಸೀನಪ್ಪ ಮತ್ತು ಕೂಸಮ್ಮ ನಂತರ ಮಗನಾಗಿ "ದಾಸಪ್ಪ" ನಾಮದಿಂದ ಭುವಿ ಯಲ್ಲಿ , ಕ್ರಿ.ಶ. 1682 ರ ದುಂದುಭಿನಾಮ ಸಂವತ್ಸರದಲ್ಲಿ ಅವತರಿಸಿದರು. ಕಾಲಾಂತರದಲ್ಲಿ ಅರಳಮ್ಮನೊಂದಿಗೆ ವಿವಾಹ ವಾಯಿತು. ಹರಿದು ತಿನ್ನುವ ಬಡತನ, ಈ ಮಧ್ಯೆ, ಸೋದರ ಮಾವನಾದ ಆದವಾನಿ ತಹಸಿಲ್ದಾರ್ ಆಗಿದ್ದ ರಾಘವೇಂದ್ರ ರಾಯನಿಂದಾದ ಅವಮಾನ ಇತ್ಯಾದಿಗಳಿಂದ ಜರ್ಝರಿವಾದ ಭಾರವಾದ ಮನಸ್ಸಿನಿಂದ ಗೊತ್ತು ಗುರಿ ಇಲ್ಲದೆ, ಎಲ್ಲರನ್ನು ತೊರೆದು ಏಕಾಂಗಿಯಾಗಿ ಹೊರಟು ಭಾಗಿಗೆ ತಲುಪಿ, ಅಲ್ಲಿನ ಕುಲಕರಣ ಕೇಶವರಾಯನ ಮನೆಯಲ್ಲಿನ ಆತಿಥ್ಯವೇ, ಮುಂದೆ ಕೇಶವರಾಯನ ಪ್ರಾಣ ಉಳಿಸಿದ್ದು, ಅಲ್ಲಿಂದ ಹೊರಟು ಕಾಶಿಯ ಮಣಿಕರ್ಣಿಕಾ ಘಟ್ಟದಲ್ಲಿ ಭಗವಧ್ಯಾನ ಪರವಶರಾಗಿ ಕಾಲದ ಪರಿವೇ ಇಲ್ಲದೆ ಧ್ಯಾನಿಸುತ್ತಿದ್ದ, ಇವರನ್ನು ಅಂದು ರಾತ್ರಿ ಸ್ವಪ್ನದಲ್ಲಿ, ಶ್ರೀಹರಿಯೇ ಪುರಂದರದಾಸರ ರೂಪದಿಂದ ಬಂದು, ದಾಸಪ್ಪ ನನ್ನು ವ್ಯಾಸಕಾಶಿಗೆ ಕರೆದೊಯ್ದು, ಅಲ್ಲಿ ಶುಕಾಚಾರ್ಯರು ಇಂದ್ರಾದಿ ದೇವತೆಗಳು, ನಾರದರು, ಗಂಧರ್ವರು ಮೊದಲಾದ ಹೆಸರಾಂತ ಮುನಿಗಳ ಮಧ್ಯ ನೀಲಮಣಿಯ ಕಾಂತಿಯಂತೆ ವಿರಾಜಮಾನರಾಗಿದ್ದ ವೇದವ್ಯಾಸರ ಪದತಲ ದಲ್ಲಿ ಕೂಡಿಸಿ " ವಿಜಯವಿಠಲ" ಎಂಬ ಅಂಕಿತ ಪ್ರದಾನವಾಯಿತು. ತಕ್ಷಣ ಎಚ್ಚರವಾದಾಗ ಅವರ ಚರ್ಯೆಯೇ ಬದಲಾಗಿ "ಹರಿದಾಸ" ರಾಗಿ, ವಿಜಯದಾಸರೆಂಬ ಪ್ರಖ್ಯಾತನಾಮರಾದರು. ಕಾಶಿಯ ಮಹಾರಾಜನಿಂದ ಸಕಲರಾಜ ಮರ್ಯಾದೆ, ಪಲ್ಲಕ್ಕಿ ಇತ್ಯಾದಿ ಗಳ ಗೌರವವನ್ನು ಸ್ವೀಕರಿಸಿ, ಇದೆಲ್ಲವೂ ವಿಜಯವಿಠಲನ ಅನುಗ್ರಹವೆಂದು ಅರಿತು"."ನಿನ್ನ ಒಲುಮೆಯಿಂದ ನಿಖಿಲ ಬಂದು ಮನ್ನಿಸುವರೋ ಮಹರಾಯ! ನಿನ್ನದೇ ಸಕಲ ಸಂಪತ್ತು.. " ಎಂಬುದಾಗಿ ಶ್ರೀ ಹರಿಯನ್ನು ಕೊಂಡಾಡಿದರು.ಇಂತಹ ಮಹಾನ್ ಚೇತನ ಕಷ್ಟದಲ್ಲಿ ತೊಳಲಾಡುತ್ತಿರುವ ಭಕ್ತರ ಬಳಿ ತಾವೇ ಹೋಗಿ ಅವರನ್ನು ಉದ್ಧರಿಸಿದ ಮಹಾನುಭಾವರು. ಲೋಕೋದ್ಧಾರಕ್ಕಾಗಿಯೇ ಅವತರಿಸಿದ ಗಣೇಷಾಂಶರಾದ ಭಾಗಣ್ಣದಾಸರಿಗೆ "ಗೋಪಾಲವಿಠಲ" ಎಂಬ ಅಂಕಿತ ನೀಡಿ, ಭಾವೀ ಜಗನ್ನಾಥದಾಸರಾದ ಶ್ರೀನಿವಾಸಾಚಾರ್ಯರಿಗೆ ಗೋಪಾಲದಾಸರಿಂದ ಸ್ವರೋಪೋದ್ಧಾರ ಮಾಡಿಸಿ ಜಗತ್ತಿಗೆ ಜಗನ್ನಾಥದಾಸರಂಥ, ಹರಿಕಥಾಮೃತಸಾರ ಗ್ರಂಥ ಕರ್ತೃ ಗಳನ್ನು ನೀಡಿದ ಮಹಾಮಹಿಮರು.

ಮಾಳಗೀ ಶ್ರೀನಿವಾಸಾಚಾರ್ಯರಿಂದ ಪೂಜೆಗೊಳ್ಳುತ್ತಿದ್ದ ವಿಜಯವಿಠಲನು ತಾನಾಗಿ ಬಯಸಿ ಶ್ರೀವಿಜಯದಾಸರ ಬಳಿಗೆ ಬಂದು ಅವರಿಂದ ಪೂಜೆಗೊಂಡು ನಂತರ ಗೋಪಾಲದಾಸ ರಿಂದ ಪೂಜೆಗೊಂಡು, ಅದ್ಯಾಪಿ ಗದ್ವಾಲಿನಲ್ಲಿರುವ ದಾಸರ ವಂಶಸ್ಥರಾದ ಶ್ರೀರಾಘವೇಂದ್ರದಾಸರ ಮನೆಯಲ್ಲಿ ಆ ವಿಜಯ ವಿಠಲಮೂರ್ತಿ", ಯು ಪೂಜೆಗೊಳ್ಳುತ್ತಿದೆ.

ಭೃಗು ಋಷಿಗಳ ಮೇಲೆ ವಾಯುದೇವರ ಪೂರ್ಣಾನು ಗ್ರಹವಿದ್ದುದರಿಂದಲೇ, ಇದೇ ಅಂಶಜರಾದ ಮಧ್ವಪತಿಯ ಕೈಯಲ್ಲಿ ಸ್ವತಃ ಯಂತ್ರೋದ್ಧಾರಕ ಪ್ರಾಣದೇವರು ಭೋಜನ ಮಾಡಿ ಅನುಗ್ರಹಿಸಿದ್ದು, ಇಂತಹ ಮಹಾಮಹಿಮರು ರಾಮೇಶ್ವರ ಯಾತ್ರೆ ಮಾಡುವಾಗ ದರೋಡೆ ಕೋರನಾದ ರಂಗ ರಾಜುವನು ಬಂಧಿಸಿ ತಾವು ಹಿಂತಿರುಗುವಾಗ ಅವನನ್ನು ಬಂಧ ಮುಕ್ತಿ ಗೊಳಿಸಿದರು. ಕಲ್ಲೂರು ಸುಬ್ಬಣ್ಣಾಚಾರ್ಯರನ್ನು ಉದ್ಧರಿಸ ಬೇಕೆಂದು, ಆಚಾರ್ಯರು ಸುಧಾಮಂಗಳ ಮಾಡುವ ದಿವಸ, ಮಂಡಿಗೆ ಮಾಡುವ ಪಾಚಕನು ಬಾರದೆ ಇದ್ದ ಕಾರಣ ವಿಜಯ ದಾಸರೇ ವೇಷ ಮರೆಸಿ ಪಾಚಕನ ವೇಷದಿಂದ ಎಲ್ಲ ಕಾರ್ಯ ಪೂರೈಸಿ ಆಚಾರ್ಯರ ಬಳಿ ಬಂದು " ಒಂದೇ ಒಂದು ಸುಧಾ ವಾಕ್ಯ ಉಪದೇಶಿಸಬೇಕೆಂದು ಕೇಳಿದ್ದಕ್ಕೆ, ಆಚಾರ್ಯರು ದಾಸ ರನ್ನು ಬಹುವಾಗಿ ನಿಂದಿಸಿದರು. ಹೇಗಾದರೂ ಆಚಾರ್ಯರನ್ನು



ಉದ್ಧರಿಸಲೇಬೇಕೆಂದು, ನಿರ್ಧರಿಸಿದ ದಾಸರು ನಿರಕ್ಷರ ಕುಕ್ಷಿಯಾದ ಒಬ್ಬ ನೀರಿನವನ ತಲೆಯ ಮೇಲೆ ಮಂತ್ರಾಕ್ಷತೆ ಹಾಕಿ,ಅವರ ಕೈಯ್ಯನ್ನಿಟ್ಟು ಇಡೀ ಸುಧಾ ಗ್ರಂಥದ ಅನುವಾದ ಮಾಡಿಸಿದ್ದನ್ನು ಕಂಡ ಆಚಾರ್ಯರಿಗೆ ತಮ್ಮ ತಪ್ಪಿನ ಅರಿವಾಗಿ, ದಾಸರಲ್ಲಿ ಶರಣಾದರು. ಅವರಿಗೆ "ವ್ಯಾಸವಿಠಲ" ಅಂಕಿತವಿತ್ತು ಉದ್ಧರಿಸಿದರು. ಅವರು ವಿಜಯದಾಸರನ್ನು ಸ್ತುತಿಸುವ "ಸ್ಮರಿಸಿ ಬದುಕಿರೋ ದಿವ್ಯಚರಣ ಕೆರಗಿ ರೋ..." ಎಂಬ ನಕ್ಷತ್ರ ಮಾಲಿಕಾ ಸ್ತೋತ್ರವನ್ನು ರಚಿಸಿ ಕೃತ ಕೃತ್ಯರಾದರು.

ದಾಸರು ಪ್ರತಿವರ್ಷ ಬ್ರಹ್ಮೋತ್ಸವಕ್ಕೆ ತಪ್ಪದೆ ಬರುತ್ತಿದ್ದುದ್ದು ವಾಡಿಕೆಯಾಗಿತ್ತು, ಬ್ರಹ್ಮೋತ್ಸವದ ಕಾಲದಲ್ಲಿ ದೇವಸ್ಥಾನದ ಪ್ರಾಕಾರದಲ್ಲಿ ವಿಮಾನ ಶ್ರೀನಿವಾಸನ ಎದುರಿಗೆ ಕುಳಿತು ಧ್ಯಾನ ಪರವಶರಾಗುತ್ತಿದ್ದರು. ಆಗ ಉತ್ಸವಕ್ಕೆ ಹೊತ್ತಾಗುತ್ತದೆ ಎಂದು ಸ್ವತಃ ಶ್ರೀನಿವಾಸನೇ ದರ್ಶನವಿತ್ತು, ಉತ್ಸವಕ್ಕೆ ಕರೆತಂದಿದ್ದು ಮಹಾವಿಶೇಷ. ಮತ್ತೊಮ್ಮೆ ಬ್ರಹ್ಮೋತ್ಸವದಲ್ಲಿ ವಿಪರೀತ ಜನಜಂಗುಳಿಯಿಂದ ಮೂಲಮೂರ್ತಿಯ ದರುಷನ ಆಗಲೇ ಇಲ್ಲ. ಪುರಂದರದಾಸರ ಮಂಟಪದಲ್ಲಿಯೇ ಕುಳಿತಿರ ಬೇಕಾಯಿತು. (ಸ್ವಾಮಿ ಪುಷ್ಕರಣಿಯಲ್ಲಿ , ವರಾಹ ದೇವರ ಎದುರಿನ ಮೂಲೆಯ ಬಳಿ) ಉತ್ಸವ ಹೊರಡುವ ಸಮಯವಾಯಿತು. ಭಗವಂತನ, ಭಕ್ತರ ಪ್ರಣಯ ಕಲಹ ತುಂಬಾ ಸ್ವಾರಸ್ಯ, ದಾಸರು ಭಗವಂತನ ಮೇಲೆ ನಸುಗೋಪಗೊಂಡು ಒಂದು ಚೀಟಿಯಲ್ಲಿ ಶ್ಲೋಕವನ್ನು ಬರೆದು, ರಥದ ಬಳಿ ಶಿಷ್ಯರಿಂದ ಹಾರಿಸಿ ನಿನ್ನ ದರುಶನಕ್ಕೆ ಬಂದವನಲ್ಲವೋ ! ಮಹಾಪುಣ್ಯ ವಂತರ ದಿವ್ಯ ಚರಣ ನೋಡಲಿ ಬಂದೆನೋ - ॥ ಎಂಬ ನಿಂದಾಸ್ತುತಿಯಿಂದ ಕೊಂಡಾ ಡಿದರು. ಆಗ ರಥವು ಚಲಿಸದೇ ನಿಂತು ಬಿಟ್ಟಿತು. ಎಲ್ಲರೂ ನಿಸ್ಸಹಾಯಕರಾದರು ಭಗವಂತನು ಒಬ್ಬ ಬಾಲಕನ ಬಾಯಲ್ಲಿ "ನನ್ನ ದಾಸನನ್ನು ಬಿಟ್ಟರೆ ನಾನು ಬರುವೆನೆ" ಎಂದು ಹೇಳಿಸಿದನು. ಮಹಂತರು ಮತ್ತು ಅರ್ಚಕರಿಗೆ ತಮ್ಮ ತಪ್ಪಿನ ಅರಿವಾಗಿ, ವಿಜಯದಾಸರನ್ನು ಗೌರವಾದರಗಳೊಂದಿಗೆ ರಥದ ಬಳಿ ಕರೆತಂದರು.

ಆಗ ದಾಸರು ಭಗವಂತನ ಲೀಲೆಯನ್ನು ಸ್ಮರಿಸುತ್ತಾ ರಥಾರೂಢನಾಗಿದ್ದ ಸ್ವಾಮಿಗೆ ನಮಸ್ಕರಿಸಿ,"ಸಾಗಿ ಬಾರಯ್ಯ ಭವ ರೋಗದ ವೈದ್ಯನೆ..." ಎಂದು ಭಕ್ತಿಯಿಂದ ಸ್ತುತಿಸಿದಾಗ ರಥವು ಅನಾಯಾಸವಾಗಿ ಚಲಿಸಿ ಸ್ವಸ್ಥಾನಕ್ಕೆ ಸೇರಿತು, ಭಗವಂತನು, ಭೃಗು ಋಷಿಗಳ ಮೇಲೆ ಮಾಡಿದ ಅನುಗ್ರಹ ಅಪರಮಿತ.

ಗೋಪಾಲದಾಸರು ತಮ್ಮ ಗುರುಗಳಾದ ವಿಜಯದಾಸರ ಮೇಲೆ ವಿಶೇಷವಾದ ಭಕ್ತಿ ಮಾಡುತ್ತಿದ್ದರು.ಹಾಗಾಗಿ "ಭಕ್ತಿಯಲ್ಲಿ ಭಾಗಣ್ಣ" ಎಂದೇ ಹೆಸರಾಗಿದ್ದರು. ಅವರು ತಮ್ಮ ಗುರುಗಳನ್ನು ಸ್ತುತಿಸುವ "ವಿಜಯರಾಯರ ಕರುಣಾಕವಚ ಸ್ತೋತ್ರ (ಮೋದಕ ಸ್ತುತಿ) ದಲ್ಲಿ, ಚೀಕಲಪರವಿಯಲ್ಲಿ ಭಕ್ತಾದಿಗಳಿಗೆ, ತುಂಗಭದ್ರಾ ನದಿಯಲ್ಲಿ, ಗಂಗಾಸ್ನಾನ ಮಾಡಿಸಿದ್ದು,ಪಾಂಡುರಂಗನ ದರ್ಶನ ಮಾಡಿಸಿದ್ದು ಇಂದಿಗೂ ಚಿರಸ್ಮರಣೀಯವಾಗಿದೆ ಎಂದು ಕೊಂಡಾಡಿದ್ದಾರೆ.

ಮೋಹನದಾಸರು, ಒಂದು ಕೃತಿಯಲ್ಲಿ

'ವಿ' ಎಂದು ನುಡಿಯಲು ವಿಷ್ಣು ದಾಸನಾಗುವನು !

'ಜ' ಯೆನಲು ಜನನ ಹಾನಿ ।

'ಯ' ಯೆಂದು ಕೊಂಡಾಡೆ ಯಮಭಟರು ಓಡುವರು ।

'ರಾ' ಯೆನಲು ರಾಜ್ಯ ಪದ ಪ್ರಾಪ್ತಿ ।

'ಯ' ಯೆನಲು ಹರಿಕಾವ ವರವೀವ, ಎಂದು ವರ್ಣಿಸಿದ್ದಾರೆ.

ವಿಜಯದಾಸರು ಕಾರ್ತೀಕ ಶುದ್ಧ ದಶಮಿ, ಗುರುವಾರ (13-11-1755) ಪ್ರಾತಃಕಾಲದ ಪೂಜೆ ಪೂರೈಸಿ, ವಿಜಯವಿಠಲ ವಿಗ್ರಹವನ್ನು ಗೋಪಾಲದಾಸರಿಗೆ ನೀಡಿ, ಇನ್ನು ಮುಂದೆ ವಿಜಯವಿಠಲನು ನಿನ್ನ ವಂಶದವರಿಂದ ಪೂಜೆಗೊಳ್ಳುತ್ತಾನೆ ಎಂದು ಹೇಳಿ ನನ್ನ ನಿರ್ಯಾಣದ ನಂತರ ಅಗ್ನಿ ಸಂಸ್ಕಾರವನ್ನು ಕಲ್ಲೂರು ಸುಬ್ಬಣ್ಣದಾಸರು ಮಾಡಲಿ, ಉಳಿದ ಕಾರ್ಯಗಳನ್ನು ಮೋಹನನು ಮಾಡಲಿ ಎಂದು ಹೇಳಿ ಭಗವಧ್ಯಾನ ಮಾಡುತ್ತಾ ಬ್ರಹ್ಮರಂಧ್ರದ ಮೂಲಕ ಈ ಪಾರ್ಥಿವ ಶರೀರವನ್ನು ಬಿಟ್ಟು ದಿವ್ಯ ವಿಮಾನಾರೂಢರಾಗಿ ಹರಿಪುರಕ್ಕೆ ತೆರಳಿದರು.

ದಾಸರ ದೇಹ ಸಂಸ್ಕಾರವಾದ ಸ್ಥಳವನ್ನು ಶುದ್ಧಿ ಮಾಡಿ ಆ ಪವಿತ್ರ ಮೃತ್ತಿಕೆಯಲ್ಲಿ ದಾಸರ ಸನ್ನಿಧಾನವಿದೆಯೆಂಬ ಭಕ್ತಿ ಭಾವದಿಂದ ಸ್ವತಃ ಗೋಪಾಲದಾಸರೇ ಹಿತ್ತಾ



# ತಿರುಚಾನೂರು ಪದ್ಮಾವತಿ ಅಮ್ಮನವರ ತೆಪ್ಪೋತ್ಸವ

ಜ್ಯೇಷ್ಠಮಾಸದಲ್ಲಿ ಏಕಾದಶಿಯಿಂದ ಹುಣ್ಣಿಮೆಯವರೆಗೆ ಐದು ದಿನಗಳವರೆಗೆ ಜರುಗುವ ತೆಪ್ಪೋತ್ಸವಗಳಲ್ಲಿ ಪ್ರತಿನಿತ್ಯ ಸಂಜೆಯ ಸಮಯದಲ್ಲಿ ರುಕ್ಮಿಣಿ, ಸತ್ಯಭಾಮಾ ಸಮೇತ ಶ್ರೀ ಕೃಷ್ಣನು ಪದ್ಮಸರೋವರದಲ್ಲಿ ತೆಪ್ಪದ ಮೇಲೆ ವಿಹರಿಸುವುದಕ್ಕಾಗಿ ತನ್ನ ದೇವಾಲಯದಿಂದ ಛತ್ರ-ಚಾಮರ, ಬಾಜಾ-ಭಜಂತ್ರಿ ವಾದ್ಯಗಳಿಂದ ಶ್ರೀ ಪೀಠ (ತಿರುಚ್ಚಿ)ದ ಮೇಲೆ ಹೊರಟು ಆಲಯದ ಸುತ್ತೂ ಪ್ರದಕ್ಷಿಣಾಕಾರದಲ್ಲಿ ತಿರುಗುತ್ತಾ ಮೆರವಣಿಗೆಗೈದು ಕೊನೆಗೆ ಸರೋವರ ತಲುಪಿ ತೆಪ್ಪವನ್ನೇರುತ್ತಾನೆ. ಬೀಸಿ ಬರುವ ತಂಗಾಳಿಯಲ್ಲಿ ವಿದ್ಯುದ್ದೀಪಗಳ ಕಾಂತಿಯಲ್ಲಿ ವೇದಘೋಷಗಳ ಮಧ್ಯೆ, ಮಂಗಳವಾದ್ಯಗಳು ಮೊಳಗುತ್ತಿರಲು ಅನ್ನಮಯ್ಯ ಕೀರ್ತನೆಗಳನ್ನಾಲಿಸುತ್ತಾ ಪಟ್ಟದರಸಿಯರೊಂದಿಗೆ ಶ್ರೀಕೃಷ್ಣಸ್ವಾಮಿ ಶೋಭಾಯಮಾನವಾಗಿ ಅಲಂಕರಿಸಿದ ತೆಪ್ಪದಲ್ಲಿ ಮೂರು ಬಾರಿ ಪ್ರದಕ್ಷಿಣೆ ಹಾಕಿ ವಿಹರಿಸುತ್ತಾರೆ. ಸರೋವರದ ಗೋಡೆಯ ನಾಲ್ಕು ಕಡೆಗಳಿಂದಲೂ ಸಾವಿರಾರು ಜನರು ಶ್ರೀ ಕೃಷ್ಣನನ್ನು ದರ್ಶಿಸುತ್ತಾರೆ. ತದನಂತರ ತಿರುಚ್ಚಿಯ ಮೇಲೇರಿ ಸ್ವಾಮಿಯು ತನ್ನ ಆಲಯವನ್ನು ಸೇರಿ ಕೊಳ್ಳುತ್ತಾನೆ.

ಳೆಯ ವೃಂದಾವನದ ಮೇಲೆ "ವಿಜಯರಾಯ" ಎಂದು ಬರೆಸಿ ಅದರಲ್ಲಿ ಮೃತ್ತಿಕೆಯನ್ನು ಹಾಕಿ,ತಾವು ಪ್ರತಿನಿತ್ಯ ಭಕ್ತಿ ಭಾವದಿಂದ ಪೂಜೆಗೈದು, ಕೈ ಬದಲಾಗಿ, ಪ್ರಸ್ತುತ ಬೆಂಗಳೂರಿನ ವಿಜಯ ಮಂದಿರದಲ್ಲಿ ಪೂಜೆಗೊಳ್ಳುತ್ತದೆ.

ದಾಸರ ನಿರ್ಯಾಣದ ನಂತರ ಮೋಹನ ದಾಸರ ಪತ್ನಿಗೆ ತಿರುಪತಿಯಾತ್ರೆ ಮಾಡಬೇಕೆಂಬ ಹಂಬಲವನ್ನು ವಿಜಯದಾಸರು, ಮೋಹನದಾಸರು ಮತ್ತು ಅವರ ಪತ್ನಿಯನ್ನು,ಸ್ವಪ್ನದಲ್ಲಿ ತಿರುಪತಿಗೆ ಹೋದಂತೆ ತೋರಿಸಿ, ನಿಜರೂಪದಿಂದ ಸ್ವಾಮಿ ಪುಷ್ಕರಣಿಯ ಬಳಿ ತಂದು ನಿಲ್ಲಿಸಿದ್ದು ಒಂದು ಪವಾಡವೇ ಸರಿ.

ಚಿಂತರವೇಲಿ ಪ್ರಾಣದೇವರ ಅನುಗ್ರಹಕ್ಕೆ ಪಾತ್ರರಾದ ಮೊದಲ ಕಲ್ಲು ಶೇಷಪ್ಪನವರು ಮುಖ್ಯಪ್ರಾಣನ ಆಜ್ಞಾನುಸಾರ ಚಿಪ್ಪಗಿರಿಗೆ ಬಂದು ವಿಜಯದಾಸರ ಸೇವೆ ಮಾಡಿ, ಅವರ ಅನುಗ್ರಹಕ್ಕೆ ಪಾತ್ರರಾದಾಗ ಸ್ವತಃ,ವಿಜಯದಾಸರು ಪ್ರತ್ಯಕ್ಷರಾಗಿ ಅವರಿಗೆ "ಗುರು ವಿಜಯ ವಿಠಲ"ಎಂಬ ಅಂಕಿತವಿತ್ತರು. ಅಂದಿನಿಂದ ಅವರು ಮೊದಲಕಲ್ಲು ಶೇಷದಾಸರೆಂದು ಪ್ರಸಿದ್ಧರಾಗಿದ್ದ. ಇವರು ಇಂದ್ರಾಂಶ ಸಂಭೂತರು.

ಇಂತಹ ವಿಜಯದಾಸರ ಅನುಗ್ರಹಕ್ಕೆ ಪಾತ್ರರಾದ ಚಿಕ್ಕೇರಹಳ್ಳಿ ತಿಮ್ಮಣ್ಣದಾಸರಿಗೆ ಮೋಹನದಾಸರ ಮುಖಾಂತರ "ಮಧ್ವಪತಿ ವಿಠಲ" ಅಂಕಿತ ಪ್ರಧಾನ ಮಾಡಿಸಿ ಉದ್ಧರಿಸಿದ. ಮಹಾನುಭಾವರು,ಇಂದು ಅವರ ಸಂತತಿಯವರು ವಿಜಯದಾಸರು ಮತ್ತು ಮೋಹನದಾಸರನ್ನು ಭಕ್ತಿ ಭಾವದಿಂದ ಪೂಜಿಸುತ್ತಿರುವುದು ಪ್ರಸ್ತುತ.

ಶ್ರೀ ಕೃಷ್ಣಾರ್ಪಣ ಮಸ್ತು.



# ಶ್ರೀ ಯಾಜ್ಞವಲ್ಕ್ಯರು ಮತ್ತು ಶುಕ್ಲ ಯಜುರ್ವೇದ



- ಬಿ. ಆರ್. ಶ್ರೀಕಂಠಯ್ಯ
9449457684

ಅಸತೋಮಾ ಸದ್ಗಮಯ ।
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂ ಗಮಯ ॥

ಶ್ರೀಯಾಜ್ಞವಲ್ಕ್ಯರಿಂದ ಜಗತ್ತಿಗೇ ಒಂದು ದೊಡ್ಡ ಕೊಡುಗೆ "ಶುಕ್ಲಯಜುರ್ವೇದ ". ಇಂತಹ ಮಹಾನ್ ವ್ಯಕ್ತಿಯ ಜಯಂತಿಯನ್ನು ಕಾರ್ತೀಕ ಶುದ್ಧ ಸಪ್ತಮಿಯಂದು (೨೧.೧೧.೨೦೨೦) ಆಚರಿಸಲಾಗುತ್ತದೆ. ಇವರ ಪೂರ್ವದ ಹೆಸರು "ಬ್ರಹ್ಮರಾತಿ", ಹಾಗೂ, ಸುನಂದೆಯ ಸುಪುತ್ರ ರಾದದ್ದರಿಂದ "ಸೌನಂದಿ" ಎಂದೂ ಕರೆಯುತ್ತಿದ್ದರು. ಇವರು ಬ್ರಹ್ಮರಾತ ಮತ್ತು ಸುನಂದೆ ದಂಪತಿಗಳ, "ವಿಷ್ಣು" ಭಕ್ತರು, ಇವರು ಪುತ್ರ ಪ್ರಾಪ್ತಿಗಾಗಿ ಬದರೀ ಕ್ಷೇತ್ರದಲ್ಲಿ ವಿಷ್ಣುವನ್ನು ಕುರಿತು ಬಹಳಕಾಲ ತಪಸ್ಸು ಮಾಡಿದರು. ಇವರ ಶ್ರದ್ಧೆ ಮತ್ತು ಭಕ್ತಿಗೆ ಒಲಿದ ವಿಷ್ಣುವು ಇವರಿಗೆ ದರ್ಶನವಿತ್ತನು.ತಮ್ಮ ಉದ್ದೇಶವನ್ನು ತಿಳಿಸಿದಾಗ, ಮಹಾವಿಷ್ಣುವು ಸುಪ್ರೀತನಾಗಿ ತನ್ನ ಅಂಶದಿಂದಲೇ ಸುಪುತ್ರ ಜನಿಸಿ "ಬ್ರಹ್ಮಜ್ಞಾನಿ" ಯಾಗಿ ಪರಿಶುದ್ಧವಾದ ಜ್ಞಾನವನ್ನು ಕಂಡುಕೊಂಡು ಅದನ್ನು ಜಗತ್ತಿಗೆ ಕೊಡುತ್ತಾನೆ, ಹಾಗೂ ಲೋಕೋದ್ಧಾರಕನಾಗಿ "ಮಹಾಗುರು" ಆಗುತ್ತಾನೆ. ಎಂದು ವಿಷ್ಣುವು ದಂಪತಿಗಳನ್ನು ಅನುಗ್ರಹಿಸಿದನು. ಅನುಗ್ರಹದಂತೆ, ಕಾರ್ತಿಕ ಶುದ್ಧ ಸಪ್ತಮಿ ಸೂರ್ಯನ ದಿನವಾದ ಭಾನುವಾರ ಮಗುವಿನ ಜನನವಾಗುತ್ತದೆ. ಮುಂದೆ ಸೂರ್ಯದೇವನ ಪರಿಪೂರ್ಣ ಅನುಗ್ರಹವಾಗುವುದು. ಐದು ವರ್ಷದ ಮಗುವಿದ್ದಾಗ, ದೇವಗುರು ಬೃಹಸ್ಪತಿಗಳ ಮಾರ್ಗದರ್ಶನದಲ್ಲಿ ಅಕ್ಷರಾಭ್ಯಾಸ, ಉಪನಯನ ಎಲ್ಲವೂ ಸರಾಗವಾಗಿ ನಡೆಯುತ್ತದೆ.

ಅವತಾರ ಪುರುಷರಾದ ಶ್ರೀ ವೇದವ್ಯಾಸರು ಅಖಂಡರಾಶಿಯಾದ ವೇದಗಳನ್ನು "ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ" ವಿಂಗಡಿಸಿದರು. ಇದರಿಂದಲೇ ವೇದವ್ಯಾಸರೆಂಬ ಹೆಸರು ಬಂದಿದೆ.ಇದು ಎಲ್ಲರಿಗೂ ತಿಳಿದ ವಿಷಯ ಒಂದೊಂದು ವೇದಕ್ಕೂ ಅದರದೇ ಆದ ಪ್ರಾಮುಖ್ಯತೆಯಿದೆ. ಸಂಹಿತಾ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳನ್ನು ಒಳಗೊಂಡಿದೆ. ಈ ವೇದಪರಂಪರೆ ಮುಂದುವರಿಸಲು. ವಿಶೇಷ ಅಧಿಕಾರಿಗಳನ್ನು ನೇಮಿಸಿದರು. ಋಗ್ವೇದ - ಪೈಲ ಮಹರ್ಷಿ,ಯಜುರ್ವೇದ - ವೈಶಂಪಾಯನ, ಸಾಮವೇದ - ಜೈಮಿನಿ ಮತ್ತು ಅಥರ್ವವೇದ - ಸುಮಂತು. ಇವರೇ ಈ ನಾಲ್ಕು ಅಧಿಕಾರಿಗಳು. ವೈಶಂಪಾಯನ ಮಹರ್ಷಿಗಳು "ಜನಮೇಜಯ"ನಿಗೆ ಮಹಾಭಾರತದ ಕಥೆಯನ್ನು ಒಂದೇ ಒಂದು ಶ್ಲೋಕದಲ್ಲಿ ಹೇಳಿದ ಮಹಾಪುರುಷ.

ಬ್ರಹ್ಮರಾತ, ಸುಪುತ್ರನಾದ ಯಾಜ್ಞವಲ್ಕ್ಯನನ್ನು ವಿದ್ಯಾಭ್ಯಾಸಕ್ಕಾಗಿ ಆಚಾರ್ಯ ಶ್ರೇಷ್ಠರಾದ ವೈಶಂಪಾಯನರ ಹತ್ತಿರ ಯಜುರ್ವೇದವನ್ನು ಸಾಂಗವಾಗಿ ಕಲಿತು ಬರಲು ಕಳಿಸಿದರು. ಯಾಜ್ಞವಲ್ಕ್ಯನು, ನಾಲ್ವರು ಮಹರ್ಷಿಗಳಿಂದ ಆಯಾಯ ವೇದಗಳನ್ನು ಕಲಿಯುತ್ತಾನೆ. ಅದ್ಭುತವಾದ ಪ್ರತಿಭೆ, ಮತ್ತು ಮೇಧಾಶಕ್ತಿಗಳಿತ್ತು, ಒಂದು ಸಾರಿ (ಏಕಸಂಧಿಗ್ರಾಹಿ) ಕೇಳಿದರೆ ಸಾಕು, ಅದು ಯಾಜ್ಞವಲ್ಕ್ಯರ ಮನಸ್ಸಿನಲ್ಲಿ ಬೇರೂರಿಬಿಡುತ್ತಿತ್ತು. ಈ ಎಲ್ಲಾ ಗುಣಗಳಿಂದ, ಯಾಜ್ಞವಲ್ಕ್ಯರು ಗುರುಗಳ ಕೃಪೆಗೆ ಪಾತ್ರರಾಗುತ್ತಾರೆ. ಇಂತಹ ಶಿಷ್ಯ, ದೇಶದ ರಾಜನಿಗೆ ಒದಗಿದ್ದ ಮಹಾಪೀಡೆಯನ್ನು ಮಂತ್ರ ಹೋಮಗಳಿಂದ ನಿವಾರಣೆ ಮಾಡಿದ್ದರಿಂದ, ರಾಜ ಮನ್ನಣೆ ಹಾಗೂ ಕೀರ್ತಿ ದೊರೆಯುತ್ತದೆ.ಶಿಷ್ಯನಿಂದ ಗುರುಗಳಾದ ವೈಶಂಪಾಯನರಿಗೂ ಕೀರ್ತಿಲಭ್ಯವಾಯಿತು ಮೇರು ಪರ್ವತದಲ್ಲಿ ಮಹರ್ಷಿಗಳ ಮಹಾಸಭೆಯನ್ನು ಏರ್ಪಡಿಸಿದ್ದರು. ಎಲ್ಲಾ ಋಷಿಗಳು ಆಗಮಿಸಬೇಕೆಂದು ಕಟ್ಟು

ಪಾಡು ಮಾಡಿದ್ದರು. ಕಾರ ಣಾಂತರಗಳಿಂದ ವೈಶಂಪಾಯನರು ಹೋಗಲಾಗಲಿಲ್ಲ.

ವೈಶಾಂಪಾಯನರು ತಮ್ಮ ಪಾದಕ್ಕೆ ತಗುಲಿಕೊಂಡ ಬಾಲಕನಿಗೆ ಅರಿಯದೆ ಹೊಡೆದು ಗಾಯ ಮಾಡಿದ್ದರು. ಇದರಿಂದ ಇದು "ಬ್ರಹ್ಮಹತ್ಯೆ" ಗೆ ಸಮನಾದ ದೋಷವೆಂದು ಭಾವಿಸಿ, ಶಿಷ್ಯರಿಗೆಲ್ಲಾ ಹೇಳಿದರು. ಈ ದೋಷ ನಿವಾರಣೆಗೆ ಒಂದು ವ್ರತವನ್ನು ಆಚರಿಸಬೇಕು ಎಂದು ಆಜ್ಞೆ ಮಾಡಿದರು. ಈ ಮಧ್ಯೆ ಯಾಜ್ಞವಲ್ಕ್ಯರು ಗುರುಗಳೇ ಈ ಅಲ್ಪ ಸಾಮರ್ಥ್ಯವುಳ್ಳ ಶಿಷ್ಯರಿಗೆ ವ್ರತಾಚಾರಣೆ ಏಕೆ ಕೊಡುತ್ತೀರಿ? ನಾನು ಒಬ್ಬನೇ ಯೋಗಬಲದಿಂದ ನಿಮ್ಮ ಶಾಪ ನಿವಾರಿಸಬಲ್ಲೆ. ಇದು ಹೆಮ್ಮೆಯ ಮಾತಲ್ಲ, ಇವರಲ್ಲಿ ಆ ಶಕ್ತಿ ಇತ್ತು. ವೈಶಂಪಾಯನರಿಗೆ, ಶಿಷ್ಯನ ಮಾತು ಕೇಳಿ ವಿಪರೀತವಾದ ಕೋಪ ಬಂದಿತು. ಇದನ್ನು ಗಮನಿಸಿದ ಯಾಜ್ಞವಲ್ಕ್ಯರು, ಇದು ಅಹಂಕಾರದಿಂದ ಪ್ರೇರಿತನಾಗಿ ಹೇಳಿಲ್ಲ, ತಮ್ಮ ಅನುಗ್ರಹದಿಂದ ಶಕ್ತಿಯ ಸದುಪಯೋಗ ಎಂದು ಹೇಳಿದಾಗ ಗುರುಗಳಿಗೆ ಇನ್ನೂ ಕೋಪ ಜಾಸ್ತಿ ಯಾಯಿತು. ಮೈಮರೆತು ಇಷ್ಟುಮಂದಿ ಶಿಷ್ಯ ಸಮೂಹವನ್ನು ಅವಮಾನ ಮಾಡಿದೆ. ನಿನ್ನ ಶಿಷ್ಯತ್ವ ನನಗೆ ಬೇಕಿಲ್ಲ ಮತ್ತು ನನ್ನಿಂದ ಕಲಿತ ವೇದವನ್ನು ಇಲ್ಲೇ ವಿಸರ್ಜನೆ ಮಾಡಿ ಹೊರಟು ಹೋಗು ಎಂದು ಹೇಳಿದರು. ವಿಷಘಳಿಗೆ!, ಇದು ದೈವ ಸಂಕಲ್ಪವೆಂದು ಭಾವಿಸಿ ಒಪ್ಪಿಕೊಂಡರು. ಒಡನೆಯೇ, ಯಜುರ್ವೇದ ಜ್ಞಾನವೆಲ್ಲವೂ ತೇಜೋರೂಪದಿಂದ ಹೊರ ಬಂದಿತು. ಈ ಹೊರಬಂದ ಜ್ಞಾನ ಜ್ಯೋತಿಯನ್ನು, ಅಲ್ಲಿದ್ದ ಕೆಲವು ಋಷಿಗಳು, ಪಕ್ಷಿಗಳ ರೂಪದಲ್ಲಿ ಸ್ವೀಕರಿಸಿಕೊಂಡರು. ಈ ಯಜುರ್ವೇದ ಶಾಖೆಗೆ "ತೈತ್ತೀರಿಯ"ಎಂದು ಹೆಸರಾಯಿತು. ಯಾಜ್ಞವಲ್ಕ್ಯರು, ಆಚಾರ್ಯರೇ !! ನಿಮ್ಮಿಂದ ಕಲಿತ ವೇದವನ್ನು ನಿಮಗೆ ಹಿಂದಕ್ಕೆ ಒಪ್ಪಿಸಿಯಾಯಿತು, ಆದರೆ, ಇಲ್ಲಿಯವರೆಗೂ ಯಾರ ಗಮನಕ್ಕೂ ಬರದಿರುವ ಹಸನಾದ ಯಜುರ್ವೇದ ಭಾಗವನ್ನು ತಿಳಿದು ಹಿಂದಿರುಗುತ್ತೇನೆ ಎಂದು ಹೇಳಿ ನಿರ್ಗಮಿಸುತ್ತಾರೆ. ಗುರುಗಳ ಶಾಪವೇ, ಯಾಜ್ಞವಲ್ಕ್ಯರಿಗೆ ವರವಾಗುತ್ತದೆ.

ಯಾಜ್ಞವಲ್ಕ್ಯರು ಏಕಾಂತವಾಗಿ ಪುಣ್ಯನದಿ ತೀರದಲ್ಲಿ, ಪ್ರಾಣಾಯಾಮದಲ್ಲಿ ಮನಸ್ಸನ್ನು ಸ್ಥಿರಪಡಿಸಿಕೊಂಡು "ಸೂರ್ಯನಾರಾಯಣ"ನನ್ನು ಸಾಕ್ಷಾತ್ಕಾರ ಮಾಡಿಕೊಂಡರು. ಸೂರ್ಯದೇವನಲ್ಲಿ ಅರಿಕೆ ಮಾಡಿಕೊಂಡರು, ಯಾರಿಗೂ ತಿಳಿಯದಿರುವ ರಹಸ್ಯವೇದಗಳನ್ನು ತಿಳಿದಿರುವ ನಿನಗೆ "ನಮಸ್ಕಾರ". ಕೆಲವು ಕಾರಣಗಳಿಂದ, ನಾನು ಯಜುರ್ವೇದ ಜ್ಞಾನವನ್ನು ಕಳೆದುಕೊಂಡಿದ್ದೇನೆ. ಸರ್ವಜ್ಞನಾದ ನೀನು, ನನ್ನ ಗುರುಗಳಿಗೂ ತಿಳಿಯದೇ ಇರುವ ಹೊಸದಾದ ಯಜುರ್ವೇದ ಭಾಗವನ್ನು ನನಗೆ ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ. ಜ್ಞಾನನಿಧಿ ಮತ್ತು ದಯಾನಿಧಿಯಾದ ಸೂರ್ಯನು,ವೇದ ಮಾತೆಯಾದ ಸರಸ್ವತಿಯನ್ನು ಪ್ರಾರ್ಥಿಸಿ ಯಾಜ್ಞವಲ್ಕ್ಯರಲ್ಲಿ ಪ್ರವೇಶ ಮಾಡುವಂತೆ ಕೇಳಿಕೊಳ್ಳುತ್ತಾರೆ. ಇವರ ಪ್ರಾರ್ಥನೆಯನ್ನು ಮನ್ನಿಸಿ, ದೇವೀ ಸರಸ್ವತಿಯು ಅವರಲ್ಲಿ ಪ್ರವೇಶಿಸಿದ ನಂತರ, ತಾಪ ಶುರುವಾಗಿ, ಮೈಯೆಲ್ಲಾ ರೋಮಾಂಚಿತವಾಯಿತು. ಇದನ್ನು ತಡೆಯಲಾರದೆ, ಸೂರ್ಯನೆ! ನನ್ನನ್ನು ಕಾಪಾಡು ಎಂದು ಪ್ರಾರ್ಥಿಸುತ್ತಾರೆ. ಸೂರ್ಯದೇವನು ಪ್ರಸನ್ನನಾಗಿ, ತಾಪನೀಗಿಸಿ ಇವರ ಪ್ರಾರ್ಥನೆಯಂತೆ, ಸೂರ್ಯದೇವನು ಹೊಸದಾದ "ಯಜುರ್ವೇದ"ವನ್ನು ಬೋಧಿಸಿದನು. ಇಲ್ಲಿ ಸೂರ್ಯನ ಮೊದಲನೆಯ ಶಿಷ್ಯ " ಆಂಜನೇಯ", ಎರಡನೆಯ ಶಿಷ್ಯ ವೈಶಂಪಾಯನರು, ಆದ್ದರಿಂದ , ಯಜುರ್ವೇದದಲ್ಲಿ ೧) ವಾಜಸೇಸನೇಯ ಮತ್ತು ೨) ಆಯಾತಯಾಮ ಇವೇ ಮುಂತಾದ ಶಾಖೆಗಳಿವೆ.

ಭಾಸ್ಕರನಿಂದ ಅನುಗ್ರಹಿಸಲ್ಪಟ್ಟು, ಯಾಜ್ಞವಲ್ಕ್ಯರು ಗ್ರಹಿಸಿದ ಯಜುರ್ವೇದವನ್ನು "ಶುಕ್ಲ ಯಜುರ್ವೇದ" ಎಂದು ಕರೆಯುತ್ತಾರೆ. ಶುಕ್ಲ ಎಂದರೆ "ಬಿಳಿ" ಮತ್ತು " ಶುದ್ಧ" ವಾದುದು ಎಂಬ ಅರ್ಥ ಬರುತ್ತದೆ. ಸೂರ್ಯದೇವನಿಂದ ಕಲಿತು, ಈ ವೇದವನ್ನು ಬೆಳಕಿಗೆ ತಂದ ಕೀರ್ತಿ ಭಗವಾನ್ "ಯಾಜ್ಞವಲ್ಕ್ಯ"ರಿಗೆ ಸಲ್ಲುತ್ತದೆ. ಇದರಿಂದ ಗುರುಗಳು ಶಾಪ ನೀಡಿದ್ದು "ವಿಷ" ಘಳಿಗೆಯಾದರೂ, ಇವರಿಗೆ ವರವಾಗಿ, ಹೊಸದಾದ ಮತ್ತು ಹಸನಾದ ವೇದಶಾಖೆ ದೊರಕಲು ಕಾರಣವಾಗಿ 'ಅಮೃತ' ಘಳಿಗೆಯಾಗುತ್ತದೆ. ಜನಕ ಮಹಾರಾಜನ ಆಹ್ವಾನದಂತೆ, "ಮಿಥಿಲೆ" ಗೆ ಬಂದು, ರಾಜನಿಂದ ಒಂದು ಮಹಾಯಜ್ಞವನ್ನು ಮಾಡಿಸಿದರು. ವೈಭವಪೂರ್ಣವಾದ ಯಜ್ಞ, ಈ ಯಜ್ಞಕ್ಕೆ "ವೈಶಂಪಾಯನ" ರು ಬಂದಿದ್ದರು. ಆ ಹೊತ್ತಿಗೆ ಗುರುಗಳಿಗೆ ಶಿಷ್ಯನಾದ ಯಾಜ್ಞವಲ್ಕ್ಯನ ಮೇಲೆ ಕೋಪ ಹೋಗಿತ್ತು. ಮಹಾರಾಜನು ಯಜ್ಞದಲ್ಲಿ ನೀಡಿದ ಹೇರಳವಾದ ದಕ್ಷಿಣೆಯ ಅರ್ಧ ಭಾಗವನ್ನು ಗುರುಗಳಿಗೆ ಒಪ್ಪಿಸಿಬಿಟ್ಟನು. ಈ ಸುಂದರ

ಸಮಾಗಮ ಮತ್ತು ಮರು ಕಳಿಸಿದ ಸ್ನೇಹ ಸಂಬಂಧವು ಎಲ್ಲರನ್ನೂ ಆನಂದಗೊಳಿಸಿತು.

ಮಾತಾ ಪಿತೃಗಳ ಆದೇಶದಂತೆ, ಸಹ ಧರ್ಮಿಣಿಯ ಅಗತ್ಯವನ್ನು ನೋಡಿ, ಪ್ರಾಪಂಚಿಕ ಸುಖ ಭೋಗಗಳಲ್ಲಿ ಆಸಕ್ತಿಯಿಲ್ಲದಿದ್ದರೂ, ಪಿತೃಋಣವನ್ನು ತೀರಿಸಲು ಆಶ್ರಮದ ಗುರುಗಳಾದ "ಕಾತ್ಯಾಯನ"ಋಷಿಯ ಮಗಳಾದ ಸದ್ಗುಣಿ ಸಂಪನ್ನೆಯಾದ "ಕಾತ್ಯಾಯನಿ"ಯನ್ನು ವಿವಾಹವಾಗಲು ಒಪ್ಪುತ್ತಾರೆ. ವಿವಾಹವು ಕಾತ್ಯಾಯನರ ಆಶ್ರಮದಲ್ಲಿಯೇ ನಡೆಯಿತು. ಯಾಜ್ಞವಲ್ಕ್ಯರ ಮಹಿಮೆ ಮತ್ತು ಪಾಂಡಿತ್ಯ, ಮಿಥಿಲೆಯ ದೊರೆ ರಾಜರ್ಷಿ ಜನಕನನ್ನು ಆಕರ್ಷಿಸಿತು.ರಾಜರ್ಷಿಯು ಕೂಡ ಶ್ರೇಷ್ಠ ಗುರುವಿನ ಹುಡುಕಾಟದಲ್ಲಿದ್ದ. ಈಗ ಯಾಜ್ಞವಲ್ಕ್ಯ ರನ್ನು ಆಶ್ರಯಿಸಿ ಅವರ ಆಶ್ರಮಕ್ಕೆ ಬಂದ ರಾಜ,ತಮ್ಮ ಅನಿಸಿಕೆಯಾದ ಜ್ಞಾನ ಭಿಕ್ಷೆಯ ಬಗ್ಗೆ ಹೇಳಿ ತನ್ನ ಜ್ಞಾನ ದಾಹ ವನ್ನು ತಣಿಸಬಲ್ಲ ಗುರು ನೀವೊಬ್ಬರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದಾಗ, ಯಾಜ್ಞವಲ್ಕ್ಯರು ಒಪ್ಪಲಿಲ್ಲ. ತಾವು ಬ್ರಹ್ಮನಿಷ್ಠೆ ಜ್ಞಾನಿಯೇ ಹೌದೆಂದಾದರೆ ಈ ಪುಣ್ಯ ಭೂಮಿಯಲ್ಲಿ ಅಂತಹವರು ಇನ್ನೂ ಇರಬಹುದು, ಅವರೆಲ್ಲರಿಗಿಂತ ತಾನು ಶ್ರೇಷ್ಠ ಹೇಗೆ ? ಎಂಬುದನ್ನು ಪ್ರಪಂಚ ಒಪ್ಪ ಬೇಡವೇ? ಇದಕ್ಕೆ ತಪಸ್ವಿಗಳು, ಪ್ರಕಾಂಡ ಪಂಡಿತರು, ಋಷಿಮುನಿಗಳು ಸಮ್ಮತಿ ಸಬೇಡವೇ?, ವಿದ್ವಾಂಸರಲ್ಲಿ ಸಂಶಯ, ಅಸಹನೆ, ಅಸೂಯೆ, ಉಂಟಾಗ ಬಾರದು, ಆದ್ದರಿಂದ ಒಂದು ವಿದ್ವತ್ಸಭೆ ನಡೆಯ ಬೇಕು. ಅಲ್ಲಿ ದೇಶ-ವಿದೇಶಗಳಿಂದ ಪಂಡಿತರು ಬಂದು ಸೇರ ಬೇಕು ಮತ್ತು ಅವರಿಗೂ ಗೌರವ ಸಿಗಬೇಕು. ಇಬ್ಬರೂ ವಿಚಾರ ವಿನಿಮಯ ಮಾಡಿದ ನಂತರ, ರಾಜ ಸಂತೋಷದಿಂದ 'ಜ್ಞಾನಸತ್ರ" ಮಾಡಲು ಒಪ್ಪಿಕೊಂಡ. ಜ್ಞಾನಸತ್ರ (ಬಹುದಕ್ಷಿಣ ಯಾಗ ) ಶುರುವಾಯಿತು. ಯಾಗ ಒಂದು ನೆಪಮಾತ್ರ ರಾಜನ ಉದ್ದೇಶ ಶ್ರೇಷ್ಠರಲ್ಲಿ ಶ್ರೇಷ್ಠ ಬ್ರಹ್ಮಜ್ಞಾನಿಯನ್ನು ಗುರುತಿಸುವುದು. ಪಣವಾಗಿ ಒಂದು ಸಾವಿರ ಗೋವುಗಳು, ಮತ್ತು ತಮ್ಮ ಕರುಗಳಿಂದ ಸಿದ್ಧವಾದ ಗೋವುಗಳ ಒಂದೊಂದು ಕೊಂಬಿಗೂ ಇಪ್ಪತ್ತು-ಇಪ್ಪತ್ತು ಚಿನ್ನದ ನಾಣ್ಯಗಳು ತಮ್ಮಲ್ಲಿ ಶ್ರೇಷ್ಠ ಬ್ರಹ್ಮಿಷ್ಠರು ಯಾರೋ, ಅವರು ಈ ಗೋಧನಕ್ಕೆ ಒಡೆಯರು ಎಂದು ರಾಜ ಘೋಷಿಸಿದ.

ಸಭೆ ಮೌನದಲ್ಲಿ ಮುಳುಗಿ ಹೋಯಿತು ಯಾರು ಅಂತಹ ಬ್ರಹ್ಮನಿಷ್ಠರು, ಯಾರಿಗುಂಟು ಈ ಗೋಧನ ಭಾಗ್ಯ ಯಾರು ಆ ಮಹಾನುಭಾವ ಎಂದು ನೋಡಲು ಕುತೂಹಲ, ಗಟ್ಟಿಯಾಗಿ ಮಾತಾಡಲು ಯಾರಿಗೂ ಧೈರ್ಯವಿಲ್ಲ, ಸೂಜಿ ಬಿದ್ದರೂ ಸಪ್ಪಳ ಕೇಳುವಂತಹ ಮೌನ. ಸಭೆಯ ಮೌನವನ್ನರಿತು, ಯಾಜ್ಞವಲ್ಕ್ಯರು ಎದ್ದು ನಿಂತು ತಮ್ಮ ಜೊತೆಯಲ್ಲಿ ಬಂದಿದ್ದ ಬ್ರಹ್ಮಚಾರಿಯನ್ನು ಕೂಗಿ, ಸಾಮಾಶ್ರವ ಗೋವುಗಳನ್ನು ಹೊಡೆದು ಕೊಂಡು ಹೋಗು, ಎಂದಾಗ ಅವನು ಹೊಡೆದುಕೊಂಡು ಹೋಗುವ ಸಂದರ್ಭವನ್ನರಿತು, ವಿದ್ವಾಂಸರಿಗೆ ಕೋಪವುಂಟಾಗಿ, ತಾನು ಬ್ರಹ್ಮಿಷ್ಠ ಎಂದು ಹೇಗೆ ಹೇಳಿಕೊಂಡ, ಇತರರಿಗೆ ಕೋಪ ಮತ್ತು ಅಸೂಯೆ, ನೀನು ಬ್ರಹ್ಮನಿಷ್ಠನೋ?ಎಂದು ರಾಜಾಶ್ರಯದಲ್ಲಿ ಬೆಳೆದಿದ್ದ ಪಂಡಿತ"ಅಶ್ವಲ" ಠೇಂಕಾರದಿಂದ ಕೇಳಿದ. ಅದಕ್ಕೆ ಯಾಜ್ಞ ವಲ್ಕ್ಯರು, ವಿನಯದಿಂದಲೇ ನುಡಿದರು. ನಾನು ಹೇಳಿದ್ದು ನಮಗೆ ಗೋವುಗಳು ಬೇಕಾಗಿವೆ ಅಷ್ಟೇ ಸ್ವಾಮಿ "ಗೋಕಾಮಾ ಏವ ವಯಂ ಅಸ್ಮ" ಅಶ್ವಲರು ಹೇಳಿದಂತೆ , ಇತರರೂ ಆರ್ತಭಾಗ, ಲಾಹ್ಯಹನಿ,ಉಷಸ್ತ, ಕಹೋಳ ಮುಂತಾದವರು ಮುಂದುವರೆಸಿದರು."ಮೃತ್ಯು" ಎಂದರೆ ಏನು? ಅದನ್ನು ಗೆಲ್ಲುವುದು ಹೇಗೆ?. ಸತ್ತ ನಂತರ ಇಂದ್ರಿಯಗಳು, ಮನಸ್ಸು ಏನಾಗುತ್ತದೆ?. ಅಶ್ವಮೇಧಯಾಗ ಮಾಡಿದವರು ಯಾವ ಲೋಕ ವನ್ನು ಸೇರುತ್ತಾರೆ.? ಅದಕ್ಕೆ ಸಮಂಜಸವಾದ ಉತ್ತರವನ್ನು ಯಾಜ್ಞವಲ್ಕ್ಯರು ಕೊಟ್ಟರು.

"ನನ್ನಲ್ಲೂ - ನಿನ್ನಲ್ಲೂ ಎಲ್ಲಾ ಜೀವಿಗಳಲ್ಲಿರುವ ಆತ್ಮವೇ ಬ್ರಹ್ಮ. ದೇಹ, ಇಂದ್ರಿಯಗಳಿಗೆ ಚೈತನ್ಯ ನೀಡುವವನೇ ಈ ಆತ್ಮ, ಅದು ಶರೀರವಲ್ಲ,ಇಂದ್ರಿಯಗಳಲ್ಲ. ಅವುಗಳಿಂದ ಬೇರೆಯಾದದ್ದು. ಎಲ್ಲವನ್ನೂ ನಿಯಂತ್ರಿಸುವುದು. ಎಲ್ಲವೂ ನಾಶವಾಗುತ್ತದೆ. ಆದರೆ, ಆತ್ಮ ನಾಶವಾಗುವುದಿಲ್ಲ ಅದು ಎಲ್ಲವನ್ನೂ ಕಾಣುತ್ತದೆ. ಅದು ನಾಶರಹಿತ (ಅವಿನಾಶಿ). ಎಲ್ಲವನ್ನೂ ವ್ಯಾಪಿಸಿದೆ. ಇದನ್ನು ಅನುಭವದಿಂದಲೇ ತಿಳಿಯಬೇಕು. ನಂತರ "ವಚಕ್ನು"ವಿನ ಮಗಳಾದ, ಮೇಧಾವಿನಿಯಾದ, ವೇದ ಪಂಡಿತೆ, ವಾದ ನಿಪುಣೆ, "ಗಾರ್ಗಿ"ಯ ಬಗೆ-ಬಗೆಯಾದ ಪ್ರಶ್ನೆಗೆ ಅತ್ಯಂತ ತಾಳ್ಮೆಯಿಂದಲೇ ಯಾಜ್ಞವಲ್ಕ್ಯರು ಉತ್ತರಿಸಿದರು. ಎಲ್ಲಾದಕ್ಕೂ ಅಧಿಕವಾದದ್ದು "ಬ್ರಹ್ಮ",ಬ್ರಹ್ಮವೆಂದರೆ ಪರಮಾತ್ಮನೇ. ವಾಯು, ಆಕಾಶ. ಗಂಧರ್ವ, ಆದಿತ್ಯ, ನಕ್ಷತ್ರ, ದೇವ, ಇಂದ್ರ ಪ್ರಜಾಪತಿ, ಈ ಎಲ್ಲಾ ಲೋಕಗಳಿಗೂ ಬ್ರಹ್ಮನೇ ಆಧಾರ.

ಮುಂದೆ ಪ್ರಶ್ನಿಸಿದ ''ಆರುಣಿ'' ಗೆ ಅಂತರಾತ್ಮವನ್ನು ವರ್ಣಿಸಿ, ಹೇಳಿದರು. ಅವನು (ಪರಬ್ರಹ್ಮ), ನೀರು, ಅಗ್ನಿ, ಎಲ್ಲದರ ಒಳಗೆ ಹೊರಗೆ ತುಂಬಿಕೊಂಡಿದ್ದಾನೆ. ಆ ಅಂತರಾತ್ಮನೇ ಎಲ್ಲರಲ್ಲೂ ಇರುವ ಪರಮಾತ್ಮ, ನಾಶರಹಿತ, ಹಸಿವು, ಬಾಯಾರಿಕೆ, ಸುಖ, ದುಃಖ, ಮುಪ್ಪು, ಮರಣ, ಎಲ್ಲದರಿಂದ ಮುಕ್ತನಾದ ಆನಂದಮಯ ಆತ್ಮನೇ, ಈ ಅಂತರ್ಯಾಮಿ. ಸಮಸ್ತವನ್ನು ಆವರಿಸಿರುವ ಪರಮಾತ್ಮನೇ ಎಲ್ಲರ ಆತ್ಮವೂ ಆಗಿದ್ದಾನೆ. ಜ್ಞಾನದಿಂದ ಮಾತ್ರ ಆತನನ್ನು ಅರಿಯಲು ಸಾಧ್ಯ. ಬರಿಯ ಪುಸ್ತಕ ಪಾಂಡಿತ್ಯವಲ್ಲ, ಅದು ಅನುಭವ ವೇದ್ಯವಾದ ಆತ್ಮಜ್ಞಾನ, ಈ ಮಧ್ಯೆ, "ಗಾರ್ಗಿ" ಯು ಈತನೇ (ಯಾಜ್ಞವಲ್ಕ್ಯರು) ಶ್ರೇಷ್ಠ ಬ್ರಹ್ಮಜ್ಞಾನಿ ಎಂದು ಘೋಷಿಸಿ ಬಿಟ್ಟಳು. ಆದರೆ, ಕೇವಲ ಅಹಂಕಾರ, ಅಸೂಯೆಗಳಿಂದ ಪಾಂಚಾಲ ದೇಶದ ಮಹಾಪಂಡಿತ "ಶಾಕಲ್ಯ"ರು ಮತ್ತೆ ಮತ್ತೆ ಪ್ರಶ್ನೆ ಮಾಡಿದರು, ಯಾಜ್ಞವಲ್ಕ್ಯರು ಅವರಿಗೂ ಸಮಾಧಾನ ದಿಂದಲೇ ಉತ್ತರಿಸಿದರು. (ಶಾಕಲ್ಯರು ಎಲ್ಲವನ್ನೂ ತಿಳಿದವ ರಾದರೂ, ಆತ್ಮವನ್ನು ತಿಳಿದವರಲ್ಲ, ಅದರಿಂದ ಶ್ರೇಷ್ಠ ಜ್ಞಾನಿಯಲ್ಲ) ಕೊನೆಗೆ ಯಾರೂ ಯಾಜ್ಞವಲ್ಕ್ಯರನ್ನು ಪ್ರಶ್ನಿಸಲಿಲ್ಲ, ಸಮಸ್ತ ಸಭೆ, ಇವರನ್ನೇ "ಬ್ರಹ್ಮಜ್ಞಾನಿ"ಯೆಂದು ಅಂಗೀಕರಿಸಿತು. ಉಪದೇಶವನ್ನು ಸಮರ್ಪಕವಾಗಿ ಮಾಡದೆ ದಾನ ತೆಗೆದುಕೊಳ್ಳಲು ಅರ್ಹತೆಯಿಲ್ಲ ಎಂದು ಹೇಳಿ "ಜನಕ" ನಿಗೆ ಉಪನಿಷತ್ತಿನ ಸಾರವನ್ನೇ ಉಪದೇಶಿಸಿದ. ರಾಜನು ಬ್ರಹ್ಮಜ್ಞಾನಿಗೆ ನಮಸ್ಕರಿಸಿ, ಈ ರಾಜ್ಯ ಮತ್ತು ನಾನು ತಮ್ಮ ಸೇವೆಗಾಗಿ ಮೀಸಲು ಎಂದು ಹೇಳಿ "ಸರ್ವಜ್ಞ" ಪದವಿಯನ್ನು ಸೂಚಿಸುವ ಕಿರೀಟವನ್ನು ಗುರುವಿಗೆ ತೊಡಿಸಿ ಸಹಸ್ರ ಅಲಂಕೃತ ಗೋವುಗಳನ್ನು ಕರುಗಳ ಸಮೇತ ದಾನವಾಗಿತ್ತು ಯಾಜ್ಞವಲ್ಕ್ಯರನ್ನು ಅವರ ಶಿಷ್ಯರೊಡನೆ ಆಶ್ರಮಕ್ಕೆ ಕಳಿಸಿಕೊಟ್ಟರು. ಇಲ್ಲಿ ಸಭೆ ನಿಮಿತ್ತಮಾತ್ರ. ಜನಕನಿಗೆ ಮಾತ್ರ ಗುರುವಾಗ ಬೇಕಾಗಿದ್ದ ಯಾಜ್ಞವಲ್ಕ್ಯರು ಸಮಸ್ತ ಲೋಕದ ಗುರುವೂ ಆದರು.

ಸಮಸ್ತ ಬಹುಮಾನಗಳಿಂದ ಸನ್ಮಾನಿತರಾದ ಪತಿಯನ್ನು ನೋಡಿ ಕಾತ್ಯಾಯನಿಗೆ ಬಹಳ ಸಂತೋಷವಾಯಿತು. ಆದರೆ, ಈ ಐಶ್ವರ್ಯ, ಆಸ್ತಿಗಳಲ್ಲಿ ಆಸಕ್ತಿ ಇರಲಿಲ್ಲ, ಸಂಸಾರದಲ್ಲಿ ಅತಿಯಾದ ಮೋಹವೂ ಇರಲಿಲ್ಲ. ಆದರೂ, ಕಾತ್ಯಾಯಿನಿಯು ಸಂಸಾರವನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದಳು. ಆ ಕಾಲದಲ್ಲಿ ಸಂಸಾರ ಸುಖಕ್ಕಿಂತ ವೇದಾಂತ ಚಿಂತನೆಯಲ್ಲಿ ಆಸಕ್ತರಾದ ಮಹಿಳೆಯರು ಬಹಳ ಮಂದಿಯಿದ್ದರು. ಅಂತಹವರಲ್ಲಿ "ಗಾರ್ಗಿ" ಯೂ ಒಬ್ಬಳು. ಈಕೆಯ ಸೋದರ ಸೊಸೆ "ಮೈತ್ರೇಯಿ" , ಜನಕನ ಮಂತ್ರಿಯಾದ "ಮಿತ್ರ' ನ ಮಗಳು. ಇವಳೂ ತಂದೆ ಯಂತೆಯೇ, ವೇದವಿದ್ಯೆ ಕಲಿತ್ತಿದ್ದಳು ಮತ್ತು ಗಾರ್ಗಿಯ ಒಡನಾಟ, ಮಾರ್ಗದರ್ಶನ ಚೆನ್ನಾಗಿತ್ತು. ಆದ್ದರಿಂದ ಅವಳಿಗೆ ಸಂಸಾರ ಜೀವನದಲ್ಲಿ ಆಸಕ್ತಿಯಿರಲಿಲ್ಲ. ಜ್ಞಾನದಾಹ ಬಹಳ ಇತ್ತು. ಜ್ಞಾನಸತ್ರದಲ್ಲಿ ಯಾಜ್ಞವಲ್ಕ್ಯರ ಪಾಂಡಿತ್ಯ, ಬ್ರಹ್ಮಜ್ಞಾನ ತೇಜಸ್ಸು, ಇತ್ಯಾದಿಗಳಿಗೆ ಪ್ರಭಾವಿತಳಾಗಿದ್ದಳು. ಅವರ ಉಪದೇಶ ದೊರತರೆ ಎಷ್ಟು ಚೆನ್ನ ಎಂದು ಮನವರಿಕೆಯಾಯಿತು. ಆದರೆ, ಅವರಲ್ಲಿ ಇದ್ದವರೆಲ್ಲ ಬ್ರಹ್ಮಜ್ಞಾನಿಗಳಾದ ತರುಣರು. ಕೆಲವರು ಅಧ್ಯಯನ ಕ್ಕಾಗಿ ಬರುತ್ತಿದ್ದವರು ಗೃಹಸ್ಥರು - ಪುರುಷರು. ಅಲ್ಲಿ ಹೋಗುವುದು ಹೇಗೆ ಎಂಬ ಚಿಂತೆ, ಮತ್ತು ಸಮಾಜದ ಭಯ, ಇವೆಲ್ಲವನ್ನೂ, ಮೈತ್ರೇಯಿಯು, ಗಾರ್ಗಿಯಲ್ಲಿ ಹೇಳಿಕೊಂಡಳು. ನಾನು ಆಧ್ಯಾತ್ಮ ಕ್ಕಾಗಿ ಯಾಜ್ಞವಲ್ಕ್ಯರನ್ನು ವಿವಾಹವಾಗಬೇಕು. ನಾನು ಸಂಪತ್ತು ಅಥವಾ ದೈಹಿಕ ಸುಖ ಬಯಸುವುದಿಲ್ಲ. ಅವೆಲ್ಲಾ ಕಾತ್ಯಾಯನಿಗೆ ಮೀಸಲು ನಾನು ಅವಳ ಪ್ರೀತಿಯ ಗೆಳತಿಯಾಗಿ ಇರುತ್ತೇನೆ, ನನ್ನ ಗುರಿ ಕೇವಲ ಬ್ರಹ್ಮವಿದ್ಯೆಯೊಂದೆ ಇತ್ಯಾದಿ. ನಂತರ ಎಲ್ಲರ ಒಪ್ಪಿಗೆಯಂತೆ, ಯಾಜ್ಞವಲ್ಕ್ಯರು ಮೈತ್ರೇಯಿಯನ್ನು "ಮೋಕ್ಷ" ಪತ್ನಿಯನ್ನಾಗಿ ಸ್ವೀಕರಿಸಿ ಉದಾತ್ತ ಆದರ್ಶಕ್ಕೆ ನಾಂದಿಯಾದರು. ಮೈತ್ರೇಯಿ ಆಧ್ಯಾತ್ಮ ಚಿಂತನೆಯಲ್ಲೇ ಉಪದೇಶಗಳನ್ನು ಪಡೆದು ಕಾತ್ಯಾಯಿನಿಯ ಜೊತೆಯಲ್ಲಿ ಒಳ್ಳೆಯ ಸ್ನೇಹಿತೆಯಾಗಿ ಸಂತೋಷವಾಗಿದ್ದಳು.

ಯಾಜ್ಞವಲ್ಕ್ಯರಲ್ಲಿ ಮೋಕ್ಷದ ಬಯಕೆ ತೀವ್ರವಾಯಿತು. ಸಂಸಾರ, ಎಲ್ಲಾ ಆಸೆ - ಆಕರ್ಷಣೆಗಳಿಂದ ಬಿಡುಗಡೆ ಬಯಸಿದರು. ಆದರೆ, ಇವೆಲ್ಲಾ ಸಂಸಾರದ ತೊಳಲಾಟದಲ್ಲಿ ಸಾಧ್ಯ ವಿಲ್ಲವೆಂದು, ಎಲ್ಲಾ ಋಣ ತೀರಿಸಿಯಾಗಿದೆ. ವಂಶದ ಕುಡಿಯಾದ "ಕಾತ್ಯಾಯನ" ಇದ್ದಾನೆ. ಎಲ್ಲಾ ಆಶ್ರಮಗಳನ್ನು ಪಡೆದಿದ್ದಾಗಿದೆ. (ಬ್ರಹ್ಮಚರ್ಯ, ಗೃಹಸ್ಥ ಮತ್ತು ವಾನಪ್ರಸ್ಥ)), ಸಂನ್ಯಾಸ ಸ್ವೀಕ ರಿಸಲು ಯೋಗ್ಯವಾಗಿದೆ ಎಂದು ಸಂನ್ಯಾಸವನ್ನು ಸ್ವೀಕರಿಸಿ ದರು. ಸಂನ್ಯಾಸ ಎಂದರೆ "ಸಮ್ಯಕ್ - ನ್ಯಾಸ", ಪರಿಪೂರ್ಣ

ವಾಗಿ ತನ್ನನ್ನು ಬ್ರಹ್ಮನಲ್ಲಿ (ಪರಮಾತ್ಮನಲ್ಲಿ) ಅರ್ಪಿಸಿಕೊಂಡು ಬಿಡುವುದು. ಅದೇ ಅಮೃತತ್ವ."ತ್ಯಾಗೇನೈಕೇ ಅಮೃತತ್ವ ಮಾನಶುಃ", ಎಲ್ಲದರ ತ್ಯಾಗದಿಂದ ಅಮೃತತ್ವ ಸಾಧ್ಯ. ಗೃಹಸ್ಥನು ತನ್ನ ಪತ್ನಿಯ ಸಮ್ಮತಿಯಿಲ್ಲದೆ ಯಾವುದನ್ನು ಮಾಡುವ ಹಾಗಿಲ್ಲ. ಈ ನಿರ್ಧಾರವನ್ನು ಪತ್ನಿಯರಿಗೆ ಹೇಳದೆ ಹೊರಟರೆ, ತಪ್ಪು ಎಂಬ ಭಾವನೆಯಿಂದ, ಮೊದಲನೆಯದಾಗಿ, ಮೈತ್ರೇಯಿಯಲ್ಲಿ ಪ್ರಸ್ತಾಪ, ಆಕೆಗೆ ಈ ಇರುವ ದ್ರವ್ಯವನ್ನೆಲ್ಲಾ ನೀನು ಮತ್ತು ಕಾತ್ಯಾಯಿನಿ ಹಂಚಿಕೊಳ್ಳಿ ಎಂದು ಹೇಳಿದಾಗ, ಮೈತ್ರೇಯಿಯು ಉತ್ತರಿಸುತ್ತಾಳೆ.

- ಸಮಸ್ತ ಐಶ್ವರ್ಯ ದೊರೆತರೂ, ಅದರಿಂದ ಅಮೃತತ್ವ, ಮೋಕ್ಷ ದೊರಕುತ್ತದೆಯಾ?

- ಅಮೃತತ್ವ ದೊರೆಯದ, ಈ ಐಶ್ವರ್ಯ ಭೋಗ, ಭಾಗ್ಯಗಳೇಕೆ, ಇತ್ಯಾದಿ.

ನಂತರ,ಕಾತ್ಯಾಯನಿಗೆ ಸರ್ವ ಸಂಪತ್ತನ್ನು ವಹಿಸುತ್ತಾರೆ.


ಶುಕ್ಲಯಜುರ್ವೇದದ ಮುಖ್ಯವಾದ ಉಪ ನಿಷತ್ತುಗಳು - ಈಶಾವಾಸ್ಯ, ಮತ್ತು ಬೃಹದಾರಣ್ಯಕೋಪ ನಿಷತ್,ಯಾಜ್ಞವಲ್ಕ್ಯರು ಬಹಳ ಪವಿತ್ರವಾದ "ಸೂರ್ಯ ಕವಚ" ಸ್ತೋತ್ರವನ್ನು ರಚಿಸಿದ್ದಾರೆ. ಇದು ಬಹಳ ಪವಿತ್ರ ವಾದುದು, ಇದರ ನಿತ್ಯ ಪಾರಾಯಣದಿಂದ ಬಹಳ ಉಪಯೋಗವಾಗುತ್ತದೆ.

"ಯಾಜ್ಞವಲ್ಕ್ಯ ಉವಾಚ - ಶೃಣುಷ್ವ ಮುನಿ ಶಾರ್ದೂಲ ಸೂರ್ಯಸ್ಯ ಕವಚಂ ಶುಭಂ ।

ಶರೀರಾರೋಗ್ಯದಂ ದಿವ್ಯಂ ಸರ್ವಸೌಭಾಗ್ಯದಾಯಕಂ ॥೧॥

.... ರೋಗಮುಕ್ತಃ ಚ ದೀರ್ಘಾಯುಃ ಸುಖಂ ಪುಷ್ಟಿಂ ಚ ವಿಂದತಿ ॥೭॥

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥



**ಎಡದಿಂದ ಬಲಕ್ಕೆ**

1.ಆಗಮನ

2.ಭಕ್ಷಕ

3.ಅಂತಃಕರಣ

4.ಸಫಲ

5.ಶತಪಥ

**ಬಲದಿಂದ ಎಡಕ್ಕೆ**

6.ಘನ

7.ಷರ

8.ಛಲ

9.ಊಟ

10.ಬಹಳ

**ಮೇಲಿಂದ ಕೆಳಕ್ಕೆ**

11.ಏತ

12.ಕಲರವ

13.ಇಹ

14.ಎಡ

15. ಔತಣ

16. ಈಶ

17.ಝಳ

**ಕೆಳಗಿನಿಂದ ಮೇಲಕ್ಕೆ**

18.ಉದಕ

19.ಒಗತನ

20. ಋಣ

21.ಧನ

22.ಓಟ

23.ಚಪಲ

24. ಅಪಜಯ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ಆ | ಗ | ಮ | ನ | 6 ಘ | 11 ಏ | 12 ಕ | 13 ಇ |
| 2 | 2 ಭ | ಕ್ಷ | ಕ | ತ | | ತ | ಲ | ಹ |
| 3 | | | ದ | ಗ | 14 ಎ | 15 ಔ | ರ | 16 ಈ |
| 4 | ರ | 7 ಷ | 18 ಉ | 19 ಒ | ಡ | ತ | ವ | ಶ |
| 5 | | 3 ಅಂ | ತಃ | ಕ | ರ | ಣ | ಯ | ನ |
| 6 | 4 ಸ | ಫ | ಲ | 8 ಛ | | 20 ಋ | ಜ | 21 ಧ |
| 7 | ಟ | 9 ಊ | ಪ | 17 ಝ | 5 ಶ | ತ | ಪ | ಥ |
| 8 | 5 ಓ | | 23 ಚ | ಳ | ಹ | 10 ಬ | 24 ಅ | |

# ಬಾಲಾ ತ್ರಿಪುರಸುಂದರೀದೇವಿ

- ಎಸ್. ವಾದಿರಾಜ

ಹೆಸರೇ ತಿಳಿಸುವಂತೆ ಎಂದರ್ಥ, ಈಕೆ ಲಲಿತಾದೇವಿ ಮಗಳು ಎಂದು ಪುರಾಣಗಳಲ್ಲಿ ದಲ್ಲಿ ಈಕೆಯ ಬಗೆಗೆ ಉಲ್ಲೇಖನ

ಭಂಡಾಸುರನೆಂಬ ದೈತ್ಯನು ಕೊಳ್ಳಬೇಕೆಂಬ ದುರಾಸೆಯಿಂದ ಕಳಿಸಿದನು.

ಆಗ ಜಗನ್ಮಾತೆಯಾದ ಗಳ ಮೇಲೆ ದಂಡೆತ್ತಿ, ಹೋಗದೆ, ತನ್ನ ಹೆಣ್ಣು ಮಗುವನ್ನು ಸೃಷ್ಟಿಸಿ ತನ್ನೆಲ್ಲಾ ಮೂವತ್ತು ದೈತ್ಯರನ್ನು ಸದೆಬಡಿ

ಆ ಬಾಲೆಯು ಭಂಡಾಸು ಸುನಾಯಾಸವಾಗಿ ಸದೆಬಡಿದು ಸಿದಳು.



ಬಾಲಾ ಎಂದರೆ 'ಚಿಕ್ಕ ಹುಡುಗಿ' ಹಾಗೂ ತ್ರಿಪುರಾಂತಕನಾದ ಶಿವನ ಹೇಳಲಾಗಿದೆ. ಬ್ರಹ್ಮಾಂಡಪುರಾಣ ಇದೆ.

ಲೋಕವನ್ನೆಲ್ಲಾ ತನ್ನ ವಶಕ್ಕೆ ತೆಗೆದು ತನ್ನ ಮೂವತ್ತು ಜನ ಮಕ್ಕಳನ್ನು

ಲಲಿತಾದೇವಿಯು ತಾನೇ ಅವರು ಅಂಶದಿಂದ ಒಬ್ಬ ಸುಂದರಿಯಾದ ಶಕ್ತಿಯನ್ನು ಆಕೆಯಲ್ಲಿ ಒಗ್ಗೂಡಿಸಿ ಆ ಯಲು ಕಳಿಸಿದಳು.

ರನ ಮೂವತ್ತು ಮಕ್ಕಳನ್ನು ಲೋಕಕಂಟಕರನ್ನು ಕೊನೆಗಾಣಿ

ಅದಕ್ಕೆ ಲಲಿತಾಸಹಸ್ರನಾಮದಲ್ಲಿ

'ಭಂಡಾಸುರವದೋದ್ಯುಕ್ತ ಬಾಲಾವಿಕ್ರಮನಂದಿತ' ಎಂಬ ಶ್ಲೋಕವಿದೆ.

ಈ ಬಾಲತ್ರಿಪುರಸುಂದರಿಯು ಪದ್ಮಾಸನದ ಮೇಲೆ ಮಂದಹಾಸ ಬೀರುತ್ತಾ ಚತುರ್ಭುಜಗಳನ್ನು ಹೊಂದಿದವಳಾಗಿ ಭಕ್ತರ ಅಭೀಷ್ಟಗಳನ್ನು ಸುಲಭವಾಗಿ ನೆರವೇರಿಸುವ ದಯಾಮಯಿಯಾಗಿದ್ದಾಳೆ.

ತ್ರಿಪುರ ಅಂದರೆ ಮೂರುಪುರಗಳು ಎಂದರ್ಥ. ಹಿಂದೊಮ್ಮೆ ಮೂವರು ಅಣ್ಣತಮ್ಮಂದಿರಾದ ರಾಕ್ಷಸರು, ಗಗನದ ಕಕ್ಷೆಯಲ್ಲಿ ಮೂರು ನಗರಗಳನ್ನು ಕಟ್ಟಿಕೊಂಡಿದ್ದರು ಅವುಗಳು ಬಂಗಾರ, ಬೆಳ್ಳಿ ಹಾಗೂ ಕಬ್ಬಿಣದಿಂದ ನಿರ್ಮಿತವಾಗಿದ್ದುವು. ಆ ಮೂರು ನಗರಗಳು ಆಕಾಶದ ಕಕ್ಷೆಯಲ್ಲಿ ತಿರುಗುತ್ತಿದ್ದುವು. ಯಾವ ಸಮಯದಲ್ಲಿ ಆ ಮೂರೂ ನಗರಗಳು ಒಂದೇ ಕಕ್ಷೆಯಲ್ಲಿ ಒಂದೇ ರೇಖೆಯಲ್ಲಿ ಬರುತ್ತವೋ ಆಗ ಅವರ ಸಂಹಾರವಾಗಬೇಕೆಂಬ ವರವನ್ನು ಕೇಳಿದ್ದರು ಆ ಮೂರು ನಗರಗಳು ಒಂದೇ ರೇಖೆಯಲ್ಲಿ ಬರುವ ಸಾಧ್ಯತೆ ಇಲ್ಲ ಎಂದು ಅವರುಗಳು ಆ ರೀತಿಯ ವರವನ್ನು ಬೇಡಿಕೊಂಡಿದ್ದರು. ಆದ್ದರಿಂದ ಅವರು ತಮ್ಮ ಇಷ್ಟ ಬಂದಂತೆ ಎಲ್ಲರನ್ನೂ ಹಿಂಸಿಸುತ್ತಾ ಲೋಕಕಂಟಕರಾಗಿದ್ದರು.

ದೇವತೆಗಳೆಲ್ಲಾ ಶಿವನ ಮೊರೆ ಹೋದಾಗ, ಆ ನಗರಗಳೆಲ್ಲಾ ಒಂದೇ ರೇಖೆಯಲ್ಲಿ ಬಂದಾಗ ಕೂಡಲೇ ಅವರನ್ನು ಸಂಹಾರ ಮಾಡಿ ತ್ರಿಪುರಾಂತಕ ಎಂಬ ಹೆಸರನ್ನು ಗಳಿಸಿದ. ಆತನ ಮಗಳಾದ್ದರಿಂದ ಈಗೆ ತ್ರಿಪುರಸುಂದರಿಯಾದಳು.

ಈಕೆ ಬಾಲೆಯ ರೂಪದಲ್ಲೆ ಇರುವುದರಿಂದ ಯಾವ ಭಕ್ತರು ಈಕೆಯನ್ನು ಶ್ರದ್ಧೆಯಿಂದ, ಒಂದೇ ಮನಸ್ಸಿನಿಂದ ಪೂಜಿಸುತ್ತಾರೋ ಅವರ ಅಭೀಷ್ಟಗಳನ್ನು ಶೀಘ್ರವಾಗಿ ನೆರವೇರಿಸುತ್ತಾಳೆಂಬ ನಂಬಿಕೆ ಇದೆ.

ಆದ್ದರಿಂದಲೇ ದಸರಾಹಬ್ಬದಲ್ಲೆ ಜಗಜ್ಜನನಿಯಾದ ಲಲಿತಾದೇವಿಯ ಈ ರೂಪವನ್ನು ಹತ್ತು ದಿನಗಳ ಕಾಲ ಪೂಜಿಸುತ್ತಾರೆ. ಆ ಹತ್ತೂ ದಿನಗಳು ಚಿಕ್ಕ ಹೆಣ್ಣು ಮಕ್ಕಳಿಗೆ ಪಾದಪೂಜೆಯನ್ನು ಮಾಡಿ ಹೆಣ್ಣು ಮಕ್ಕಳು ಧರಿಸುವ ಎಲ್ಲ ಅಲಂಕಾರಿಕ ವಸ್ತುಗಳನ್ನು ನೀಡುವ ಸಂಪ್ರದಾಯವಿದೆ.

ಶೀಘ್ರವಾಗಿ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸುವ ಈ ಬಾಲಾತ್ರಿಪುರಸುಂದರಿಯನ್ನು ಪ್ರಾರ್ಥಿಸಿ ಧನ್ಯರಾಗೋಣ.

# ಈರೇಳು ಲೋಕದಲು ಸಮರಿಲ್ಲ ಕನಕರಿಗೆ

– ಡಾ॥ ಪ್ರದೀಪಕುಮಾರ ಹೆಬ್ರಿ
9844018457



ಕಲಿ,ಕವಿಯಾದ ಸಂಗತಿಗಳು ಕನ್ನಡ ನಾಡಿನ ಇತಿಹಾಸದಲ್ಲಿ ಅಪರೂಪದ್ದಲ್ಲ. ಆದಿ ಕವಿ ಪಂಪ ಮೊದಲ ದೃಷ್ಟಾಂತ. ಮುಂದೆ ರನ್ನ, ಜನ್ನ ಮುಂತಾದ ಮಹಾಕವಿಗಳು ಈ ಪರಂಪರೆಯಲ್ಲಿ ಇರುವವರು ಕನಕದಾಸರು. ತಿಮ್ಮಪ್ಪ ಕನಕನಾಯಕನಾದ, ಕನಕನಾಯಕ ಕನಕದಾಸನಾದ. ತನ್ನ ಸಂಸ್ಕಾರ ಸಾಧನೆಗಳಿಂದ ಸಂತ ಹಾಗೂ ಕವಿಯೆನಿಸಿಕೊಂಡರು. ವೈಷ್ಣವ ಪರಂಪರೆಯ ಶ್ರೇಷ್ಠ ಕವಿ ಇವರು.

ಹರಿದಾಸ ಸಾಹಿತ್ಯದ ಸದಾ ಬೆಳಗುವ ಎರಡು ನಕ್ಷತ್ರಗಳೆಂದರೆ ಸಮಕಾಲೀನರಾದ ಪುರಂದರದಾಸರು ಮತ್ತು ಕನಕದಾಸರು ಇವರು ಪೂಜ್ಯಶ್ರೀ ವ್ಯಾಸರಾಯರ ಒಲವ ಆರೈಕೆಯಿಂದ ಬದುಕಿನುನ್ನತಿ ಕಂಡು ಕೊಂಡವರು. ಇವರಿಂದ ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಸುಗ್ಗಿಯ ಹೊಂಬೆಳಕು ತುಂಬಿ ತುಳುಕಾಡಿತು ಕನಕದಾಸರನ್ನು ಯಮಧರ್ಮಾಂಶರೆಂದೂ ಅಪರೋಕ್ಷ ಜ್ಞಾನಿಗಳೆಂದೂ ಹೇಳುವರು.ಇವರು ಪ್ರಸಿದ್ಧ ಹರಿದಾಸರು. ಕೀರ್ತನಕಾರರು ಮತ್ತು ಕವಿ "ಕನಕನ ಮಂಡಿಗೆ" ಇವರ ವಿಶೇಷ ವೈಶಿಷ್ಟ ಪೂರ್ಣ ರಚನೆಗಳು.

ಕನಕದಾಸರ ಕಾಲ ಕ್ರಿ.ಶ. 1508 - 1606 ಕಾಗಿನೆಲೆಯಲ್ಲಿ ಹುಟ್ಟಿದ ಇವರು ಕುರುಬಜನಾಂಗ ಅಥವಾ ಬೇಡರ ಬುಡಕಟ್ಟಿನ ನಾಯಕ ಪಂಥದವರು ಎನ್ನುತ್ತಾರೆ ಮತ್ತು ಇವರು ಇಂದೂ ಕಾಗಿನೆಲೆಯ ಸಮೀಪದಲ್ಲಿ ವಾಸಿಸುತ್ತಿರುವ ದಾಸರೆಂಬ ಒಂದು ಬುಡಕಟ್ಟಿಗೆ ಸೇರಿದವರೆಂದೂ ಕೆಲವರು ಅಭಿಪ್ರಾಯಿಸಿದ್ದಾರೆ. ಇವರ ಮತ ತತ್ತ್ವವು ಮೊದಲು ಶ್ರೀ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತವೆಂದೂ, ದಾಸದೀಕ್ಷೆ ಪಡೆದು ಹಂಪೆಗೆ ಬಂದ ಮೇಲೆ ಭಕ್ತಿಗೇ ಪ್ರಾಶಸ್ತ್ಯ ನೀಡಿ ಶ್ರೀವ್ಯಾಸರಾಯರ ಪರಿಚಯವಾದ ಮೇಲೆ ಅವರ ಪ್ರತಿಭೆ ಪಾಂಡಿತ್ಯಗಳ ಪ್ರಭಾವಕ್ಕೆ ಒಳಗಾಗಿ, ಶ್ರೀಪುರಂದರದಾಸರ ಹರಿದಾಸ ಕೂಟದ ಸದಸ್ಯರಾಗಿದ್ದಿರಬಹುದು. ಕನಕದಾಸರಿಗೆ ಇಲ್ಲಿಯೇ ಶ್ರೀವಾದಿರಾಜ ಸ್ವಾಮಿಗಳ ಪರಿಚಯವಾದುದು ಕನಕದಾಸರ ಮೇಲೆ ದಯಮಾಡಲು ವ್ಯಾಸಮುನಿ ಮಠದವರೆಲ್ಲ ದೂರಿಕೊಂಬುವರು ಎಂದು ಪುರಂದರದಾಸರು. ತಮ್ಮ ಸಮಕಾಲೀನರಾದ ಕನಕದಾಸರನ್ನು ತಮ್ಮ ಕೀರ್ತನೆಯಲ್ಲಿ ಉಲ್ಲೇಖಿಸಿದ್ದಾರೆ.

ಕನಕದಾಸರು ಮೊದಲು ತಿಮಪ್ಪನಾಯಕ. ಕಾಗಿನೆಲೆಯಲ್ಲಿ ಹುಟ್ಟಿ ಬೆಳೆದು ಬಾಡವೆಂಬ ಪ್ರಾಂತ್ಯದ ನಾಯಕರಾಗಿ ಆಡಳಿತ ನಡೆಸಿದವರು ಮುಂದೆ ಯಾವುದೋ ಕಾಳಗವೊಂದರಲ್ಲಿ ತನ್ನವರೆಲ್ಲರನ್ನು ಕಳೆದುಕೊಂಡರು. ಸೋತರು.ಪರಮಾತ್ಮನ ಅನುಗ್ರಹದಿಂದ ಚೇತರಿಸಿಕೊಂಡು ಹರಿದಾಸರಾದರು. ದಾಸನಾಗುವೆ ಒಮ್ಮೆ ಈ ನೋವಿನಿಂದ ಮುಕ್ತಿ ನೀಡು. ಎಂಬ ಪ್ರಾರ್ಥನೆ ಫಲಿಸಿತು. ಆದಿಕೇಶವನ ದರ್ಶನದಿಂದ ಪುಳಕಿತರಾದ ಕನಕದಾಸರು ಸಂಸಾರವಿರಕ್ತರಾಗಿ ಏಕನಾದವನ್ನು ಮೀಟುತ್ತ, ಈಶ ನಿನ್ನ ಚರಣ ಭಜನೆ ಆಸೆಯಿಂದ ಮಾಡುವೆನು ದೋಷರಾಶಿ ನಾಶ ಮಾಡು ಶ್ರೀಕೇಶವ ಎಂದು ಸ್ತುತಿಸತೊಡಗಿದರು.

ಶ್ರೀವೈಷ್ಣವಪಂಥದ ತಿರುಮಲೈ ತಾತಾಚಾರ್ಯ ಇವರ ಮೊದಲ ಗುರು "ಬಾಡದಾದಿ ಕೇಶವ" ಕಾಗಿನೆಲೆ ಯಾದಿ ಕೇಶವ ಇವರ ಕೀರ್ತನಾಂಕಿತಗಳು ಮುಂದೆ ಹಂಪೆಯ ಶ್ರೀ ವ್ಯಾಸರಾಯ ಗುರುಗಳ ಪರಮಾಪ್ತ ಶಿಷ್ಯ ರಾದ ಕನಕದಾಸರು ಆಗಾಗ್ಗೆ ತಮ್ಮ 'ಶ್ರೀ ಹರಿಭಕ್ತಿ' ಯನ್ನು ಬೇರೆ ಬೇರೆ ರೀತಿಯಲ್ಲಿ ತೋರಿದರು. ಒಮ್ಮೆ ಸರ್ಪದ ರೂಪದಲ್ಲಿ ಶ್ರೀಹರಿಯು ದರ್ಶನ ನೀಡಿದ ಎಂದರಿವಾದಾಗ ಭಾವ ಪರವಶತೆಯಿಂದ ಬದುಕಿದೆನು ಬದುಕಿದೆನು ಭವವೆ ನಗೆ ಹಿಂಗಿತು! ಪದುಮನಾಭನ ಪಾದದೊಲುಮೆ ಎನ ಗಾಯಿತು ಎಂದು ಮನತುಂಬಿ ಸ್ತುತಿಸಿದರು.

ಕನಕದಾಸರು ತಮ್ಮ ಬದುಕನ್ನು ಕೀರ್ತನೆ ಸಂಗೀತ, ಸಾಹಿತ್ಯ ಹಾಗೂ ಕಾವ್ಯ ರಚನೆಗೆ ಮೀಸಲಿಟ್ಟರು. ಅನೇಕ ಭಾವಪೂರ್ಣ ಕೀರ್ತನೆಗಳನ್ನು ರಚಿಸಿದರು. ಮೋಹನ ತರಂಗಿಣಿ,ನಳ ಚರಿತ್ರೆ, ಹರಿಭಕ್ತಿಸಾರ, ರಾಮ ಧಾನ್ಯ ಚರಿತೆ ಮತ್ತು ನೃಸಿಂಹಸ್ಥವ (ಇದು ಸಿಕ್ಕಿಲ್ಲ) ಎಂಬ ಮಹಾಕಾವ್ಯ ಕೃತಿಗಳನ್ನು ರಚಿಸಿದರು. ಹರಿದಾಸರಾಗಿ ದೇಶ ಸಂಚಾರ ಮಾಡುತ್ತ ಉಡುಪಿ, ಹಂಪೆ ತಿರುಪತಿ, ಬೇಲೂರುಗಳಲ್ಲಿ ಕೆಲಕಾಲ ನೆಲೆಸಿದ್ದರು.

ಕನಕದಾಸರ ಕೃತಿಗಳ ಮುಖ್ಯ ಗುಣವೆಂದರೆ ಆತ್ಮ ನಿರೀಕ್ಷಣೆ ಮಾನವ ಅಂತರ್ಮುಖಿಯಾಗಬೇಕು. ಭಗವಂತನ ದಾಸನಾಗಬೇಕು.ಐಹಿಕ ಕಲ್ಮಷಗಳಿಂದ ಹೊರತಾಗ ಬೇಕೆಂಬುದು ಇವರ ರಚನೆಗಳ ಸಾರ. ಕನಕ ದಾಸರ ಬದುಕೇ ಒಂದು ಮಹಾಕೃತಿ. ಕೀರ್ತನೆಕಾರ, ಹರಿದಾಸ ವಿಡಂಬನಕಾರ, ತತ್ವಕವಿ, ದಾಸ , ಸಮಾಜ ಸುಧಾರಕ - ಹೀಗೆ ಬಹು ಮುಖ ವ್ಯಕ್ತಿತ್ವದಲ್ಲಿ ಗೋಚರಿ ಸುವ ಕನಕದಾಸರು. " ಮಾನವ ಬದುಕು ಸ್ವಾರ್ಥದಿಂದ ಸಮಷ್ಟಿಯೆಡೆಗೆ ಚಿಂತಿಸಬೇಕು. ಆದರಿಂದ ಬದುಕಿನುನ್ನತಿ ಕಾಣಬೇಕು.ಚಿರಂತನ ಸತ್ಯಧರ್ಮದಿಂದ ವಾಮಮಾರ್ಗದ ಬಗ್ಗೆ ಚಿಂತಿಸದೆ ಸತ್ಯಮಾರ್ಗದಲ್ಲೇ ಸಾಗಬೇಕು ಎಂದಿ ದ್ದಾರೆ. ಸತ್ಸಂಗದ ಹಿರಿಮೆಯನ್ನು ದಾಸತ್ವದ ಮಹಿಮೆ ಯನ್ನೂ ಮನಗಾಣಿಸಿದ್ದಾರೆ.

"ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು

ಎಂಬ ಕೀರ್ತನೆಯ ಸಾಲು, "ಕೊಚ್ಚೆಯೊಡನಿನ ಸ್ನೇಹಕ್ಕಿಂತ ಗಂಧದೊಡನೆ ಗುದ್ದಾಟವೇ ಲೇಸು' ಎಂಬು ದನ್ನು ಧ್ವನಿಸುತ್ತ ಸತ್ಸಂಗ ಮಾನವ ಬದುಕನ್ನು ಮೇರುವಾಗಿ ಸಲು ಎಂತಹ ಘನಪಾತ್ರವನ್ನು ವಹಿಸುತ್ತದೆಂಬುದನ್ನು ಅರುಹಿದೆ.

ಇವರ ಕಾವ್ಯಗಳಲ್ಲಿ ಮೋಹನ ತರಂಗಿಣಿ" ಸಾಂಗತ್ಯ ಕಾವ್ಯ ಇದರಲ್ಲಿ 42 ಸಂಧಿಗಳೂ 2700 ಸಾಂಗತ್ಯಗಳೂ ಇವೆ. ಇದಕ್ಕೆ ಕೃಷ್ಣಚರಿತೆ ಎಂಬ ಹೆಸರೂ ಇದೆ. 'ನಳಚರಿತೆ' ಭಾಮಿನೀ ಷಟ್ಪದಿಯಲ್ಲಿದೆ. 9 ಸಂಧಿಗಳು 480 ಪದ್ಯಗಳು ಇವೆ.'ರಾಮಧಾನ್ಯ ಚರಿತ್ರೆ' ಭಾಮಿನೀಷಟ್ಪದಿಯಲ್ಲಿದೆ. ಸುಮಾರು 156 ಪದ್ಯಗಳಲ್ಲಿದೆ. 'ಹರಿಭಕ್ತಿಸಾರ' ಭಾಮಿನೀ ಷಟ್ಪದಿಯಲ್ಲಿರುವ ಭಕ್ತಿ ಭಾವಭರಿತ್ರೆ ಶತಕಗ್ರಂಥ110 ಪದ್ಯ ಗಳಿವೆ. ಪ್ರತೀಪದ್ಯದ ಕೊನೆಯ ಚರಣ ರಕ್ಷಿಸು ನಮ್ಮ ನನ ವರತ ಎಂದು ಮುಗಿಯುತ್ತದೆ. ನೃಸಿಂಹಸ್ತುತಿ ಸಾಂಗತ್ಯ ಕೃತಿ ಯಾಗಿದೆ.

ಕನಕದಾಸರ ಕೀರ್ತನೆಗಳು ಸಂಖ್ಯಾದೃಷ್ಟಿಯಿಂದ ತುಸು ಕಡಿಮೆ. ಈ ತನಕ ದೊರೆತಿದ್ದು ಸುಮಾರು ನಾಲ್ನೂರು ಕೀರ್ತನೆಗಳು ಮಾತ್ರ. ಆದರೆ ಬಹುತೇಕ ಕೀರ್ತನೆಗಳೆಲ್ಲವು ಗುಣದ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. ತಲ್ಲಣಿಸದಿರು ಕಂಡ್ಯ ತಾಳುಮನವೆ." ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ! ಕುಲಕುಲವೆಂದು ಹೊಡೆದಾಡದಿರಿ. ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ"ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ತೀರ್ಥವನು ಪಿಡದವರೆಲ್ಲ ತಿರುನಾಮಧಾರಿಗಳೆ ","ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ", ದೇವಿ ನಮ್ಮದ್ಯಾವರು ಬಂದರು ನೋಡಿರೆ"... ಮೊದಲಾದ ಕೀರ್ತನೆಗಳಲ್ಲಿ ದೈವಭಕ್ತಿ. ಜೀವನದರ್ಶನ, ಸಮಾಜ ವಿಮರ್ಶೆ, ಲೋಕಾನುಭವ ಮೊದಲಾದುವುಗಳೆಲ್ಲ ಕಾವ್ಯಾತ್ಮಕವಾಗಿ ಹೊರಹೊಮ್ಮಿದ ಅಂದವನ್ನು ಮನಗಾಣ ಬಹುದು.

ಕನಕದಾಸರು ಸಮಾಜದ ಅಂಕುಡೊಂಕುಗಳನ್ನು ಬಿಚ್ಚು ಮಾತುಗಳಲ್ಲಿ ಚುಚ್ಚಿ ಎಚ್ಚರಿಸಿದ್ದಾರೆ. ಕಿಡಿಯಾಗಿ ಸಿಡಿಯುವ ಅರಳಾಗಿ ಅರಳುವ ನುಡಿಗಳಿಂದ ದೀನದಲಿತರ ಮೂಢ ರೂಢಿಗಳನ್ನು ಬಯಲಿಗೆಳೆದು ಕಳಕಳಿಯಿಂದ ಕಳವಳಿಸಿದ್ದಾರೆ. ದೇಸೀಶೈಲಿಯಲ್ಲಿ ಭಕ್ತಿಯ ತತ್ತ್ವವನ್ನು ಅರಳಿಸಿದ್ದಾರೆ. ಕೆಲವೊಮ್ಮೆ ಕನಕದಾಸರು ಕೊಡುವ ಉಪ ಮಾನಗಳು ಮಾರ್ಮಿಕವಾಗಿವೆ. ಇವರ ಮಿಂಚಿನಂಥ ಮಾತು ಗಳು ಇವರ ವಿಶಿಷ್ಟ ವ್ಯಕ್ತಿತ್ವದ ದದ್ಯೋತಕವಾಗಿ, ನಾಣ್ನುಡಿಯ ಸತ್ಯದಿಂದ ಸಾರಭೂತವಾಗಿದೆ. ಸುಪ್ತಭಾವ ವನ್ನು ಬಡಿದೆಬ್ಬಿ ಸುತ್ತವೆ ಇವರ ಮುಂಡಿಗೆಗಳು ಬೆಡಗಿನ ವಚನಗಳಂತೆ. ಒಗಟಿನಂತೆ, ಬಿಡಿಸಲಾರದ ಕಗ್ಗಂಟಿ ನಂತಿವೆ.

ಕನಕದಾಸರು ಮತ, ಧರ್ಮಗಳ ಕಟ್ಟುಪಾಡಿಗೆ ಸಿಲುಕಿದ , ಮಾನವಧರ್ಮವನ್ನು ಮಾನವೀಯತೆಯನ್ನು ಎತ್ತಿ ಹಿಡಿಯುವ, ಭಗವದ್ಭಕ್ತಿ ವೈರಾಗ್ಯಗಳನ್ನು ನಿಜವಾದ ಅರ್ಥದಲ್ಲಿ ಸಾಧಿಸಿಕೊಂಡ ಸಾರ್ಥಕ ಜೀವಿಗಳು, ಅನ್ಯಾಯವನ್ನು ಪ್ರತಿಭಟಿಸುವ ನಚ್ಚು, ಡಂಭಾಚಾರವನ್ನು ಟೀಕಿಸುವ ಕೆಚ್ಚು ಹರಿಯನ್ನು ಕಾಣುವ ಹುಚ್ಚು, ಮಾನವ ಸ್ವಭಾವದ ಆಳವಾದ ಗ್ರಹಿಕೆ, ಮನುಷ್ಯನ ಸಣ್ಣ ಬುದ್ಧಿಗಳಿಂದುಂಟಾಗುವ ನೋವು ಅಂತಹವರನ್ನು ತಿದ್ದುವ ಕಳಕಳಿಗಳಿಂದ ಬಹಳ ಎತ್ತರಕ್ಕೆ ಬೆಳೆದಿದ್ದಾರೆ. ಸಮಾಜದ ಅಂಕುಡೊಂಕುಗಳನ್ನು ಬಿಚ್ಚು ಮಾತುಗಳಲ್ಲಿ ಚುಚ್ಚಿ ಎಚ್ಚರಿಸಿದ್ದಾರೆ. ಕಿಡಿಯಾಗಿ ಸಿಡಿಯುವ ಅರಳಾಗಿ ಅರಳುವ ನುಡಿಗಳಿಂದ ಸಮಾಜದ ಮತಿಹೀನತೆಯನ್ನು ತೊಡೆಯುವ ಸಾಹಸಕ್ಕೆ ಮುಂದಾಗಿದ್ದಾರೆ.

ಕನಕದಾಸರ ವಿಶೇಷಗಳಲ್ಲಿ ಒಂದೆರಡು ಹೀಗಿವೆ:

ಒಮ್ಮೆ ಹೆಣ್ಣುಮಗಳೊಬ್ಬಳು ಅಕ್ಕಿ ತೊಳೆದು ನೀರು ಚೆಲ್ಲುತ್ತಿದ್ದಾಗ ಕನಕದಾಸರು 'ಕೃಷ್ಣಾರ್ಪಣ' ಎಂದರು ಅದನ್ನು ಶ್ರೀಕೃಷ್ಣ ಸ್ವೀಕರಿಸಿದ ಅಂದಿನಿಂದ"ಗಂಜಿ ಊಟ" ಪದ್ಧತಿ ಜಾರಿಗೆ ಬಂತು. "

ಒಮ್ಮೆ ಶ್ರೀವ್ಯಾಸರಾಯರು ಕೈಯಲ್ಲಿ ಸಾಲಿಗ್ರಾಮ ಹಿಡಿದು ಬಿಗಿಮುಷ್ಟಿಯನ್ನು ಶಿಷ್ಯರಿಗೆ ತೋರಿ ಶಿಷ್ಯರನ್ನು ಕುರಿತು. " ನನ್ನ ಕೈಯಲ್ಲಿ ಏನಿದೆ ಹೇಳಿ?" ಎಂದರಂತೆ ಎಲ್ಲರೂ ತಮಗೆ ತೋಚಿದ್ದನ್ನು ಹೇಳಿದರು. ಆದರೆ ಕನಕದಾಸರು"ಈತನೀಗ ವಾಸುದೇವನು"ಎಂದೊಂದು ಕೀರ್ತನೆಯನ್ನೇ ರಚಿಸಿ ಭಕ್ತಿ ಪರವಶತೆಯಿಂದ ಹಾಡಿ ಭಗವಂತನ ಪ್ರತೀಕವಾದ ವಾಸುದೇವ ಸಾಲಿಗ್ರಾಮವಿದೆ ಎಂದರು. ವ್ಯಾಸರಾಯರು ಮುಷ್ಟಿ ತೆರೆದಾಗ ಸಾಲಿಗ್ರಾಮವೇ ಇತ್ತು.

ಕನಕದಾಸರ ಕೀರ್ತನೆಗಳಲ್ಲಿ 'ಭಾವಗೀತೆ' 'ಭಜನೆ' ಶಾಸ್ತ್ರೀಯ ಸಂಗೀತ ಜನಪದ ಶೈಲಿ ಮೊದಲಾದ ಎಲ್ಲ ಪ್ರಕಾರಗಳಿಗೂ ಹೊಂದುವ ಲಕ್ಷಣಗಳನ್ನು ಗಮನಿಸಬಹುದು. ಕನಕದಾಸರು ಸಾಹಿತ್ಯ- ಸಂಗೀತಗಳೆರಡರ ದೃಷ್ಟಿಯಿಂದ ಭಕ್ತಿ - ಅಧ್ಯಾತ್ಮ- ವೈಚಾರಿಕತೆಗಳಲ್ಲಿ ಸಮನ್ವಯತೆಯನ್ನು ಸಾಧಿಸಿದವರು. ಇವರ ರಚನೆಗಳು ಸಮಾಜದ ಎಲ್ಲ ವರ್ಗದ ಜನರಿಗೆ ಕಲೆ, ಅಧ್ಯಾತ್ಮಗಳನ್ನು ತಲುಪಿಸುವಲ್ಲಿ ಮತ್ತು ವಿವಿಧ ಕಲಾ ಸಮನ್ವಯ ಸಾಧಿಸುವಲ್ಲಿ ಅತ್ಯಮೂಲ್ಯ ಕೊಡುಗೆಗಳಾಗಿ ಚಿರಸ್ಥಾಯಿಯಾಗಿ ನಿಲ್ಲುತ್ತವೆ.

ಕನಕದಾಸರು ಕವಿ - ಸಂತರ ಸಂಗಮ ತಮ್ಮ ಸಾಹಿತ್ಯದಲ್ಲಿ ಅವರು ನಮಗೆ ಕಾವ್ಯವನ್ನು, ಮೌಲ್ಯಗಳನ್ನು, ಸಂದೇಶಗಳನ್ನು ಉಳಿಸಿ ಹೋಗಿದ್ದಾರೆ. ಅವರ ಬೋಧನೆ ಕಾವ್ಯಮಯ ಅವರ ಕೀರ್ತನೆಗಳನ್ನು ಸ್ಥೂಲವಾಗಿ . 1)ಸಾಮಾಜಿಕ ಕಳಕಳಿಯ ಕೀರ್ತನೆಗಳು 2) ಭಕ್ತಿಕೀರ್ತನೆಗಳು 3) ಅಧ್ಯಾತ್ಮಪರ ಕೀರ್ತನೆಗಳು ಎಂದು ಮೂರು ಬಗೆಯಲ್ಲಿ ವಿಂಗಡಿಸಬಹುದು.

ಕನಕದಾಸರ ಸಾಮಾಜಿಕ ಕಳಕಳಿ ಅವರ ಉಪದೇಶಾತ್ಮಕ ವಿಡಂಬನಾತ್ಮಕ ಕೀರ್ತನೆಗಳಲ್ಲಿ ಸ್ಪಷ್ಟವಾಗಿ ಪಡಿಮೂಡಿದೆ. ಇವರ ಭಕ್ತಿ ಗೀತೆಗಳೆಂದರೆ ಭಗವಂತನ ಲೀಲಾ ವಿನೋದಗಳ ನಿರೂಪಣೆ ಅಧ್ಯಾತ್ಮ ಪರ ಆತ್ಮ ನಿವೇದನಾ ಕೀರ್ತನೆಗಳಲ್ಲಿ ಭಗವಂತನ ಸಾನ್ನಿಧ್ಯಕ್ಕಾಗಿ ಹಂಬಲಿಸಿ ತೊಳಲುವ ಕಳವಳಿಸುವ ಬಗೆಯನ್ನು ಕಾಣಬಹುದು.

ಕನಕದಾಸರ ಬಗ್ಗೆ ಗುರು ಶ್ರೀವ್ಯಾಸರಾಯರು, ಇವನಿಗೆ ನಾಡೆಲ್ಲಹುಡುಕಿದರು ಈಡಾರಕಾಣೆ ಎಂದಿರುವಲ್ಲಿ ಇವರ ಘನ ವ್ಯಕ್ತಿತ್ವವನ್ನು ಅರಿಯಬಹುದು.ಇವರು ಭಕ್ತಾಗ್ರೇಸರರ ಪರಂಪರೆಗೆ ಸೇರಿದವರು.ಉನ್ನತ ವ್ಯಕ್ತಿತ್ವ ದವರು, ಮಹಾತ್ಮರು, ಸ್ವತಂತ್ರ ಪ್ರತಿಭೆಯ ಕವಿಗಳು, ಶ್ರೇಷ್ಠ ವಾಗ್ಗೇಯಕಾರರು ದಿವ್ಯಜ್ಞಾನಿಗಳು ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನಾ ಸ್ವರವನ್ನು ಮೊಳಗಿಸಿದವರು. ಇವರು ವಿನಯ ಹಾಗೂ ವೀರತ್ವ ವನ್ನು ರೂಢಿಸಿಕೊಂಡರು. ಎಲ್ಲರಿಗೂ ತಲೆಬಾಗಿ ಎಲ್ಲರೂ ತಲೆಬಾಗುವಂತೆ ಮಾಡಿದವರು. ಬದುಕಿನಲ್ಲೂ, ಸಾಹಿತ್ಯದಲ್ಲೂ ಶಾಂತಿ ಹಾಗೂ ಭಕ್ತಿಯನ್ನು ಬೆರೆಸಿದ ಅಪರೂಪದ ವೀರ-ವಿರಾಗಿ ಸಾಹಿತಿ ಸಂತರಿವರು.


ಕನಕದಾಸರ ಈ ಕೀರ್ತನಾ ಸಾಲನ್ನು ಮತ್ತೆ ಮತ್ತೆ ಗುನುಗೋಣ:

ಉಂಬುದಕೆ ಇಲ್ಲದ ಅರಸಿನೋಲಗಕಿಂತ
ತುಂಬಿದೂರೊಳಗೆ ತಿರಿದುಂಬುವುದೇ ಲೇಸು
ಹಂಬಲಿಸಿ ಹಾಳುಹರಟೆ ಹೊಡೆಯುವುದಕಿಂತ ಹರಿ
ಯೆಂಬ ದಾಸರ ಕೂಡೆ ಸಂಭಾಷಣೆಯೇ ಲೇಸು



ಪುಸ್ತಕಾವಲೋಕನ

# ‘ಅರಿವಿನ ಪ್ರಣತಿ ಬೆಳಗುವ ಕೃತಿ’ ವಂದೇ ಗುರು ಪರಂಪರಾಮ್




**ಪುಸ್ತಕದ ವಿವರ**

**‘ವಂದೇ ಗುರು -ಪರಂಪರಾಮ್’**

**ಲೇಖಕರು:** ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

**ಪ್ರಕಾಶಕರು:** ಪ್ರಣವ ಮೀಡಿಯಾ ಹೌಸ್ ಪ್ರಕಾಶನ, ಬೆಂಗಳೂರು - 9739369621

**ಪುಟಗಳು:** 184 **ಬೆಲೆ: ರೂ.** 180/-

**ಆಕಾರ:** ಡೆಮ್ಮಿ 1/8

‘ಗುರು’ ಎಂದರೆ ಕತ್ತಲೆಯನ್ನು ಓಡಿಸಿ ಬೆಳಕನ್ನು ಒದಗಿಸುವವನು. ಅವನು ಇಲ್ಲದಿದ್ದರೆ ನಮ್ಮ ಬಾಳು ಸುಗಮವಾಗಿ ಸಾಗದು ; ಬದುಕಿನ ದಾರಿ ನಮಗೆ ಕಾಣುವುದೇ ಅವನು ಕೊಡುವ ಬೆಳಕಿನಲ್ಲಿ. ಅವನು ವಿದ್ಯೆಯ ರೂಪದಲ್ಲಿ ನಮಗೆ ನೀಡುವ ತಿಳಿವಳಿಕೆಯೇ ಆ ಬೆಳಕು. ಗುರುವಾದವನು ಒಳಗಣ್ಣನ್ನು ತೆರೆಯುತ್ತಾನೆ. ಒಳಗಣ್ಣಿನ ಒಳಗೊಳಗಿನಿಂದ ಒಳಗೊಳಗೇ ಇಳಿದು ಬಗೆಗಣ್ಣಿನಿಂದ ಭಗವಂತನನ್ನು ದರ್ಶನ ಮಾಡಿಸುವ ಕಾರ್ಯವನ್ನು ಗುರುವಾದವನು ಮಾಡುತ್ತಾನೆ. ಗುರು ಎಂದು ಹೇಳಿಸಿಕೊಂಡಾತನು ಕೇವಲ ಜ್ಞಾನವನ್ನು ಬೋಧಿಸುವ ಮಂತ್ರವಾಗಿರದೆ ಉನ್ನತ ಧ್ಯೇಯಾದರ್ಶನಗಳನ್ನು ಹೊತ್ತವನು, ಕಳಂಕ ರಹಿತನೂ,ಶಾಶ್ವತ ಮೌಲ್ಯಗಳನ್ನು ಬೋಧಿಸುವ ಮಾದರಿ ವ್ಯಕ್ತಿಯಾಗಿರಬೇಕಾಗಿರುತ್ತದೆ. ಮನೆಯ ಅವುಗಳ ಒಳಮನೆಯ ಕಸವನ್ನು ಯಾರಾದರೂ ಗುಡಿಸಿ ಸ್ವಚ್ಛಗೊಳಿಸಬಹುದು. ಆದರೆ ಮನದ ಕಸ ಕಿತ್ತೊಗೆಯಲು ಶ್ರೀ ಗುರುವೊಬ್ಬನೇ ಸಮರ್ಥ. ಆದ್ದರಿಂದ ಶ್ರೀ ಗುರುವಿಗೆ ಎಲ್ಲರೂ ಶಿರಬಾಗಿ ನಡೆಯುವರು. ಗುರು ಎಂದರೆ ಆತ್ಮಸಾಕ್ಷಾತ್ಕಾರಕ್ಕೆ ದಾರಿ ತೋರುವ ಸಾಧನ. ಇಲ್ಲಿ ಆತ್ಮಸಾಕ್ಷಾತ್ಕಾರವೆಂದರೆ ವ್ಯಕ್ತಿತ್ವದ ಆಚೆಗೆ ದಾಟಿ ಹೋದವರು. ನಂತರ ಪಾತ್ರಕ್ಕೆ ತಕ್ಕಂತೆ ತಮ್ಮ ಕಾರ್ಯಕ್ಕೆ ಸಾಧನವಾಗಿ ‘ವ್ಯಕ್ತಿ’ಯೊಂದನ್ನು ಸಂಪೂರ್ಣ ಪ್ರಜ್ಞೆಯಿಂದ ರೂಪಿಸಿಕೊಳ್ಳುವವರು ಎಂದಾಗುತ್ತದೆ. ಉಪನಿಷತ್ತುಗಳು ಹೇಳುವ ಪ್ರಕಾರ ಪ್ರತಿಯೊಂದು ವಸ್ತುವು ಎರಡೆರಡು ಬಾರಿ ಜನ್ಮತಾಳುತ್ತದೆ.ಮೊದಲ ಬಾರಿ ಅರಿವು ಅಥವಾ ಚಿಂತನೆಯ ರೂಪದಲ್ಲಿ ಎರಡನೆಯ ಬಾರಿ ವಸ್ತು ಪದದ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ಅರಿವು ಮತ್ತು ಚಿಂತನೆಯನ್ನು ಗುರುಶಕ್ತಿ ಎನ್ನುತ್ತಾರೆ.

ಗುರುಮುಖದಿಂದ ಕಲಿಯದ ವಿದ್ಯೆಯು ‘ವಿದ್ಯೆ’ ಯೇ ಅಲ್ಲ. ದೇವದಾನವರಿಗೆ, ಅವತಾರೀ ಪುರುಷರಿಗೆ ಕೂಡಾ ಗುರುಗಳಿದ್ದರು. ಗುರುವು ಸಾಧಕನನ್ನು ‘ಶಿಷ್ಯ’ನಾಗಿ ಸ್ವೀಕರಿಸಿದ ಬಳಿಕ ಶಿಷ್ಯನು ದೇವಋಣ, ಋಷಿಋಣ , ಪಿತೃಋಣ ಮತ್ತು ಸಮಾಜ ಋಣ ಎಂಬ ನಾಲ್ಕು ಋಣಗಳನ್ನು ತೀರಿಸಬೇಕಾಗಿರುವುದಿಲ್ಲ. ಆತನನ್ನು ಎಲ್ಲ ಋಣಗಳಿಂದಲೂ ಗುರುಗಳೇ ಮುಕ್ತಗೊಳಿಸುತ್ತಾರೆ.

ನಮ್ಮೀ ಪುಣ್ಯಭೂಮಿಯಾದ ಭಾರತದೇಶ ಕರ್ಮಭೂಮಿ ಮಾತ್ರವಲ್ಲ, ಜ್ಞಾನಭೂಮಿ ಸಹ. ಜಗತ್ತಿನ ಅಜ್ಞಾನವನ್ನು ಕಳೆಯಬಲ್ಲ ಸಕಲ ಜೀವಜಂತುಗಳಿಗೂ ಒಳಿತನ್ನೂ ಬಯಸುವ ಉಪನಿಷದ್ ಜ್ಯೋತಿಯು ದರ್ಶನವನ್ನು ನೀಡಿದ್ದು ಈ ಭೂಮಿಯಲ್ಲಿ ಜನ್ಮ ಪಡೆದ ಋಷಿ ಮುನಿಗಳಿಗೆ, ಕಾಲಮಹಿಮೆಯ ಪ್ರಭಾವದಿಂದ ಆ ಜ್ಯೋತಿಯ ಪ್ರಭೆ ಕ್ಷೀಣಿಸುತ್ತೇನೋ ಎಂದೆನಿಸಿದಾಗಲೆಲ್ಲ ಅನೇಕ ಮಹಾಮಹಿಮರು ಕಾಲಕಾಲಕ್ಕೆ ಈ ಇಳೆಯಲ್ಲಿ ಅವತರಿಸಿ, ಆ ಜ್ಯೋತಿಗೆ ತೈಲಧಾರೆಯನ್ನು ಎರೆದು ಮತ್ತಷ್ಟು ಉಜ್ವಲವನ್ನಾಗಿ ಮಾಡಿದ್ದಾರೆ. ‘ವ್ಯಕ್ತಿ’ ಶುದ್ದಿಯಿಂದ ಸಮಾಜಶುದ್ಧಿ ತನ್ಮೂಲಕ ರಾಷ್ಟ್ರಸಮೃದ್ಧಿ’ ಎಂಬ ಆರ್ಷಪರಂಪರೆಯ ಧ್ಯೇಯವಾಕ್ಯವನ್ನು ಸದಾ ಸ್ಮರಿಸುತ್ತಾ ಜೀವನದಲ್ಲಿ ಸುಖ - ಸಂತೋಷ -ನೆಮ್ಮದಿಯನ್ನು ಪಡೆಯೋಣ. ಹೇಗೆ ಪರಿಪೂರ್ಣ ಗುರು ತೋರಿದ ಮಾರ್ಗದಲ್ಲಿ ಸಾಗುವುದೇ ನಮ್ಮ ಬಾಳಿನ ಗುರಿಯಾಗಬೇಕು. ಅದುವೇ ವಾಸ್ತವ ಸತ್ಯ ಎಂಬುದನ್ನು ಸಂಸ್ಕೃತಿ ಚಿಂತಕ ಡಾ. ಗುರುರಾಜ ಪೋಶೆಟ್ಟಿಹಳ್ಳಿಯವರು ಮನೋಜ್ಞವಾಗಿ ಈ ಹೊತ್ತಿಗೆಯಲ್ಲಿ ವಿವರಿಸಿದ್ದಾರೆ.

ಡಾ॥ ಗುರುರಾಜಪೋಶೆಟ್ಟಿಹಳ್ಳಿಯವರು ವಿವಿಧ ಪತ್ರಿಕೆಗಳಲ್ಲಿ ಗುರುಪೂರ್ಣಿಮೆ ನಿಮಿತ್ತ ಬರೆದ ಬಿಡಿ ಲೇಖನಗಳ ಪುಷ್ಪಗಳನ್ನು ಒಟ್ಟು ಗೂಡಿಸಿ ಸಂಪಾದಿಸಿದ ಗುಚ್ಛವಿದು. ಅಧ್ಯಯನಶೀಲರಾಗಿ ಸಾಕಷ್ಟು ಮಂಥನ ಮಾಡಿ ನವನೀತವನ್ನು ತೆಗೆದು ಓದುಗರ ಮುಂದಿಡುವುದು ಇವರ ಲೇಖನಗಳ ವೈಶಿಷ್ಟ್ಯ. ವಿಷಯಗಳ ಮೇಲೆ ಪ್ರಭುತ್ವವಿದ್ದರೂ ಅದನ್ನು ಪ್ರದರ್ಶಿಸುವ ಅಟ್ಟಹಾಸವಿಲ್ಲ. ಶಬ್ದಗಳ ಆಡಂಬರವಿಲ್ಲ. ಚಿಕ್ಕ ಚಿಕ್ಕವಾದ ಸೊಗಸಾದ ಪದಗಳು, ಸಂದರ್ಭಕ್ಕೆ ತಕ್ಕಂತೆ ಉಪಮಾನ ಉಪಮೆಗಳು, ಸರಳ ವಾಕ್ಯಗಳ ಅವರ ಬರವಣಿಗೆಯಲ್ಲಿ ಕಾಣಬಹುದು.

ಮನದಾಳದಲ್ಲಿ ನಿಂತ ಲೇಖನ - ಜನನಿ ತಾನೇ ಮೊದಲ ಗುರುವು ಎಲ್ಲ ವೀರ ಮಾತೆಯರು ತಮ್ಮ ಮಕ್ಕಳಿಗೆ ಸಂಸ್ಕಾರ ನೀಡಿ ದೇಶಕ್ಕೆ ಕೊಡುಗೆ ನೀಡಿದ ಬಗೆ ಉತ್ತಮವಾಗಿದೆ. ಈಗಲೂ ಬೆರಳೆಣಿಕೆಯಷ್ಟು ಮಾತೆಯರು ಮಕ್ಕಳನ್ನು ಉತ್ತಮ ಸಂಸ್ಕಾರವಂತರನ್ನಾಗಿ ಮಾಡಿ ಸಮಾಜಕ್ಕೆ ಕೊಡುಗೆ ನೀಡುತ್ತಿರುವುದರಿಂದ ಶ್ರೇಷ್ಠ ಭಾರತ ಇನ್ನೂ ಉಳಿದುಕೊಂಡಿದೆ. ಪುಸ್ತಕದಲ್ಲಿರುವ ಒಂದೊಂದು ಲೇಖನವೂ ನಮ್ಮ ಸನಾತನ ಧರ್ಮದ ಗುರು ಪರಂಪರೆಯನ್ನು ಎತ್ತಿ ಹಿಡಿಯುವ, ರಾಮಾಯಣ, ಮಹಾಭಾರತ ಮತ್ತು 18 ಪುರಾಣಗಳಲ್ಲಿ ಬರುವ ಅನೇಕ ಪಾತ್ರಗಳನ್ನು ನಮಗೆ ಪರಿಚಯಿಸಿ ಮನನ ಮಾಡಿಕೊಡುವಲ್ಲಿ ಗುರು ಮಹಿಮೆಯನ್ನು ತಿಳಿಸಕೊಡುವಲ್ಲಿ ಲೇಖಕರು ಪ್ರಯತ್ನಿಸಿದ್ದಾರೆ. ಇದನ್ನು ನಾವು ಪ್ರಯತ್ನಿಸಿದಲ್ಲಿ ನಿಜಕ್ಕೂ ಈ ಪುಸ್ತಕಕ್ಕೊಂದು ಅರ್ಥಸಿಗುತ್ತದೆ.

ಪುಸ್ತಕಗಳು ಕೆಲವೂಮ್ಮೆ ನಮ್ಮ ಬದುಕನ್ನೇ ಬದಲಾಯಿಸುತ್ತದೆ. ಒಳ್ಳೆಯ ಪುಸ್ತಕಗಳಿಂದ ಧನಾತ್ಮಕ ಬದಲಾವಣೆಗಳಾದರೆ, ಕೆಟ್ಟ ಪುಸ್ತಕಗಳಿಂದ ನಕಾರಾತ್ಮಕ ಬದಲಾವಣೆಗಳಾಗುತ್ತದೆ.ಉದಾಹರಣೆಗೆ ಗಾಂಧೀಜಿಯವರು ರಾಮಾಯಣವನ್ನು ಓದಿ ರಾಮರಾಜ್ಯದ ಕನಸನ್ನು ಕಂಡರು. ಅನೇಕ ನಾಸ್ತಿಕರು ನಮ್ಮ ಸನಾತನ ಸಾಹಿತ್ಯವನ್ನು ಓದಿ ಆಸ್ತಿಕರಾಗಿದ್ದಾರೆ. ಮತ್ತೆ ಕೆಲವರು ಈ ಸಾಹಿತ್ಯವನ್ನು ಅರೆಬರೆ ಓದಿ ವಿತಂಡವಾದಿಗಳಾಗಿದ್ದಾರೆ. ಆದರೆ ಇಂತಹ ಅನರ್ಘ್ಯ ಸಂಪತ್ತು ಕಿವುಡನಿಗೆ ಕಿನ್ನರಿಯಂತೆ, ಕುರುಡನಿಗೆ ಸುಂದರಿಯಂತೆ, ಸತ್ತವನಿಗೆ ಹಾಕುವ ಮಾಲೆಯಂತೆ, ಸಮುದ್ರದಲ್ಲಿ ಬಿದ್ದ ಮಳೆಯಂತೆ ವ್ಯರ್ಥ ಆಗುತ್ತಿದೆ. ಪವಿತ್ರವೇ ಆದರೂ ಗಂಗಾನದಿಯನ್ನು ಅದರ ಹತ್ತಿರ ಇರುವ ಜನರು ಹೇಗೆ ವಂದಿಸುವುದಿಲವೋ ಹಾಗೆ ನಮ್ಮವರಲ್ಲೇ ಅನೇಕರು ಇದನ್ನು ಮೂಲೆ ಗುಂಪು ಮಾಡಿದ್ದಾರೆ. ನಾವು ನಮ್ಮ ಸುಖಕ್ಕಾಗಿ ಅನೇಕ ವಸ್ತುಗಳನ್ನು ಖರೀದಿಸುತ್ತೇವೆ. ಆದರೆ ಸದಭಿರುಚಿಯ, ಅದರಲ್ಲೂ ಪ್ರಾಚೀನ ಸಾಹಿತ್ಯದ ಪುಸ್ತಕಗಳನ್ನು ಕೊಳ್ಳಲು ನಮ್ಮಲ್ಲಿ ಹಣವಿರುವುದಿಲ್ಲ. ‘ಕಾಲಂ ಕ್ರೀಡತಿ ಗಚ್ಛತ್ಯಾಯುಃ’ ಎಂಬಂತೆ ಕಾಲವು ಹೋಗುವುದೇ ತಿಳಿಯುವುದಿಲ್ಲ. ಸಮಯದ ಮಹತ್ವವನ್ನು ತಿಳಿದವರು ತಮ್ಮ ಸಿಕ್ಕ ಸಮಯವನ್ನು ಒಳ್ಳೆಯ ಪುಸ್ತಕಗಳನ್ನು ಓದಲು ಬಳಸಿಕೊಳ್ಳುತ್ತಾರೆ. ಮತ್ತೆ ಕೆಲವರು ವ್ಯರ್ಥ ಮಾಡಿಕೊಳ್ಳುತ್ತಾರೆ. ಸನಾತನ ಸಾಹಿತ್ಯವನ್ನು ಉಳಿಸುವುದರಿಂದ ನಮ್ಮ ಸಂಸ್ಕೃತಿ ಉಳಿಯುತ್ತದೆ. ಈ ಕೆಲಸ ಒಬ್ಬರಿಂದ ಸಾಧ್ಯವಿಲ್ಲ. ಇದಕ್ಕೆ ಸಾಂಘಿಕ ಪ್ರಯತ್ನಬೇಕು.

**ಪುಸ್ತಕ ಪರಿಚಯ :** ತೀರ್ಥಹಳ್ಳಿ ಅನಂತಕಲ್ಲಾಪುರ, ಬೆಂಗಳೂರು - 9480729458

తిరుమల తిరుపతి దేవస్థానములు

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನವೀಕರಣ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ : ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸು ವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲ ವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳ ಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ.ತಾವು ಹಳೆಯ ಚಂದಾ ದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ನವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸು ವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳ ಬೇಕು.

ಇ.ನಿಮಗೆ ಬೇಕಾದ ಭಾಷೆ ಯನ್ನು ಖಚಿತವಾಗಿ ನಮೂದಿಸ ಬೇಕು.

ಇವೆಲ್ಲ ವಿವರಗಳನ್ನೂ ಸರಿ ಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**



Edited and Published on behalf of T.T.Devasthanams by **Prof. K.Rajagopalan**, Phd., Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.



## 16-10-2020 ರಿಂದ 24-10-2020 ರ ವರೆಗೆ ನಡೆದ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವದ ದೃಶ್ಯಮಾಲಿಕೆ !

















SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams printing on 25-10-2020.
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

